ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 30 ಶುಕ್ರವಾರ 2022

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 253 | ಪುಟಗಳು: 12
ಸುದ್ದಿ ಮತ್ತು ಫೋಟೋಗೆ: news@mysurumithra.com   ಜಾಹೀರಾತು: ad@mysurumithra.com

75+ ವಿಶ್ವ ದರ್ಜೆಯ ಸೌಕರ್ಯಗಳು ಮತ್ತು 10,000 Sft ಅದ್ದೂರಿ ಕ್ಲಬ್ ಹೌಸ್ ಹೊಂದಿರುವ ಮೈಸೂರಿನ ಮೊದಲ ಐಷಾರಾಮಿ ಗೇಟೆಡ್ ಪ್ಲಾಟ್ ಸಮುದಾಯ







75+ ವರ್ಲ್ಡ್ ಕ್ಲಾಸ್ ಅಮೆನಿಟೀಸ್

ಝೋನ್ 01 - ಪ್ಲುಮೇರಿಯಾ ಪಾರ್ಕ್

01. ಪ್ಲುಮೇರಿಯಾ ಗ್ರೂವ್
02. ಮಲ್ಟಿಪರ್ಪಸ್ ಗ್ರೌಂಡ್
03. ರಿಫ್ರೆಶ್‌ಮೆಂಟ್ ಕಿಯೋಸ್ಕ್

ಝೋನ್ 02 - ಟ್ರ್ಯಾಂಕ್ವಿಲ್ ಪಾರ್ಕ್

04. ಮೆಡಿಟೇಶನ್ ಝೋನ್
05. ವಾಟರ್‌ಫ್ರಂಟ್ ವ್ಯೂ ಡೆಕ್
06. ಅರೋಮಾ ಗಾರ್ಡನ್
07. ಪೆಬಲ್ ಗಾರ್ಡನ್
08. ಸೀನಿಯರ್ ಸಿಟಿಝನ್ ಗೇಝೆಬೋ
09. ಸ್ವಿಂಗ್ ಪಾರ್ಕ್
10. ಪೆಟ್ ಝೋನ್
11. ಲಾಫಿಂಗ್ ಪಾರ್ಕ್
12. ಕಿಡ್ಸ್ ಸ್ಕೇಟಿಂಗ್ ಏರಿಯಾ
13. ಹರ್ಬಲ್ ಗಾರ್ಡನ್
14. ಗಾರ್ಡನ್ ವಾಕ್
15. ರೆಫ್ಲೆಕ್ಸಾಲಾಜಿ ಪಾಥ್

ಝೋನ್ 03 - ಕಿಡ್ಸ್ ಪಾರ್ಕ್

16. ಬ್ಯಾಡ್‌ಮಿಂಟನ್ ಕೋರ್ಟ್
17. ಬಾಸ್ಕೆಟ್‌ಬಾಲ್ ಪೋಸ್ಟ್
18. ಕಿಡ್ಸ್ ಪ್ಲೇ ಝೋನ್
19. ಟಾಡ್ಲರ್ಸ್ ಪ್ಲೇ ಝೋನ್
20. ಸ್ಯಾಂಡ್ ಪಿಟ್
21. ಔಟ್‌ಡೋರ್ ಟೇಬಲ್ ಟನಿಸ್
22. ವಾಲಿಬಾಲ್ ಕೋರ್ಟ್
23. ಗಾಗಾ ಪಿಟ್
24. ರೆಸ್ಟಿಂಗ್ ಪೆವಿಲಿಯನ್
25. ಸ್ಪ್ಲ್ಯಾಶ್ ಪಾಂಡ್ (ಕಿಡ್ಸ್)

ಝೋನ್ 04 - ಫಿಟ್ನೆಸ್ ಹಬ್

26. ಓಪನ್ ಜಿಮ್
27. ಔಟ್‌ಡೋರ್ ಏರೋಬಿಕ್ಸ್
28. ಸೆರೆನಿಟಿ ಫೌಂಟೇನ್
29. ಸ್ಕಲ್ಪ್ಚರ್ ಆಫ್ ಪೀಸ್
30. ಔಟ್‌ಡೋರ್ ಯೋಗಾ ಕಬಾನ

ಝೋನ್ 05 - ಲೀಝರ್ ಪಾರ್ಕ್

31. ಪಾರ್ಟಿ ಲಾನ್
32. ಬಿಬಿಕ್ಯೂ ಕಾರ್ನರ್
33. ಹಮ್ಮಾಕ್
34. ಬೋನ್ ಫಾಯರ್ ಪಿಟ್
35. ಲಾಂಜ್ ಡೆಕ್
36. ಡಿಜಿ ಕನ್ಸೋಲ್
37. ಕಿಡ್ಸ್ ಪೂಲ್
38. ಸ್ವಿಮ್ಮಿಂಗ್ ಪೂಲ್
39. ಪೂಲ್ ಡೆಕ್ ಅಲ್‌ಫ್ರೆಸ್ಕೋ
40. ಬಗಿ ಕಾರ್ ಸ್ಟೇಶನ್
41. ಔಟ್‌ಡೋರ್ ಕೆಫೆ ಕಿಯೋಸ್ಕ್

ಝೋನ್ 06 - ಅಡ್ವೆಂಚರ್ ಪಾರ್ಕ್

42. ಕ್ರಿಕೆಟ್ ನೆಟ್
43. ಔಟ್‌ಡೋರ್ ಕಿಡ್ಸ್ ಮೇಝ್
44. ಕಿಡ್ಸ್ ಪ್ಲೇ ಕ್ಯಾಸಲ್
45. ಕಿಡ್ಸ್ ರೋಪ್ ಬ್ರಿಜ್
46. ಕಿಡ್ಸ್ ರಾಕ್ ಕ್ಲೈಂಬಿಂಗ್ ವಾಲ್
47. ಸೈಕ್ಲಿಂಗ್ ಟ್ರ್ಯಾಕ್
48. ಕಿಡ್ಸ್ ಝಿಪ್ ಲೈನ್
49. ಟ್ರ್ಯಾಂಪೋಲೈನ್ ಪಾರ್ಕ್

ಕ್ಲಬ್‌ಹೌಸ್

50. ವೇಟಿಂಗ್ ಲಾಂಜ್
51. ಕೆಫೆಟೇರಿಯಾ
52. ಲಾಕರ್‌ಗಳೊಂದಿಗೆ ಚೇಂಜ್ ರೂಮ್‌ಗಳು
53. ಕನ್ವಿನಿಯೆನ್ಸ್ ಸ್ಟೋರ್
54. ಫಾರ್ಮಸಿ
55. ಹೆಲ್ತ್ ಕೇರ್
56. ಸೀನಿಯರ್ ಕಾರ್ನರ್ - ಆ್ಯಕ್ಯುಪ್ರೆಶರ್ ಏರಿಯಾ ಪಾಯಿಂಟ್
57. ಲಾಂಡ್ರೊಮ್ಯಾಟ್
58. ಬ್ಯೂಟಿ ಸಲೂನ್
59. ಕಿಡ್ಸ್ ಲೈಬ್ರರಿ
60. ಕಿಡ್ಸ್ ಡೇ ಕೇರ್ /ಕ್ರೇಶ್
61. ಇಂಡೋರ್ ಜಿಮ್
62. ಏರೋಬಿಕ್ಸ್
63. ಝುಂಬಾ ಫ್ಲೋರ್
64. ಸೌನಾ
65. ಸ್ಟೀಮ್
66. ಜಾಕುಝಿ
67. ಕಾನ್‌ಫರೆನ್ಸ್ /ಬೋರ್ಡ್ ರೂಮ್
68. ಗೆಸ್ಟ್ ಸೂಟ್ಸ್
69. ಮಿನಿ ಥಿಯೇಟರ್
70. ಬಾಂಕ್ವೆಟ್ ಹಾಲ್
71. ಇಂಡೋರ್ ಗೇಮ್ಸ್ (ಚೆಸ್ ಹಾಗೂ ಕ್ಯಾರಮ್)
72. ಬಿಲಿಯಾರ್ಡ್ಸ್
73. ಕಿಡ್ಸ್ ಅಮ್ಯೂಝ್‌ಮೆಂಟ್ ಆರ್ಕೇಡ್
74. ಬ್ಯಾಡ್‌ಮಿಂಟನ್
75. ಸ್ಕ್ವ್ಯಾಶ್ ಕೋರ್ಟ್ (ಮಿನಿ)
76. ಟೇಬಲ್ ಟೆನ್ನಿಸ್ (ಇಂಡೋರ್)

PRICE TABLE

Size Range (Sft.)	Neighbourhood Market Price (Bannimantap / SS Nagar)	G Square Price From 2nd Jan, 2023	G Square Price Till 1st Jan, 2023
800 - 1200	~~53L - 78L~~	~~43.20L - 64.80L~~	41.60L - 62.40L
1201 - 1900	~~80L - 1.20Cr~~	~~64.90L - 1.02Cr~~	62.45L - 98.80L
1901 - 3000	~~1.20Cr - 2.20Cr~~	~~1.02Cr - 1.62Cr~~	98.85L - 1.55Cr

LOCATION MAP



9743193000
www.gsquarehousing.com

G SQUARE BUILD ASSIST
A POST-PURCHASE GUIDANCE PROGRAM

G SQUARE GROUP
YOUR PLOT. YOUR HOME. YOUR WAY.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 30 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 253 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಎಲ್ಲಾ ಜಿಲ್ಲೆಗಳಲ್ಲೂ ಮಿನಿ ಫುಡ್‌ಪಾರ್ಕ್‌ಗೆ ಸರ್ಕಾರ ಚಿಂತನೆ ■ ಪುಟ–7

ಇಂದು ಮಂಡ್ಯಕ್ಕೆ ಅಮಿತ್ ಶಾ ಎಂಟ್ರಿ

● ಸ್ವಾಮಿ ಕಾರ್ಯದೊಂದಿಗೆ ಸ್ವಕಾರ್ಯ ಸಾಧನಾ ಕಾರ್ಯಕ್ಕೂ ಚಾಲನೆ ನೀಡಲಿರುವ ಚಾಣಕ್ಯ ● ಬೆಂಗಳೂರು ಸೇರಿ ಈ ಭಾಗದ 55 ಸ್ಥಾನ ಗೆಲ್ಲಲೇಬೇಕೆಂದು ಪಣ ● ಜೆಡಿಎಸ್, ಕಾಂಗ್ರೆಸ್ ಮಣಿಸಿ ಕಮಲ ಅರಳಿಸುವ ಕಾರ್ಯಕ್ಕೆ ರಣತಂತ್ರ

ಹಳೇ ಮೈಸೂರು ಭಾಗದಲ್ಲಿ ಕನಿಷ್ಠ 35 ಸ್ಥಾನ ಗೆಲ್ಲುವ ಲೆಕ್ಕಾಚಾರ



ಬೆಂಗಳೂರು, ಡಿ.29(ಕೆಎಂಶಿ)– ಕರ್ನಾಟಕದಲ್ಲಿ ಸ್ವಂತ ಬಲದ ಮೇಲೆ ಅಧಿಕಾರ ಹಿಡಿಯಲು ಹಳೇ ಮೈಸೂರು ಭಾಗದಲ್ಲಿ 35 ಸ್ಥಾನ ಗೆಲ್ಲಲೇಬೇಕೆಂಬ ಗುರಿಯೊಂದಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ನಾಳೆ (ಶುಕ್ರವಾರ) ಮಂಡ್ಯ ಜಿಲ್ಲೆ ಪ್ರವೇಶ ಮಾಡುತ್ತಿದ್ದಾರೆ.

ಬೆಂಗಳೂರು ನಗರ ಸೇರಿದಂತೆ ಹಳೇ ಮೈಸೂರು ಭಾಗದ 96 ಕ್ಷೇತ್ರಗಳಲ್ಲಿ ಕನಿಷ್ಠ 55 ಸ್ಥಾನಗಳನ್ನು ಗೆಲ್ಲಲೇಬೇಕು. ಈ ಭಾಗದಲ್ಲಿ ಇಷ್ಟು ಸ್ಥಾನಗಳನ್ನು ಗೆದ್ದರೆ ಮಾತ್ರ ಮುಂಬರುವ 2023ರ ವಿಧಾನಸಭಾ ಚುನಾವಣೆಯಲ್ಲಿ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರಲು ಸಾಧ್ಯ ಎಂಬ ಚುನಾವಣಾ ಪೂರ್ವ ಸಮೀಕ್ಷೆ ವರದಿಗಳನ್ನು ಆಧಾರವಾಗಿಟ್ಟುಕೊಂಡು ಬಿಜೆಪಿ ವರಿಷ್ಠರು ಈ ಭಾಗದಲ್ಲಿ ಸಂಘಟನೆಗೆ ಒತ್ತು ನೀಡುತ್ತಿದ್ದಾರೆ. ಕಳೆದ 2 ಚುನಾವಣೆಗಳಲ್ಲೂ 30–35ರವರೆಗೆ ಮಾತ್ರ ಸ್ಥಾನಗಳನ್ನು ಈ ಭಾಗದಲ್ಲಿ ಬಿಜೆಪಿ ಗೆದ್ದಿದೆ. ಶೇ.60ರಷ್ಟು ಸೀಟುಗಳನ್ನು ಪಕ್ಷ ಗೆಲ್ಲದಿದ್ದರಿಂದ ▶ 7ನೇ ಪುಟಕ್ಕೆ

ಸಕ್ಕರೆ ನಾಡು ಕೇಸರಿಮಯ

ಮಂಡ್ಯ,ಡಿ.29(ಮೋಹನ್‌ರಾಜ್)– ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಮಂಡ್ಯಕ್ಕೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಸಕ್ಕರೆ ನಾಡು ಮಂಡ್ಯ ಸಂಪೂರ್ಣ ಕೇಸರಿಮಯವಾಗಿದೆ. ನಗರದಾದ್ಯಂತ ಕಮಲ ಕಲಿಗಳ ಫ್ಲೆಕ್ಸ್‌ಗಳು ರಾರಾಜಿಸುತ್ತಿವೆ. ಮತ್ತೊಂದೆಡೆ ಭದ್ರತೆಗಾಗಿ ಖಾಕಿ ಕೋಟೆಯೇ ನಿರ್ಮಾಣವಾಗಿದ್ದು, ಶಾ ಆಗಮನಕ್ಕೆ ಕ್ಷಣಗಣನೆ ಆರಂಭವಾಗಿದೆ. ▶ 9ನೇ ಪುಟಕ್ಕೆ



ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಅಂಬರೀಷ್ ಪುತ್ರ ಅಭಿಷೇಕ್‌ಗೌಡ ಕಣಕ್ಕಿಳಿಸಲು ಸಿದ್ದರಾಮಯ್ಯ ತಂತ್ರಗಾರಿಕೆ

ಬೆಂಗಳೂರು, ಡಿ.29(ಕೆಎಂಶಿ)–



ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಹಾಲಿ ಶಾಸಕ ಜಿ.ಟಿ.ದೇವೇಗೌಡರ ಮುಂದೆ ದಿ. ನಟ ಅಂಬರೀಷ್ ಅವರ ಪುತ್ರ ಅಭಿಷೇಕ್‌ಗೌಡ ಅವರನ್ನು ಮುಂದಿನ ಚುನಾವಣೆಯಲ್ಲಿ ಕಣಕ್ಕಿಳಿಸಲು ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಮುಂದಾಗಿದ್ದಾರೆ. ಈ ಸಂಬಂಧ ಮಂಡ್ಯ ಸಂಸದೆ ಹಾಗೂ ಅಭಿಷೇಕ್‌ಗೌಡರ ತಾಯಿ ಸುಮಲತಾ ಅಂಬರೀಷ್ ಅವರೊಟ್ಟಿಗೆ ಚರ್ಚೆ ಮಾಡಿದ್ದಾರೆ ಎಂದು ಹೇಳಲಾಗಿದೆ ಆದರೆ ಸುಮಲತಾ ಅವರು ಪುತ್ರನ್ನು ಚಾಮುಂಡೇಶ್ವರಿಯಲ್ಲಿ ಕಣಕ್ಕಿಳಿಸುವ ಬಗ್ಗೆ ಇದುವರೆಗೂ ಯಾವುದೇ ತೀರ್ಮಾನ ಕೈಗೊಂಡಿಲ್ಲ. ▶ 9ನೇ ಪುಟಕ್ಕೆ

ಚೀಸೋ ದೊಣ್ಣೆಯಿಂದ ಸರ್ಕಾರ ಪಾರಾಗುವ ಪ್ರಯಾಸ...!

ಒಕ್ಕಲಿಗರಿಗೆ 2ಸಿ, ಲಿಂಗಾಯತರಿಗೆ 2ಡಿ ಹೊಸ ಪ್ರವರ್ಗ ಸೃಷ್ಟಿ: ಸಂಪುಟ ನಿರ್ಧಾರ

ಬೆಳಗಾವಿ, ಡಿ.29–ರಾಜ್ಯದ ಪ್ರಬಲ ಸಮುದಾಯಗಳಾದ ಲಿಂಗಾಯತರು ಮತ್ತು ಒಕ್ಕಲಿಗರ ಒತ್ತಡಕ್ಕೆ ಕೊನೆಗೂ ಮಣಿದ ಸರ್ಕಾರ ಬೆಳಗಾವಿ ಚಳಿಗಾಲ ಅಧಿವೇಶನದ ಕೊನೆಯ ದಿನವಾದ ಗುರುವಾರ ಲಿಂಗಾಯತರಿಗೆ 2–ಡಿ ಮತ್ತು ಒಕ್ಕಲಿಗರಿಗೆ 2–ಸಿ ಪ್ರವರ್ಗಗಳನ್ನು ಹೊಸದಾಗಿ ಸೃಷ್ಟಿಸಲು ನಿರ್ಧಾರ ಕೈಗೊಂಡಿದೆ.



ಬೆಳಗಾವಿಯ ಸುವರ್ಣ ಸೌಧದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಕಳೆದ ವಾರ ಮಾಜಿ ಸಚಿವರೂ ಆದ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯ ಪ್ರಕಾಶ್ ಹೆಗ್ಡೆ ಅವರು ಸರ್ಕಾರಕ್ಕೆ ಸಲ್ಲಿಸಿದ್ದ ಮಧ್ಯಂತರ ವರದಿಯನ್ನು ಆಧರಿಸಿ ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯಗಳಿಗೆ ಪ್ರತ್ಯೇಕ ಪ್ರವರ್ಗಗಳನ್ನು (ಕೆಟಗರಿಗಳು) ರಚಿಸುವ ನಿರ್ಧಾರ ಕೈಗೊಂಡಿದ್ದು, ಮೀಸಲಾತಿ ಪ್ರಮಾಣದ ಬಗ್ಗೆ ಯಾವುದೇ ನಿರ್ಧಾರ ಕೈಗೊಳ್ಳದೇ ಹಿಂದುಳಿದ ವರ್ಗಗಳ ಆಯೋಗದ ಅಂತಿಮ ವರದಿ ಬಂದ ನಂತರ ಮೀಸಲಾತಿ ಪ್ರಮಾಣ ಕುರಿತು ನಿರ್ಧರಿಸಲು ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಯಿತು. ಪಂಚಮಸಾಲಿ ಸಮುದಾಯವು 2–ಎ ಮೀಸಲಾತಿಗಾಗಿ ಕೂಡಲಸಂಗಮದ ಬಸವ ಪೀಠದ ಜಯಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಭಾರೀ ಹೋರಾಟ ನಡೆಸುತ್ತಾ ಬಂದಿದೆ. ಮೀಸಲಾತಿ ನೀಡಲು ಸ್ವಾಮೀಜಿ ಅವರು ಸರ್ಕಾರಕ್ಕೆ ಡಿ.29 (ಇಂದು) ಗಡುವು ನೀಡಿದ್ದರು. ಆದರೆ ಪಂಚಮಸಾಲಿ



ಸಮುದಾಯವು ಹೊಸದಾಗಿ ರಚಿಸಲ್ಪಡುವ 2–ಡಿ ಪ್ರವರ್ಗದಲ್ಲಿ ಇತರ ವೀರಶೈವ ಲಿಂಗಾಯತ ಸಮುದಾಯಗಳೊಟ್ಟಿಗೆ ಮೀಸಲಾತಿ ಪಡೆಯಬೇಕಾಗುತ್ತದೆಯೇ ಹೊರತು, ಪಂಚಮಸಾಲಿಗಳಿಗಾಗಿ ಪ್ರತ್ಯೇಕ ಮೀಸಲಾತಿ ಇರುವುದಿಲ್ಲ. ಲಿಂಗಾಯತ ಸಮುದಾಯವು ಹಾಲಿ 3–ಎ ಪ್ರವರ್ಗದಲ್ಲಿದ್ದು, ಇತರ ಸಮುದಾಯಗಳೊಂದಿಗೆ ಸೇರಿ ಶೇ.5ರಷ್ಟು ಮೀಸಲಾತಿ ಪಡೆಯುತ್ತಿತ್ತು. ಅದೇ ರೀತಿ 3–ಬಿ ಪ್ರವರ್ಗದಲ್ಲಿರುವ ಒಕ್ಕಲಿಗ ಸಮುದಾಯ ಇತರ ಸಮುದಾಯಗಳೊಂದಿಗೆ ಸೇರಿ ಶೇ.4ರಷ್ಟು ▶ 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ತಂದೆ : (ಮನೆಯಲ್ಲಿ ಒಂಟಿ ಕಾಲಿನಲ್ಲಿ ನಿಂತಿದ್ದ ಮಗನನ್ನು ನೋಡಿ): ಯಾಕೋ ಪಾಪು ಹಾಗೆ ನಿಂತಿದ್ದೀಯಾ?

ಮಗ : ನೀವೇ ಹೇಳಿದಿರಲ್ಲಪ್ಪ, ಸ್ಕೂಲಿನಲ್ಲಿ ಮಾಡಿದ್ದನ್ನು ಮನೆಯಲ್ಲೂ ಮಾಡು ಅಂತ!

ಮೈಸೂರು ಮಿತ್ರ

ಶುಕ್ರವಾರ, 30 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ನೀವು ಎಲ್ಲೆಲ್ಲಿ ಎಷ್ಟರ ಮಟ್ಟಿಗೆ ಅರಿವಿಲ್ಲದೆ ಇರುವಿರೋ ಅಲ್ಲಿ ಆ ಮಟ್ಟದ ಯಾತನೆಗೊಳಪಡುತ್ತೀರಿ –ಜಗ್ಗಿ ವಾಸುದೇವ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದೋಷ ಮಾಡಿದವನಿಗೆ ದೂಷಣೆ ತಪ್ಪದು

ನಿಮ್ಮ ಪತ್ರಗಳು

ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ಬಿಡುಗಡೆಗೆ ವಿಳಂಬವೇಕೆ?

ಮಾನ್ಯರೆ,

ನಮ್ಮ ಸರ್ಕಾರದಿಂದ ಪ್ರತಿ ತಿಂಗಳು ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ಆರು ರೂಪಾಯಿ ಪ್ರೋತ್ಸಾಹ ಧನವನ್ನು ನೀಡುತ್ತಾ ಬರುತ್ತಿದೆ. ಆದರೆ ಸುಮಾರು ತಿಂಗಳಿಂದ ನಮಗೆ ಪ್ರೋತ್ಸಾಹ ಧನ (ನಮ್ಮ ಬ್ಯಾಂಕ್ ಖಾತೆಗೆ) ಬಂದಿಲ್ಲ. ಆದರೆ ಕೆಲವು ದಿನಗಳ ಹಿಂದೆ ಕೆಲವು ಹಾಲು ಉತ್ಪಾದಕರಿಗೆ ಮಾತ್ರವೇ ಬಂದಿರುತ್ತದೆ.

ಉದಾಹರಣೆಗೆ ನಮ್ಮ ಮಾವಿನಹಳ್ಳಿ ಗ್ರಾಮದ ಎಂಪಿಸಿಎಸ್‌ನಲ್ಲಿ 125 ಜನ ಹಾಲು ಉತ್ಪಾದಕರು ದಿನಂಪ್ರತಿ ಹಾಲು ಸರಬರಾಜು ಮಾಡುತ್ತಿದ್ದಾರೆ. ಈ ಪೈಕಿ ಕೇವಲ 30 ಮಂದಿ ರೈತರಿಗೆ ಪ್ರೋತ್ಸಾಹ ಧನ ಬಿಡುಗಡೆ ಮಾಡಲಾಗಿದೆ. ಅದೇ ರೀತಿ ಹಲವಾರು ಎಂಪಿಸಿಎಸ್‌ಗಳಿಗೂ ಈ ರೀತಿಯಾಗಿದೆ. ಇದರಿಂದ ನಮಗೆ ತುಂಬಾ ತೊಂದರೆಯಾಗಿದೆ. ತಕ್ಷಣ ಪ್ರೋತ್ಸಾಹ ಧನ ಬಿಡುಗಡೆ ಮಾಡಬೇಕು.

ಕೆಎಂಎಫ್‌ನಿಂದ ದರ ಹೆಚ್ಚಳ ಮಾಡುವ ಮೊದಲೇ ಪಶು ಆಹಾರ ನೂರಾರು ರೂಪಾಯಿಗಳಷ್ಟು ಏರಿಕೆಯಾಗಿದೆ. ನಮ್ಮ ಮೈಸೂರು ಫ್ಯಾಕ್ಟರಿಗಳಲ್ಲಿ ಪ್ರತಿ 45 ಕೆಜಿ ರವೆ ಬೂಸಾಕ್ಕೆ 980 ರೂ.ಗಳಿದ್ದು ಈಗ 1,140 ರೂ.ಗಳಿಗೆ ಏರಿಕೆಯಾಗಿದೆ. ಇದರಿಂದ ಹಾಲು ಉತ್ಪಾದಕರಿಗೆ ತುಂಬಾ ತೊಂದರೆಯಾಗುತ್ತಿದೆ. ಹಾಗಾಗಿ ನಮ್ಮ ಕೆಎಂಎಫ್ ಹಾಗೂ ಸರ್ಕಾರ ಪ್ರತಿ ಲೀಟರ್‌ಗೆ 40 ರೂ.ಗಳನ್ನು ಕೊಡಬೇಕು ಹಾಗೂ ಪ್ರತಿ ಲೀಟರ್‌ಗೆ ಪ್ರೋತ್ಸಾಹ ಧನವಾಗಿ 10 ರೂ.ಗಳನ್ನು ಕೊಡಬೇಕೆಂದು ಈ ಮೂಲಕ ಮನವಿ.

– ಎಸ್. ಸುಮಿತ್ರಾ, ಮಾವಿನಹಳ್ಳಿ, ಮೈಸೂರು ತಾ.

ಈ ಮಾರ್ಗದಲ್ಲಿ ಬಸ್‌ಗಳು ಸಂಚರಿಸಲಿ

ಮಾನ್ಯರೆ,

ಈ ಹಿಂದೆ ರೂಟ್ ನಂ. 30ಎ ಬಸ್ಸು ಸಿಬಿಎಸ್–ಕೆ.ಆರ್.ಎಸ್. ದಾಸಪ್ಪ ವೃತ್ತ, ಒಂಟಿಕೊಪ್ಪಲು, ಹಿನಕಲ್, ಹೂಟಗಳ್ಳಿ, ಕೂರ್ಗಳ್ಳಿ, ಬಿಇಎಂಎಲ್ ಕಾರ್ಖಾನೆ ಮಾರ್ಗವಾಗಿ ಕೆಆರ್‌ಎಸ್‌ಗೆ ಸಂಚರಿಸುತ್ತಿತ್ತು. ಇದರಿಂದ ಕಾರ್ಮಿಕರಿಗೆ, ವಿದ್ಯಾರ್ಥಿಗಳಿಗೆ, ಹಿರಿಯ ನಾಗರಿಕರಿಗೆ ಅನುಕೂಲವಾಗುತ್ತಿತ್ತು. ಈಗ ಈ ಬಸ್ ಮಾರ್ಗಗಳು ರದ್ದಾಗಿದೆ. ಇದರಿಂದ ಅವಲಂಬಿತ ಪ್ರಯಾಣಿಕರಿಗೆ ತೊಂದರೆಯಾಗುತ್ತಿದೆ. ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳು ಈ ಮಾರ್ಗದಲ್ಲಿ ಕಡೇ ಪಕ್ಷ ಗಂಟೆಗೆ ಒಂದು ಬಸ್ ಸಂಚರಿಸುವಂತೆ ಮಾಡಬೇಕೆಂದು ಮನವಿ.

– ನೊಂದ ಪ್ರಯಾಣಿಕರು, ಮೈಸೂರು.

ಸರ್ಕಾರಿ ಹುದ್ದೆ ನೇಮಕಾತಿ; ಉಳಿದ ರಾಜ್ಯಗಳಂತೆ ವಯೋಮಿತಿ ಹೆಚ್ಚಳವಾಗಲಿ

ಮಾನ್ಯರೆ,

ಮಾರಣಾಂತಿಕ ಕಾಯಿಲೆ ಕೋವಿಡ್ 2020 ಮತ್ತು 2021 ರಲ್ಲಿ ಅಪ್ಪಳಿಸಿದ ಪರಿಣಾಮ ಸರ್ಕಾರವು ಈ ಎರಡು ವರ್ಷಗಳಲ್ಲಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಿರುವುದು ಬೆರಳೆಣಿಕೆಯಷ್ಟು ಕಂಡು ಬಂದಿಲ್ಲ! ಕಳೆದ ನಾಲ್ಕು– ಐದು ವರ್ಷಗಳಿಂದ ನಿರೀಕ್ಷಿತ ಪ್ರಮಾಣದಲ್ಲಿ ಸರ್ಕಾರಿ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳದ ಕಾರಣ ನಿರುದ್ಯೋಗ ಪ್ರಮಾಣವು ಏರಿಕೆ ಆಗಿದ್ದು ಅಸಂಖ್ಯಾತ ಸ್ಪರ್ಧಾಕಾಂಕ್ಷಿಗಳ ನಿಗದಿತ ವಯಸ್ಸು ಮೀರಿ ತೀರಾ ಸಂಕಷ್ಟವಾಗಿದೆ. ಸದ್ಯ, ರಾಜ್ಯದಲ್ಲಿ ಸರ್ಕಾರಿ ಉದ್ಯೋಗ ಪಡೆಯಲು ಸಾಮಾನ್ಯ ವರ್ಗದವರಿಗೆ 35. ಒಬಿಸಿಗಳಿಗೆ 38 ಮತ್ತು ಎಸ್ಸಿ–ಎಸ್ಟಿಗಳಿಗೆ 40 ವರ್ಷಗಳವರೆಗೆ ವಯಸ್ಸಿನ ಮಿತಿ ನಿಗದಿಪಡಿಸಲಾಗಿದೆ. ನೆರೆಯ ತಮಿಳುನಾಡು, ಆಂಧ್ರ ಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ದೇಶದ ಬಹುತೇಕ ರಾಜ್ಯಗಳಲ್ಲಿ ಸರ್ಕಾರಿ ಹುದ್ದೆ ಪಡೆಯಲು ಮಾನದಂಡದ ವಯೋಮಿತಿಯು ಕರ್ನಾಟಕದ ಜೊತೆ ಹೋಲಿಸಿದರೆ ಅಜಗಜಾಂತರ ವ್ಯತ್ಯಾಸ ಕಂಡುಬರುತ್ತದೆ. ಈ ವಿಷಯ ಸಂಬಂಧ ಅನ್ಯ ರಾಜ್ಯಗಳ ಮಾದರಿ ಅನುಸರಿಸಿ ರಾಜ್ಯದಲ್ಲೂ ಕೂಡ ವಯಸ್ಸಿನ ಮಿತಿ ಹೆಚ್ಚಿಸಬಹುದಲ್ಲವೇ? ಈ ವಿಷಯವಾಗಿ ಆಳ್ವಿಕೆ ನಡೆಸುವ ನಾಯಕರು ಜವಾಬ್ದಾರಿ ಅರಿತು ವಯಸ್ಸಿನ ಮಿತಿ ಸಡಿಲಗೊಳಿಸಲಿ. ಸರ್ಕಾರಿ ಉದ್ಯೋಗ ದೊರೆತರೆ ಜೀವನದ ಭದ್ರತೆ ಸಿಕ್ಕಂತೆ ಎಂದು ಕಠಿಣ ಪರಿಶ್ರಮ ಪಡುವ ಲಕ್ಷಾಂತರ ಆಕಾಂಕ್ಷಿಗಳು ಹಾಗೂ ವಯಸ್ಸು ಮೀರಿ ಅವಕಾಶ ವಂಚಿತರಾಗಿರುವವರ ಸಹಸ್ರ ಸಂಖ್ಯೆಯ ಅಭ್ಯರ್ಥಿಗಳ ಹಿತದೃಷ್ಟಿಯಿಂದ ರಾಜ್ಯದಲ್ಲಿನ ವಿವಿಧ ಇಲಾಖೆಗಳ ಪ್ರತಿಯೊಂದು ವೃಂದಗಳ ವಯಸ್ಸಿನ ಮಿತಿಯನ್ನು ಉಳಿದ ರಾಜ್ಯಗಳಂತೆ ಹೆಚ್ಚಳ ಮಾಡಲು ಸಿಎಂ ಬಸವರಾಜ ಬೊಮ್ಮಾಯಿ ಹಾಗೂ ಅವರ ಸಚಿವ ಸಂಪುಟ ಸಂಬಂಧಪಟ್ಟ ಕೆಪಿಎಸ್ಸಿ ಆಯೋಗ ಶೀಘ್ರ ನಿರ್ಧರಿಸಲಿ. ಈ ಸಮಯ ಅತ್ಯಂತ ಹೆಚ್ಚು ಗಂಭೀರವಾಗಿದೆ.

–ಅನಿಲ್ ಕುಮಾರ್, ನಂಜನಗೂಡು..

ನಮ್ಮ ನಡೆ ಜವಾಬ್ದಾರಿಯುತವಾಗಿರಲಿ

ಮಾನ್ಯರೆ,

ಕೊರೊನಾ ರಿ ಎಂಟ್ರಿ ಎಂಬ ವಿಷಯ ಕೇಳಿದ ಎಲ್ಲರಿಗೂ ಆತಂಕ ಹೆಚ್ಚಾಗಿದೆ. ಕೊರೊನಾದ ನಿಯಮವನ್ನು ನಿಮಗೆ ಹೇಳಬೇಕಾಗಿಲ್ಲ. ನಿಮಗೆಲ್ಲಾ ಇದರ ಅರಿವಿದೆ. ಶುಚಿತ್ವದ ಪಾಠವನ್ನು ಕಲಿತಿದ್ದೇವೆ. ಕೊರೊನಾ ಎಂಬ ಖಾಯಿಲೆಯ ಕರಿನೆರಳು ಬೀಳದ ಹಾಗೆ ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕಾಗಿದೆ. ಪ್ರತಿಯೊಬ್ಬರ ನಡುವೆ ಜವಾಬ್ದಾರಿಯುತವಾಗಿರಬೇಕು. ಹಿಂದೆ ಲಸಿಕೆ ಪಡೆದವರಲ್ಲಿ ಅನೇಕರು ಮೂಢನಂಬಿಕೆಯಿಂದ ಲಸಿಕೆ ಪಡೆದಿರಲಿಲ್ಲ. ಲಸಿಕೆ ಕೊಡಲು ಬಂದವರನ್ನು ಸತಾಯಿಸಿ ಅವರೊಂದಿಗೆ ಜಗಳ ತೆಗೆದು ಚಾವಣಿ ಮೇಲೆ ಹೋಗಿದ್ದು ಉಂಟು. ಅಂದು ಅನೇಕ ಜನರು ಮರಣ ಹೊಂದಿದರು. ಇದಕ್ಕೆಲ್ಲಾ ಲಸಿಕೆಯೇ ಕಾರಣ ಎಂಬ ವಾದ ಅವರದ್ದಾಗಿತ್ತು. ಇಂತಹ ಮುಗ್ಧ ಜನರಿಗೆ ಅರ್ಥವಾಗುವ ಹಾಗೆ ಪ್ರತಿಯೊಬ್ಬರೂ ತಿಳಿಸಬೇಕು. 60 ರ ನಂತರ ಬೂಸ್ಟರ್ ಡೋಸ್ ಪಡೆಯದೇ ಹೋದರೆ ಈಗಾಗಲೇ ನಿಶ್ಶಕ್ತಿಯಿಂದ ಕೂಡಿದ ದೇಹವನ್ನು ಕೊರೊನಾ ಆಕ್ರಮಿಸಿ ನಿಮಗೆ ಅನೇಕ ತೊಂದರೆಗಳು ಎದುರಾಗಬಹುದು ಎಂಬ ವಿಷಯವನ್ನು ಮನದಟ್ಟು ಮಾಡಬೇಕು. ಈಗ ಲಸಿಕೆಯನ್ನು ಮೂಗಿನ ಮೂಲಕವು ನೀಡುತ್ತಿದ್ದಾರೆ. ಇದರ ಅರಿವು ಅವರಿಗಿರಬೇಕು. ಒಬ್ಬರಿಗೆ ಈ ಕೊರೊನಾ ಖಾಯಿಲೆ ಕಾಣಿಸಿಕೊಂಡರೆ ಸಾಂಕ್ರಾಮಿಕವಾಗಿ ಹರಡಬಹುದು. ಇದು ನಿಮ್ಮ ಮನೆ, ಕುಟುಂಬದ ರಕ್ಷಣೆ ಬಗ್ಗೆ ಎಚ್ಚರಿಕೆ ಅಗತ್ಯ. ಕೊರೊನಾ ವಿಷಯದ ಬಗ್ಗೆ ರಾಜಕೀಯ ಬೇಡ. ಅಂತರಾಷ್ಟ್ರೀಯ ವಿಮಾನ ಸಂಚಾರ ತಡೆ ಹಿಡಿಯಿರಿ. ಈ ಖಾಯಿಲೆ ಹೆಚ್ಚಾಗಲು ಇದು ಒಂದು ಕಾರಣವಾಗಬಹುದು. ವೈದ್ಯರು ನಿಸ್ವಾರ್ಥ ಸೇವೆ ನೀಡಲಿ. ಹಣ ಮಾಡುವ ಸಮಯವಲ್ಲ. ಊಹಾಪೋಹಗಳಿಗೆ ಕಿವಿ ಕೊಡಬೇಡಿ. ಪ್ರತ್ಯಕ್ಷವಾಗಿ ನೋಡಿದರು ಪ್ರಮಾಣಿಸಿ ನೋಡಿ

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.



ಗ.ನಾ ಭಟ್ಟ
ಸಂಸ್ಕೃತ ವಿದ್ವಾಂಸ
ಮೊ : 9019376365

ಸತ್ಯ ನಿತ್ಯ

ಧರ್ಮ ರಕ್ಷಣೆಗೆ ಯುದ್ಧ ಮಾಡುವುದು ಧರ್ಮ ಮಾರ್ಗವೇ...

ಧರ್ಮವು ದುರ್ವಿಜ್ಞೇಯ– ಅಂದರೆ ಅದು ತಿಳಿಯಲು ಕಷ್ಟಕರವಾದುದು. ಸಮಯ, ಸಂದರ್ಭ ನೋಡಿಯೇ ಅದನ್ನು ನಿರ್ಣಯಿಸಬೇಕಾಗುತ್ತದೆ. ಎರಡು ನ್ಯಾಯಗಳು ಇಲ್ಲವೆ ಎರಡು ಧರ್ಮಗಳು ಅನ್ಯೋನ್ಯ ವಿರುದ್ಧಗಳೆಂದು ತೋರಿದಾಗ ಯಾವುದು ಹೆಚ್ಚಿನದು, ಯಾವುದು ಕಡಿಮೆಯದು ಅಥವಾ ಯಾವುದು ಮುಖ್ಯ, ಯಾವುದು ಅಮುಖ್ಯ ಎಂದು ತೀರ್ಮಾನಿಸಬೇಕಾಗುತ್ತದೆ. ಅಲ್ಲಿಯೇ ಧರ್ಮಸೂಕ್ಷ್ಮದ ಪ್ರಶ್ನೆಯೇಳುವುದು. ಅಲ್ಲಿಯೇ ವಿವೇಕ ಜಾಗರೂಕತೆ ಅವಶ್ಯವಾದುದು. ಒಂದು ದೊಡ್ಡ ನ್ಯಾಯವನ್ನು ಕಾಪಾಡುವುದಕ್ಕಾಗಿ ಒಂದು ಸಣ್ಣ ನ್ಯಾಯವನ್ನು ಬಿಡಬೇಕಾದೀತು! ಒಂದು ದೊಡ್ಡ ಧರ್ಮದ ದೃಷ್ಟಿಯಿಂದ ಒಂದು ಸಣ್ಣ ಅಧರ್ಮವನ್ನು ಸಹಿಸಿಕೊಳ್ಳಬೇಕಾದೀತು! ಸುಳ್ಳೂ ಧರ್ಮವಾಗುವುದು, ಸತ್ಯವೂ ಅಧರ್ಮವಾಗುವುದು ಯಾವಾವಾಗ, ಹಿಂಸೆಯೂ ಧರ್ಮವಾಗುವ, ಅಹಿಂಸೆಯೂ ಅಧರ್ಮವಾಗುವ ಸಂದರ್ಭ ಯಾವುದು ಎಂಬಿತ್ಯಾದಿಗಳ ಬಗ್ಗೆ ನಮ್ಮ ಪುರಾಣೇತಿಹಾಸಕಾವ್ಯಗಳಲ್ಲಿ ಉದಾಹರಣೆಗಳು ದಂಡಿಯಾಗಿ ಸಿಗುತ್ತವೆ. ಯಾವ ಯಾವ ಸಂದರ್ಭದಲ್ಲಿ ಸುಳ್ಳನ್ನು ಹೇಳಬಹುದು, ಹಾಗೆ ಹೇಳಿದ ಸುಳ್ಳು ಹೇಗೆ ಧರ್ಮವಾಗಿ ಪರಿಣಾಮಗೊಳ್ಳುತ್ತದೆ, ಅಂಥಾಹದ್ದು ಹೇಗೆ ನಿಂದನೀಯವಾಗುವುದಿಲ್ಲ ಅನ್ನುವುದಕ್ಕೆ ಶ್ರೀಮದ್ಭಾಗವತದ ಎಂಟನೇ ಸ್ಕಂಧದದಲ್ಲಿ ಒಂದು ಉದಾಹರಣೆ ನೋಡಬಹುದು.

ಸ್ತ್ರೀಷು ನರ್ಮವಿವಾಹೇ ಚ ವೃತ್ಯರ್ಥೇ ಪ್ರಾಣಸಂಕಟೇ ।
ಗೋಬ್ರಾಹ್ಮಣಾರ್ಥೇ ಹಿಂಸಾಯಾಂ ನಾನೃತಂ ಸ್ಯಾಜುಗುಪ್ಸಿತಮ್ ॥
(19ನೇ ಅಧ್ಯಾಯ:–43ನೇ ಶ್ಲೋಕ)

'ಸ್ತ್ರೀಯರನ್ನು ಪ್ರಸನ್ನಗೊಳಿಸುವುದಕ್ಕಾಗಿ, ಪರಿಹಾಸ್ಯ ಮಾಡುವಾಗ, ಮದುವೆಯ ವಿಷಯದಲ್ಲಿ, ತನ್ನ ಜೀವನದ ರಕ್ಷಣೆಗಾಗಿ, ಪ್ರಾಣಸಂಕಟವು ಸನ್ನಿಹಿತವಾದಾಗ, ಗೋಬ್ರಾಹ್ಮಣರ ಹಿತಕ್ಕಾಗಿ ಅಥವಾ ಯಾರನ್ನಾದರೂ ಮೃತ್ಯುವಿನಿಂದ ಕಾಪಾಡುವುದಕ್ಕಾಗಿ– ಅಂತಹ ಸಂದರ್ಭ ಬಂದರೆ ಖಂಡಿತಕ್ಕೂ ಸುಳ್ಳನ್ನು ಹೇಳಬಹುದು. ಅದು ತಪ್ಪಾಗುವುದಿಲ್ಲ. ಬದಲಿಗೆ ಧರ್ಮವೇ ಆಗುತ್ತದೆ' ಎಂದು ಶುಕ್ರ ಬಲಿಗೆ ಹೇಳುವ ಸಂದರ್ಭದಲ್ಲಿ ಬಂದ ಮಾತಿದು. ಬಲಿ ಚಕ್ರವರ್ತಿ 'ವಾಮನನಿಗೆ ಮೂರು ಪಾದಗಳ ಪರಿಮಿತಿಯ ಭೂಮಿಯನ್ನು ಕೊಡುವುದಾಗಿ ಮಾತು ಕೊಟ್ಟಿದ್ದ. ಅದಕ್ಕೆ ಶುಕ್ರಾಚಾರ್ಯ ತಡೆಯೊಡ್ಡಿದಾಗ ಬಲಿ ಚಕ್ರವರ್ತಿ 'ಮಾತು ಕೊಟ್ಟು, ಈಗ ಅವನಿಗೆ ಭೂಮಿ ಕೊಡುವುದಿಲ್ಲ ಅಂತ ಹೇಳಿ ಸುಳ್ಳುಗಾರ ಆಗಲಾರೆ' ಎಂದು ಶುಕ್ರಚಾರ್ಯರ ಬಳಿ ಪ್ರತಿಪಾದಿಸಿದಾಗ ಶುಕ್ರ ಈ ಮಾತನ್ನು ಹೇಳುತ್ತಾನೆ. 'ಬಂದವನು ಮಹಾವಿಷ್ಣು, ಆತ ಮೋಸಗಾರ. ಮೂರು ಹೆಜ್ಜೆಗಳ ಗಾತ್ರದ ಭೂಮಿ ಕೇಳಿ ಮೂರು ಲೋಕವನ್ನೂ ಅಳೆದು ನಿನ್ನನ್ನು ನಿಗ್ರಹಿಸುತ್ತಾನೆ. ಅವನಿಗೆ ಅವನು ಕೇಳಿದಷ್ಟು ಭೂಮಿಯನ್ನು ಕೊಡಬೇಡ. ಇದು ನಿನಗೆ ಮೃತ್ಯು ಸನ್ನಿಹಿತವಾದ ಕಾಲ, ಪ್ರಾಣ ಸಂಕಟದ ಕಾಲ. ಇಂತಹ ಸಂದರ್ಭದಲ್ಲಿ ಸುಳ್ಳನ್ನು ಹೇಳಿದರೆ ತಪ್ಪಾಗುವುದಿಲ್ಲ, ಅಧರ್ಮವಾಗುವುದಿಲ್ಲ' ಎಂದು ಬಲಿಯನ್ನು ಎಚ್ಚರಿಸುತ್ತಾನೆ. ಆ ಸಂದರ್ಭದಲ್ಲಿ ಬಂದ ಮಾತಿದು. ಸುಳ್ಳೂ ಧರ್ಮವಾಗುವ ಪರಿ ಇದು!

ನಮ್ಮಲ್ಲಿ ಬಹಳ ಮಂದಿಗೆ ಹಿಂದೂಗಳ 'ಧರ್ಮಸೂಕ್ಷ್ಮ' ಗೊತ್ತೇ ಆಗುವುದಿಲ್ಲ. ಅಂದು ಅನುಷ್ಠಾನಕ್ಕೆ ತಂದಿದ್ದ **'ಅಹಿಂಸಾ ಪರಮೋ ಧರ್ಮಃ'–'ಅಹಿಂಸೆಯೇ ಶ್ರೇಷ್ಠವಾದ ಧರ್ಮ'** ಎಂಬುದನ್ನು ಬಹಳ ಮಂದಿ ಜಪಿಸುತ್ತಿರುತ್ತಾರೆ. ಅಂತಹವರು ಅದೇ ಶ್ಲೋಕದ ಮುಂದಿನ ಚರಣದಲಿದ್ದ **'ಧರ್ಮ ಹಿಂಸಾ ತಥೈವ ಚ'– 'ಧರ್ಮಕ್ಕೆ ಬದ್ಧವಾದ ಹಿಂಸೆಯನ್ನು ಮಾಡು'** ಎಂಬ ಮಾತನ್ನು ಮರೆತುಬಿಡುತ್ತಾರೆ. ಇಂಥಾದ್ದು ಹಿಂದೂ ಸಂಸ್ಕೃತಿಯ, ಹಿಂದೂ ಧರ್ಮದ ದುರ್ದೈವ.

'ಸತ್ಯಂ ವದ', 'ಧಮಂ ಚರ'– 'ಸತ್ಯವನ್ನೇ ಹೇಳು', 'ಧರ್ಮವನ್ನೇ ಆಚರಿಸು' ಎಂಬುದು ಉಪನಿಷದ್ವಾಕ್ಯ. ಆದರೆ ಇಂತಹ ವಿಧಿವಾಕ್ಯಗಳಿಗೇ ಗಂಟುಬಿದ್ದು ಸದಾ ಸತ್ಯವನ್ನೇ ಹೇಳುವಂತಿಲ್ಲ. ಸಮಯ ಸಂದರ್ಭ ನೋಡಿ ವರ್ತಿಸಬೇಕಾಗುತ್ತದೆ. ಕೆಲವೊಮ್ಮೆ ಸತ್ಯವೂ ಅಧರ್ಮವಾಗಿ ಬಿಡುತ್ತದೆ. ಹೇಳಿದ ಮಾತು ಹೊರನೋಟದಲ್ಲಿ, ಮೇಲ್ನೋಟಕ್ಕೆ ಸತ್ಯವಾಗಿ ಕಾಣಬಹುದು. ಆದರೆ ಕಾರ್ಯ ಪರಿಣಾಮದಲ್ಲಿ ಅಧರ್ಮಹೇತುವಾಗಬಹುದು.

ಉದಾಹರಣೆಗೆ– ಒಂದು ಕಾಡಿನಲ್ಲಿ ಕೌಶಿಕನೆಂಬ ಋಷಿ ತಪಸ್ಸು ಮಾಡಿಕೊಂಡಿದ್ದ. ಅವನು ಸತ್ಯವಾದಿ. ಎಂತಹ ಸಂದರ್ಭದಲ್ಲೂ ಸುಳ್ಳನ್ನು ಹೇಳುತ್ತಿರಲಿಲ್ಲ. ಅದೊಂದು ದಿನ ಕೆಲವು ಪ್ರಯಾಣಿಕರು ಅವನ ಆಶ್ರಮದ ಮುಂದೆ ಓಡಿಹೋದರು. ಅವನು ಅದನ್ನು ಗಮನಿಸಿದ. ಸ್ವಲ್ಪ ಸಮಯದ ನಂತರ ಕೆಲವು ದರೋಡೆಕೋರರು ಅವನ ಬಳಿ ಬಂದು 'ಇಲ್ಲಿ ಯಾರಾದರೂ ಓಡಿ ಹೋದರಾ?' ಅಂತ ಕೇಳಿದರು. ಸತ್ಯಸಂಧನಾದ ಕೌಶಿಕ– 'ಹೌದು. ಅದೋ ಅಲ್ಲಿ ಕಾಣುತ್ತಿರುವ ಪೊದೆ–ತೋಪುಗಳ ಕಡೆಗೆ ಕೆಲವರು ಓಡಿಹೋದರು' ಅಂತ ಹೇಳಿದ. ದಸ್ಯುಗಳು, ಕೌಶಿಕನು ಹೇಳಿದ ದಾರಿಯನ್ನು ಅನುಸರಿಸಿ ಹೋಗಿ ಆ ನಿರಪರಾಧಿ ಪ್ರಯಾಣಿಕರನ್ನು ಹಿಡಿದು–ಬಡಿದು ಅವರಲ್ಲಿರುವ ವಸ್ತುಗಳನ್ನು ದೋಚಿಕೊಂಡು ತಮ್ಮ ಇಷ್ಟವನ್ನು ನೆರವೇರಿಸಿಕೊಂಡರು.



ಕೌಶಿಕ ನುಡಿದ ಸತ್ಯವಾಕ್ಯದ ಫಲ ಏನಾಯಿತು? ಅಧರ್ಮಕ್ಕೆ ಕಾರಣವಾಯಿತು. ಯಾವ ತಪ್ಪನ್ನೂ ಮಾಡದ ಪ್ರಯಾಣಿಕರ ಮೇಲೆ ಹಲ್ಲೆ ನಡೆಯಿತು. ಇಂಥಾದ್ದು ಧರ್ಮಸೂಕ್ಷ್ಮ. ಆ ಋಷಿ 'ತನಗೆ ಗೊತ್ತಿಲ್ಲ' ಅಂಥ ಸುಳ್ಳು ಹೇಳಿದ್ದರೆ ಆ ಪ್ರಯಾಣಿಕರ ಮೇಲೆ ಹಲ್ಲೆ ನಡೆಯುತ್ತಿರಲಿಲ್ಲ. ಎಂತಹ ಸಂದರ್ಭದಲ್ಲೂ ತಾನು ಸುಳ್ಳನ್ನು ಹೇಳುವುದಿಲ್ಲ ಎಂದು ಘೋರ ಪ್ರತಿಜ್ಞೆ ಮಾಡಿದ್ದರ ಫಲ ಇದು.

ಈ ಕೌಶಿಕೋಪಾಖ್ಯಾನವನ್ನು ಹೇಳಿದವನು ಶ್ರೀಕೃಷ್ಣ. ಅದು ಅರ್ಜುನನಿಗೆ. ಸಂದರ್ಭ ಹೀಗಿದೆ– ಕರ್ಣಾರ್ಜುನರ ಯುದ್ಧ ಸಂದರ್ಭ ಅದು. ಆ ದಿನ ಅರ್ಜುನ ಕರ್ಣನನ್ನು ಮುಗಿಸಿಯೇ ಬರುತ್ತೇನೆ ಎಂದು ಪ್ರತಿಜ್ಞೆ ಮಾಡಿ ಬಂದಿದ್ದ. ಅರ್ಜುನ ಕರ್ಣನ ಬಳಿ ಹೋಗುವಷ್ಟರಲ್ಲಿ ಕರ್ಣ ಯುಧಿಷ್ಠಿರನನ್ನು ತನ್ನ ಬಾಣಾವಳಿಗಳಿಂದ ಘಾಸಿಗೊಳಿಸಿದ್ದ. ಅದರಿಂದ ಖಿನ್ನನಾಗಿ ಧರ್ಮರಾಜ ತನ್ನ ಶಿಬಿರಕ್ಕೆ ಮರಳಿದ್ದ. ಅಣ್ಣನಿಗೇನಾಯಿತೋ ಎಂಬ ಗಾಬರಿಯಿಂದ ಅಣ್ಣನನ್ನು ನೋಡಲೆಂದು ಅರ್ಜುನ ಅಣ್ಣನ ಶಿಬಿರಕ್ಕೆ ಬರುತ್ತಾನೆ. ಅರ್ಜುನ ಕರ್ಣವಧೆಯ ವೃತ್ತಾಂತವನ್ನೇ ತಂದಿರಬೇಕೆಂದು ಭಾವಿಸಿ ಧರ್ಮರಾಜ ಅರ್ಜುನನ್ನು 'ಕರ್ಣನನ್ನು ಕೊಂದು ಮುಗಿಸಿದೆಯಾ' ಅಂತ ಕೇಳುತ್ತಾನೆ. ಅದಕ್ಕೆ ಅರ್ಜುನ 'ಇನ್ನೂ ಇಲ್ಲ. ನೀನು ಕರ್ಣನ ಬಾಣಗಳಿಂದ ಘಾಸಿಗೊಂಡೆ ಎಂದು ತಿಳಿಯಿತು. ಅದಕ್ಕಾಗಿ ನಿನ್ನನ್ನು ನೋಡಿ ಹೋಗೋಣವೆಂದು ಬಂದೆ' ಎಂದು ಹೇಳುತ್ತಾನೆ. ಕರ್ಣವಧೆಯ ಶುಭವಾರ್ತೆಯ ನಿರೀಕ್ಷೆಯಲ್ಲಿದ್ದ ಧರ್ಮರಾಜನಿಗೆ ಅರ್ಜುನನ ಮಾತನ್ನು ತಡೆಯಲಾಗುವುದಿಲ್ಲ. ಸಿಟ್ಟು ಬಂದು ಅರ್ಜುನನನ್ನು ಬಗೆಬಗೆಯಾಗಿ ನಿಂದಿಸತೊಡಗುತ್ತಾನೆ. 'ನಿನ್ನ ಗಾಂಡೀವವನ್ನು ಬಿಸಾಡು, ನಿನ್ನ ಬಾಹುವೀರ್ಯಕ್ಕೆ ಧಿಕ್ಕಾರವಿರಲಿ. ನಿನ್ನ ಧ್ವಜವೂ, ರಥವೂ ಹಾಳಾಗಿಹೋಗಲಿ' ಎಂದು ನಿಂದಿಸುತ್ತಾನೆ. ಇದರಿಂದ ಕ್ರೋಧಗೊಂಡ ಅರ್ಜುನ ಧರ್ಮರಾಜನ ತಲೆಯನ್ನು ಕತ್ತರಿಸಲು ಮುಂದಾಗುತ್ತಾನೆ. ಹಾಗೆ ಮುಂದಾಗಲು ಕಾರಣ– 'ಯಾರು ತನ್ನ ಗಾಂಡೀವವನ್ನು ನಿಂದಿಸುವರೋ ಅವರ ತಲೆಯನ್ನು ಕಡಿಯುತ್ತೇನೆ' ಎಂದು ಹಿಂದೊಮ್ಮೆ ಅರ್ಜುನ ಪ್ರತಿಜ್ಞೆ ಮಾಡಿದ್ದ.

ಇದುವರೆಗೂ ಮೌನದಿಂದ ಎಲ್ಲವನ್ನೂ ಗಮನಿಸುತ್ತಿದ್ದ ಪಾರ್ಥಸಾರಥಿ ಕೃಷ್ಣ ಮಧ್ಯೆ ಬಾಯಿ ಹಾಕುತ್ತಾನೆ– 'ಅರ್ಜುನ, ನೀನು ಏನು ಬಲ್ಲೆ ಸತ್ಯಸ್ವರೂಪವನ್ನು' ನೀನೇನು ವೃದ್ಧರನ್ನು ಸೇವಿಸಿದ್ದೀಯಾ, ಧರ್ಮದ ಸೂಕ್ಷ್ಮವನ್ನು ತಿಳಿದುಕೊಂಡಿದ್ದೀಯಾ, ಸತ್ಯವು ಅಸತ್ಯವಾಗುವ ಸಂದರ್ಭವೂ, ಅಸತ್ಯವು ಸತ್ಯವಾಗುವ ಸಂಭರ್ವವೂ ಇರುತ್ತದೆ. ನಿನಗೀಗ ನಿನ್ನ ಶಪಥ ವಾಕ್ಯದ ಸತ್ಯದ ಮೇಲೆ ಮಾತ್ರ ಗಮನವಿದೆ. ತಾನು ಮಾಡಿದ ಶಪಥ ಎಲ್ಲಿ ಸುಳ್ಳಾಗಿ ಬಿಡುವುದೋ ಎಂಬ ಆತಂಕವಿದೆ. ಅದಕ್ಕಾಗಿಯೇ ಅಣ್ಣ ಎಂದೂ ನೋಡದೆ ಅವನ ತಲೆ ಕತ್ತರಿಸುವುದಕ್ಕೆ ಮುಂದಾಗಿಬಿಟ್ಟೆ' ಎಂದು ಹೇಳಿ, ಅವನನ್ನು ತಡೆದು, ಈ ಕೌಶಿಕೋಪಾಖ್ಯಾನದ ಕಥೆಯನ್ನು ಉದಾಹರಿಸಿ, ನಿನ್ನದೂ ಅಂಥಾದ್ದೇ ಅಂತ ಹೇಳಿ, ಆ ಮುನಿ ಹೇಳಿದ ಸತ್ಯ ಹೇಗೆ ನಿರಪರಾಧಿಗಳ ಶೋಷಣೆಗೆ ಕಾರಣವಾಯಿತು ಅನ್ನುವುದನ್ನು ವಿವರಿಸುತ್ತಾನೆ. ಸತ್ಯವೆಂಬುದು ಧರ್ಮಕ್ಕೆ ಅಪ್ರಸಕ್ತ ಮಾತ್ರ ಅಲ್ಲ. ಕೆಲವೊಮ್ಮೆ ಅದು ವಿರುದ್ಧವೂ ಕೂಡಾ ಆಗಿಬಿಡುತ್ತದೆ ಅನ್ನುವುದಕ್ಕೆ ಇದೊಂದು ಮಾರ್ಮಿಕವಾದ ಉದಾಹರಣೆ.

ಧರ್ಮಸೂಕ್ಷ್ಮದ ಆಯಾಮಗಳು ಇಷ್ಟಕ್ಕೇ ನಿಲ್ಲುವುದಿಲ್ಲ. ಅಹಿಂಸೆಯೂ ಅಧರ್ಮವಾಗುವ, ಹಿಂಸೆಯೂ ಧರ್ಮವಾಗುವ ಸಂದರ್ಭವಿರುತ್ತದೆ. ಅದಕ್ಕೊಂದು ಉದಾಹರಣೆಯನ್ನು ವಾಲ್ಮೀಕಿ ರಾಮಾಯಣದಲ್ಲಿ ನೋಡಬಹುದು. ತಾಟಕೆ, ಸುಬಾಹುವಿನಂತಹ ಭಯಂಕರ ರಾಕ್ಷಸರನ್ನು ಕೊಲ್ಲಿಸುವುದಕ್ಕಾಗಿಯೇ ಭಗವಾನ್ ವಿಶ್ವಾಮಿತ್ರರು ಶ್ರೀರಾಮನನ್ನು ಅಡವಿಗೆ ಒಯ್ದಿದ್ದರು. ಯಾವಾಗ ತಾಟಕೆ ಕಾಣಿಸಕೊಂಡಳೋ ಆಗಲೇ ವಿಶ್ವಾಮಿತ್ರರು ರಾಮನಿಗೆ ಅವಳನ್ನು ಕೊಂದು ಮುಗಿಸು ಎಂದು ಹೇಳುತ್ತಾರೆ. ಆಗ ಶ್ರೀರಾಮ "ಹೇಗೆ ಅವಳನ್ನು ಕೊಲ್ಲುವುದು? ಅವಳನ್ನು ಕೊಂದರೆ ಸ್ತ್ರಿಹತ್ಯೆ ಆಗುತ್ತದೆಯಲ್ಲ! ಅದು ಶಾಸ್ತ್ರವಿರೋಧಿಯಲ್ಲವೆ ಎಂದು ಯೋಚಿಸತೊಡಗುತ್ತಾನೆ. ಆಗ ವಿಶ್ವಾಮಿತ್ರರು–

ನ ಹಿ ತೇ ಸ್ತ್ರೀವಧಕೃತೇ ಘೃಣಾ ಕಾರ್ಯಾ ನರೋತ್ತಮ ।
ನೃಶಂಸಮನೃಶಂಸಂ ವಾ ಪ್ರಜಾರಕ್ಷಣಕಾರಣಾತ್ ।
ಪಾತಕಂ ವಾ ಸದೋಷಂ ವಾ ಕರ್ತವ್ಯಂ ರಕ್ಷತಾ ಸದಾ ॥
ಬಾಲಕಾಂಡ: 25–17, 18

ಈಕೆಯನ್ನು ಕೊಂದರೆ ಸ್ತ್ರೀಹತ್ಯೆಯಾಗುವುದಲ್ಲ ಎಂದು ನೀನು ಯೋಚಿಸಬೇಕಿಲ್ಲ. ಹೆಣ್ಣು ಎಂದು ದಯೆ ತೋರುವ ಕಾರಣವೂ ಇಲ್ಲ. ಪ್ರಜೆಗಳ ರಕ್ಷಣೆಯ ಹೊಣೆ ಹೊತ್ತವನಿಗೆ ಇದು ಕ್ರೂರಕರ್ಮ, ಇದು ಸೌಮ್ಯಕರ್ಮ ಎಂಬ ವಿಭಾಗವಿಲ್ಲ. ಮೇಲುನೋಟಕ್ಕೆ ಇದು ಪಾಪಕಾರ್ಯವಾಗಿ ಕಾಣಬಹುದು; ಕೆಟ್ಟ ಕೆಲಸವಾಗಿ ಕಾಣಬಹುದು. ಆದರೆ ಅದರಿಂದ ಸಾಧುಗಳ ರಕ್ಷಣೆಯಾಗುವುದಾದರೆ ಅದು ಧರ್ಮವೇ ಆಗುತ್ತದೆ. ಸ್ತ್ರೀಹತ್ಯೆ ಮಾಡಬಾರದು ಅನ್ನುವುದು ಒಂದು ಸಾಮಾನ್ಯ ನಿಯಮ. ಎಲ್ಲಾ ಸಾಮಾನ್ಯ ನಿಯಮಗಳಿಗೂ ಒಂದು ಅಪವಾದವಿರುತ್ತದೆ. ತಾಟಕೆ ಅಂಥ ಅಪವಾದ. ಯಾವುದು ಸಾಮಾನ್ಯ ನಿಯಮದಲ್ಲಿ ಅಧರ್ಮವೋ ವಿಶೇಷ ಸಂದರ್ಭದಲ್ಲಿ ಅದೇ ಧರ್ಮವಾಗಿ ಬಿಡುತ್ತದೆ. ತಾಟಕೆಯನ್ನು ಕೊಂದರೆ ಸ್ತ್ರೀಹತ್ಯೆ ಬರುತ್ತದೆ; ಹೌದು. ಅದು ಒಂದು ಪಾಪ. ಕೊಲ್ಲದೆ ಇದ್ದರೆ ಆಕೆ ಅನೇಕ ಮಂದಿ ನಿರಪರಾಧಿಗಳನ್ನೂ, ಋಷಿ ಜನರನ್ನೂ ಕೊಲ್ಲುತ್ತಾಳೆ. ಸಜ್ಜನ ಹತ್ಯೆಯ ಸರಮಾಲೆಯೇ ನಡೆಯುತ್ತದೆ. ಈ ಹೊಣೆಯೂ ಪ್ರಜಾರಕ್ಷಕನಾದ ನಿನ್ನ ಮೇಲೆಯೇ ಬರುತ್ತದೆ. ಹೀಗೆ ಕೊಂದಿದ್ದರಿಂದ ಒಂದು ಬಗೆಯ ಹತ್ಯೆ; ಕೊಲ್ಲದೆ ಇರುವುದರಿಂದ ಮತ್ತೊಂದು ಬಗೆಯ ಹತ್ಯೆ. ಕೊಂದರೂ ಪಾಪ, ಬಿಟ್ಟರೂ ಪಾಪ. ಆಗೇನು ಮಾಡಬೇಕು!"


ಒಂದು ಹಿಂಸೆಯಿಂದ ನೂರಾರು ಜನಕ್ಕೆ ಹಿತವಾಗುವುದಾದರೆ ಅದು ಹಿಂಸೆಯಲ್ಲ, ಅಹಿಂಸೆ. ಅದು ಪಾಪವಲ್ಲ, ಪುಣ್ಯ. ತಾಟಕೆ ಒಬ್ಬಳು ಸತ್ತರೆ ನೂರಾರು ಜನ ಬದುಕಿಕೊಳ್ಳುತ್ತಾರೆ. ಈ ಒಂದು ಹಿಂಸೆಯಿಂದ ಅನೇಕ ಹಿಂಸೆಗಳನ್ನು ತಪ್ಪಿಸುವುದು ಸಾಧ್ಯವಾಗುತ್ತದೆ. ಆದ್ದರಿಂದ ತಾಟಕೆಯ ವಧೆ ಪ್ರಜಾರಕ್ಷಕನಾದ ನಿನ್ನ ಕರ್ತವ್ಯ. ಇದು ಧರ್ಮಶಾಸ್ತ್ರದ ನಿಲುವು. ಅಹಿಂಸೆಯ ಸ್ಥಾಪನೆಗೆ ಹಿಂಸೆ ಅನಿವಾರ್ಯವಾದರೆ ಅಂಥ ಹಿಂಸೆ ಪಾಪವಲ್ಲ. ಏಕೆಂದರೆ ಆ ಹಿಂಸೆಯ ಗುರಿ ಅಹಿಂಸೆಯೇ ಆಗಿದೆ' ಎಂದು ವಿಶ್ವಾಮಿತ್ರರು ಧರ್ಮಸೂಕ್ಷ್ಮವನ್ನು ತೆರೆದಿಡುತ್ತಾರೆ. ಹಿಂಸೆಯೂ ಧರ್ಮವಾಗುವ ಪರಿ! ಎಂತಹ ಸೂಕ್ಷ್ಮವಾದ ಧರ್ಮವ್ಯಾಖ್ಯಾನ ಇದು!

ಹಾಗೆಯೇ ಮಹಾಭಾರತದಲ್ಲಿ ಧರ್ಮರಾಜ 'ಅಹಿಂಸಾ'ವಾದಿಯಾಗಿದ್ದ. ಯುದ್ಧ ಬೇಡ. ರಕ್ತಪಾತ ಆಗುವುದು ಬೇಡ. ದಾಯಾದಿಗಳು ಸುಖವಾಗಿದ್ದರೆ ನನಗೇನೂ ಬೇಸರವಿಲ್ಲ ಎಂದೆಲ್ಲಾ ಹೇಳುತ್ತಾ ಕೌರವರನ್ನು ಸದಾ ಪ್ರೀತಿಸುತ್ತಿದ್ದ. ಭೀಷ್ಮ ವಿದುರಾದಿಗಳಂತೆ ಆತನೂ ಕೂಡಾ ಯುದ್ಧ ತಡೆಯಲು ಯತ್ನಿಸಿದವನೇ. ಅದಕ್ಕಾಗಿಯೇ ಕೃಷ್ಣ ಧರ್ಮರಾಜನಿಗೆ–'ನೀನು ಕರ್ತವ್ಯಕ್ಕಾಗಿ ಯುದ್ಧ ಮಾಡು. ದ್ವೇಷದಿಂದ ಅಲ್ಲ. ನಿನಗೆ ಬೇಡದ ಯುದ್ಧ ದುರ್ಯೋಧನನಿಗೆ ಬೇಕಾಗಿದೆ. ಅದಕ್ಕಾಗಿ ಯಾದರೂ ಯುದ್ಧ ಮಾಡು. ಸಾತ್ವಿಕ ನಿಯಮದಿಂದ ನೀನು ತಪ್ಪದಿರು. ಉತ್ಸಾಹವೂ, ವೀರ್ಯವೂ ಬೇಕು. ಆದರೆ ಅಹಂಕಾರ, ದರ್ಪಗಳು ಬೇಡ. ಯುದ್ಧಕ್ಕಿಂತ ಶಾಂತಿಯೇನೋ ಮೇಲು. ಆದರೆ ಧರ್ಮ್ಯಶಾಂತಿ (ಧರ್ಮಕ್ಕೆ ಬದ್ಧವಾದ ಶಾಂತಿ) ಅಸಾಧ್ಯವಾದಾಗ ಧರ್ಮ್ಯಯುದ್ಧ (ಧರ್ಮಕ್ಕೆ ಬದ್ಧವಾದ ಯುದ್ಧ–ಧರ್ಮಯುದ್ಧ) ಕ್ಷತ್ರಿಯನಿಗೆ ಲೋಕಹಿತದೃಷ್ಟಿಯಿಂದ ಕರ್ತವ್ಯವಾಗುತ್ತದೆ.

ನೀನು ಯುದ್ಧಕ್ಕೆ ತೊಡಗುವುದು ಕೌರವನ ಮೇಲಿನ ದ್ವೇಷದಿಂದ ಅಲ್ಲ. ಧರ್ಮದ ಮೇಲಿನ ಪ್ರೀತಿಯಿಂದ. ಜ್ಞಾತಿಗಳು, ಬಂಧುಗಳು, ಗುರುಜನರು, ನೆಂಟರು, ಇಷ್ಟರು ಎಲ್ಲರೂ ಪ್ರೀತ್ಯರ್ಹರು. ಅದರಲ್ಲಿ ಎರಡು ಮಾತಿಲ್ಲ. ಆದರೆ ಅವರಿಗಿಂತ ದೊಡ್ಡದು ಧರ್ಮ. ಸಕಲಲೋಕಕ್ಷೇಮಕ್ಕೆ ಮೂಲಭೂತವಾದುದು ಅದು. ಅದಕ್ಕಾಗಿ ಯಾದರೂ ನೀನು ಯುದ್ಧ ಮಾಡು ಅನ್ನುತ್ತಾ ಕೃಷ್ಣ ಅವನ 'ಅಹಿಂಸಾ'ವಾದದ ಕೆಡುಕನ್ನು ಅನಾವರಣಗೊಳಿಸುತ್ತಾನೆ.

ಮಹಾತ್ಮ ಗಾಂಧೀಜಿಯವರಿಗೆ ನಮ್ಮ ದೇಶದ ಕ್ಷಾತ್ರಪರಂಪರೆಯ ಅರಿವೇ ಇರಲಿಲ್ಲವಾಗಿತ್ತು. ರಾಮ–ಕೃಷ್ಣರು ದುಷ್ಟಮರ್ದನಕ್ಕಾಗಿ ಹೇಗೆ ಕತ್ತಿ ಹಿರಿದರು; ಯುದ್ಧ ಮಾಡಿದರು; ಧರ್ಮವಂತರನ್ನು ಯುದ್ಧಕ್ಕಾಗಿ ಪ್ರೇರೇಪಿಸಿದರು ಎಂಬ ಅರಿವೇನಾದರೂ ಗಾಂಧೀಜಿಯವರಿಗೆ ಇದ್ದಿದ್ದರೆ ಕ್ಷಾತ್ರ ಪೌರುಷದ ಕಿಡಿಯೆನಿಸಿಕೊಂಡಿದ್ದ ಸುಬಾಷ್ ಚಂದ್ರ ಬೋಸರನ್ನು ತಮ್ಮ ವಲಯದಿಂದ ಹೊರಗೆ ಹಾಕುತ್ತಿರಲಿಲ್ಲ. ಬಿಡಿ. ಅದೊಂದು ದೊಡ್ಡ ಕಥೆ.

ಮರೆಯಲಾರದ ನಟ ಡಾ.ವಿಷ್ಣುವರ್ಧನ್



ಡಿಸೆಂಬರ್ 30 ಸಾಹಸ ಸಿಂಹ ನಟ ವಿಷ್ಣುವರ್ಧನ್ ಅವರ ಸಂಸ್ಮರಣೆ ದಿನ. ತನ್ನಿಮಿತ್ತ ಈ ಲೇಖನ.

ಬಗೆ ಬಗೆಯ ಟೈಟಲ್‌ಗಳಿಂದ, ಜಗಬೆಳಗುವ ಸೂರ್ಯ ಉದಯಿಸುವ ಮುನ್ನವೇ ಚಿತ್ರ ಜಗತ್ತಿನ ಕಲಾ ಸೂರ್ಯ ಅಸ್ತಮಿಸಿದ ಸುದ್ದಿಯನ್ನು 2009ರ ಡಿಸೆಂಬರ್ 30ರಂದು ಟಿ.ವಿ. ಚಾನಲ್‌ಗಳು ಬಿತ್ತರಿಸ ತೊಡಗಿದಾಗ ಒಂದು ಕ್ಷಣ ಇಡೀ ಕನ್ನಡ ನಾಡೇ ಅಕ್ಷರಶಃ ಸ್ತಬ್ಧವಾಗಿತ್ತು. ಕನ್ನಡಿಗರು ಬೆಳಿಗ್ಗೆ ಕಣ್ಬಿಡುತ್ತಿದ್ದಂತೆಯೇ ಆದಿನ ಮೊದಲು ಕಂಡದ್ದು, ಕೇಳಿದ್ದು ಡಾ.ವಿಷ್ಣುವರ್ಧನ್ ಕಣ್ಮರೆಯಾದದ್ದು!

ದುಃಖ ಸಹಿಸಲಾಗದೆ ಗಳಗಳನೆ ಅತ್ತವರೆಷ್ಟೋ, ವಿಷ್ಣು ಸಾವಿನ ಶಾಕ್‌ಗೆ ಪ್ರಜ್ಞೆ ತಪ್ಪಿದವರೆಷ್ಟೋ, ಸತ್ತವರೂ ಉಂಟು. ರಾಜ್ಯದ ಮೂಲೆ ಮೂಲೆಗಳಿಂದ ಜನ ದೌಡಾಯಿಸಿ ಬೆಂಗಳೂರಿಗೆ ಪ್ರವಾಹದೋಪಾದಿಯಲ್ಲಿ ನುಗ್ಗಿದರು, ನೆರೆ ರಾಜ್ಯಗಳಿಂದಲೂ ಧಾವಿಸಿ ಬಂದರು. ಕೆಲವೇ ಗಂಟೆಗಳಲ್ಲಿ ಇಡೀ ಬೆಂಗಳೂರು ಜನ ಸಮುದ್ರದಲ್ಲಿ ಮುಳುಗಿ ಹೋಗಿತ್ತು. ಎಲ್ಲರದ್ದೂ 'ಒಂದೇ ಗುರಿ' ತಮ್ಮ ಅಭಿಮಾನದ ನಟ ವಿಷ್ಣುವರ್ಧನ್‌ರ ಅಂತಿಮ ದರ್ಶನ ಪಡೆಯುವುದು. ವರನಟ ಡಾ.ರಾಜ್‌ಕುಮಾರ್ ಸಾವಿನ ಸಂದರ್ಭ ಬಿಟ್ಟರೆ ಇಷ್ಟೊಂದು 'ಜನಸುನಾಮಿ'ಯನ್ನು ಬೆಂಗಳೂರು ಎಂದೂ ಕಂಡಿರಲಿಲ್ಲ. ಮಹಾನ್ ಕಲಾವಿದ ಸಾಹಸ ಸಿಂಹ ವಿಷ್ಣುವರ್ಧನ್‌ರ ಸಾವಿಗೆ ನಾಡು ಮಿಡಿದ ಬಗೆಯಿದು.

'ಚಿತ್ರಬ್ರಹ್ಮ' ಪುಟ್ಟಣ್ಣ ಕಣಗಾಲ್ ಅವರು ಖ್ಯಾತಿಯ ತುತ್ತ ತುದಿಯಲ್ಲಿದ್ದ ಕಾಲವದು. ಆಗ ಪುಟ್ಟಣ್ಣನವರ ಮೇಲೆ ಒಂದು ಆಪಾದನೆಯಿತ್ತು. ಅದೆಂದರೆ ಅವರು ಬರೀ ನಾಯಕಿ ಪ್ರಧಾನ ಚಿತ್ರಗಳನ್ನು ತೆಗೆಯುತ್ತಾರೆಂಬುದು. ಪುಟ್ಟಣ್ಣನವರಿಗೆ ನಾಯಕ ಪ್ರಧಾನ ಚಿತ್ರಗಳು ಒಗ್ಗುವುದಿಲ್ಲ. ಅವರು ಹೀರೋಯಿನ್‌ಗಳನ್ನು ಮೆರೆಸುತ್ತಾರೆಯೇ ವಿನಃ ಹೀರೋಗಳನ್ನು ಮೆರೆಸುವುದಿಲ್ಲವೆಂಬ ಮಾತುಗಳು ಪುಟ್ಟಣ್ಣನವರ ಬೆನ್ನಿಂದೆ ವ್ಯಂಗ್ಯ ಮಾಡುತ್ತಿದ್ದವು. ಇದನ್ನು ಗಮನಿಸುತ್ತಲೇ ಬಂದಿದ್ದ ಪುಟ್ಟಣ್ಣ ಒಂದು ಸಲ ತುಸು ಸಿಟ್ಟಿನಿಂದಲೇ ಈ ಸಲ ನಾನೊಂದು ಚಿತ್ರವನ್ನು ಮಾಡುತ್ತೇನೆ. 'ನಾಗರಹಾವು' ಎಂಬ ಈ ಚಿತ್ರದ ನಾಯಕನ ಪಾತ್ರವು ದಶಕಗಳ ಕಾಲ ಚಿತ್ರಪ್ರೇಮಿಗಳ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ಉಳಿಯುತ್ತದೆ. ಆ ಪಾತ್ರವನ್ನು ಯಾರು ಮಾಡಿದರೂ ಆತ ಖಾಯಂ ಆಗಿ ಬೆಳ್ಳಿತೆರೆಯಲ್ಲಿ ನಿಲ್ಲುತ್ತಾನೆ ಎಂದು ಗುಡುಗಿದ್ದರು. ಚಿತ್ರಬ್ರಹ್ಮನ ಮಾತು ಹುಸಿಯಾಗಲಿಲ್ಲ. 'ನಾಗರಹಾವು' ಚಿತ್ರದ ನಾಯಕನ ಪಾತ್ರ ನಿರ್ವಹಿಸಿದ ಅಂದಿನ ಸಂಪತ್‌ಕುಮಾರ್ ಎಂಬ ಸಾಮಾನ್ಯ ಹುಡುಗ ಆ ನಂತರ ಅಸಾಮಾನ್ಯ ಕಲಾವಿದನಾಗಿ ಬೆಳೆದು ಸುಮಾರು ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಕನ್ನಡ ಚಿತ್ರರಂಗವನ್ನು ಆಳಿದ್ದು ಈಗ ಇತಿಹಾಸ. ಆ ಹುಡುಗನೇ ಸಾಹಸಸಿಂಹ, ಅಭಿನವ ಭಾರ್ಗವ, ಮೈಸೂರು ರತ್ನ ಎಂಬೆಲ್ಲಾ ವಿಶೇಷಣಗಳನ್ನು ಅಭಿಮಾನಿಗಳಿಂದ ಪಡೆದು ಕನ್ನಡ ಚಿತ್ರಜಗತ್ತಿನಲ್ಲಿ ಶಾಶ್ವತಗೊಂಡು ಈಗ ಅಮರರಾಗಿರುವ ಭಾವಪೂರ್ಣ ಕಲಾವಿದ, ಬೆಳ್ಳಿತೆರೆಯ ಬಂಗಾರದ ತಾರೆ ಡಾ.ವಿಷ್ಣುವರ್ಧನ್!

ಹೀಗೆ ಪುಟ್ಟಣ್ಣ ಸೃಷ್ಟಿಸಿದ ಅಪೂರ್ವ ಕಲಾರತ್ನವಾಗಿ 'ನಾಗರಹಾವು' ಮೂಲಕ ನಾಯಕನಟರಾಗಿ 1972 ರಲ್ಲಿ ತಮ್ಮ ಚಿತ್ರಯಾತ್ರೆಯನ್ನು ಆರಂಭಿಸಿದ ವಿಷ್ಣುವರ್ಧನ್ ಅವರು ಮೊದಲ ಚಿತ್ರದಲ್ಲೇ ಮಹದದ್ಭುತ ಕಂಡವರು. ಒಂದು ರೀತಿ ನೂರು ಚಿತ್ರಗಳ ಯಶಸ್ಸನ್ನು ಒಂದೇ ಚಿತ್ರದಲ್ಲಿ ಕಂಡ ಅನುಭವ. 'ನಾಗರಹಾವು ಚಿತ್ರಕ್ಕೆ ದೇವರಾಜ ಅರಸು ಕೈಲಿ ಪ್ರಶಸ್ತಿ ಸ್ವೀಕರಿಸಿದೆ. ರಾಜ್‌ಕುಮಾರ್ ಜತೆ ಫಿಲಂಫೇರ್ ಪ್ರಶಸ್ತಿ ಬಂತು. ಶಿವಾಜಿ ಗಣೇಶನ್ ಜತೆ ಸಿನಿ ಎಕ್ಸ್‌ಪ್ರೆಸ್ ಪ್ರಶಸ್ತಿ ಸಿಕ್ಕಿದೆ. ನಾಗರಹಾವು ಚಿತ್ರಕ್ಕಿಂತ ಬೇರೆ ಸಿನಿಮಾ ಬೇಕೆ? ಆ ಚಿತ್ರ ನೀಡಿದ ಯಶಸ್ಸಿಗಿಂತ ಇನ್ನೇನು ಬೇಕು? ಏನೂ ಗೊತ್ತಿಲ್ಲದೇ ಇದ್ದಾಗ ಅಂತಹ ಚಿತ್ರ ಕೊಟ್ಟಿದ್ದೇನೆ. ಅದು ಬದುಕಿನಲ್ಲಿ ಕಂಡ ದೊಡ್ಡ ಯಶಸ್ಸು' ಎಂದು ಸ್ವತಃ ವಿಷ್ಣುವರ್ಧನ್ ಅವರೇ ಅವರು ಬದುಕಿರುವ ತನಕವೂ ಆಗಾಗ್ಗೆ ಹೇಳುತ್ತಿದ್ದುದುಂಟು.

ಅವತ್ತು ಏನೇನೂ ಅಲ್ಲದ ಮೈಸೂರಿನ ಹುಡುಗ ಹೀರೋ ಆಗಿ ನಟಿಸಿದ್ದ 'ನಾಗರಹಾವು' ಒಮ್ಮೆಗೇ ಎಂಟು ರಾಜ್ಯ ಪ್ರಶಸ್ತಿಗಳನ್ನು ಬಾಚಿಕೊಂಡಿತ್ತು. ಗಳಿಕೆಯಲ್ಲೂ ಅಷ್ಟೇ, ನಿರ್ಮಾಪಕನ ಬೊಕ್ಕಸಕ್ಕೆ ಹಣದ ಹೊಳೆಯನ್ನೇ ಹರಿಸಿತ್ತು. ವಿಷ್ಣುವರ್ಧನ್ ದಿನ ಬೆಳಗಾಗುವುದರೊಳಗೆ ಏಕಮಾತ್ರ ಚಿತ್ರದಿಂದಲೇ ಏಕಮೇವಾಧಿತ್ಯ ತಾರೆಯಾಗಿ ಬಿಟ್ಟಿದ್ದರು. ಪುಟ್ಟಣ್ಣನಂತಹ ಅಪ್ರತಿಮ ನಿರ್ದೇಶಕನ ಶಕ್ತಿ ಮತ್ತು ವಿಷ್ಣುವರ್ಧನ್ ಅವರ ಅಭಿನಯದ ತಾಕತ್ತು ಇಂಥ ಯಶಸ್ಸಿನ ಮೂಲ ಧಾತುವಾಗಿತ್ತು. ತಮ್ಮ ಪ್ರಥಮ ಹಂತದಲ್ಲೇ ಇಂಥ ಯಶಸ್ಸು ಕಂಡವರಲ್ಲಿ ಬಹುಶಃ ವಿಷ್ಣುವರ್ಧನ್ ಅವರೇ ಮೊದಲಿಗರೆನ್ನಬಹುದು.

ಅದೇ ಯಶಸ್ಸನ್ನು ತಮ್ಮ ಚಿತ್ರ ಬದುಕಿನ ಕೊನೆ ತನಕವೂ ಉಳಿಸಿಕೊಂಡು ಬಂದ ಹೆಗ್ಗಳಿಕೆಯ ವಿಷ್ಣು 200 ಚಿತ್ರಗಳಲ್ಲಿ ನಟಿಸಿ ತಮ್ಮ ಭಾವಪೂರ್ಣ ಅಭಿನಯದಿಂದ ಸರ್ವಶ್ರೇಷ್ಠ ನಟರೆನಿಸಿದ್ದರು. 'ಬಳ್ಳಾರಿ ನಾಗ' ವಿಷ್ಣು ಬದುಕಿದ್ದಾಗ ಬಿಡುಗಡೆಗೊಂಡ ಅವರ ಕೊನೆಯ ಚಿತ್ರವಾದರೆ, ಚಿತ್ರೀಕರಣ ಪೂರೈಸಿ ಬಿಡುಗಡೆಗೆ ಸಿದ್ಧವಾಗಿದ್ದ ಚಿತ್ರಗಳು 'ಸ್ಕೂಲ್ ಮಾಸ್ಟರ್' ಮತ್ತು ವಿಷ್ಣು ಅವರ ಮಹತ್ವಾಕಾಂಕ್ಷೆಯ ಚಿತ್ರ 'ಆಪ್ತರಕ್ಷಕ'. ವಿಷ್ಣುವರ್ಧನ್‌ರ 200ನೇ ಚಿತ್ರವಾಗಿ 'ಆಪ್ತರಕ್ಷಕ' ಬಿಡುಗಡೆಗೊಂಡು ಎಲ್ಲಾ ರೀತಿಯಿಂದಲೂ ಕನ್ನಡ ಚಿತ್ರರಂಗದಲ್ಲೊಂದು ಹೊಸ ದಾಖಲೆ ಬರೆದದ್ದು ಈಗ ಇತಿಹಾಸ.

ಇಂಥ ಪ್ರತಿಭೆಯ ಗಣಿ ಡಾ.ವಿಷ್ಣುವರ್ಧನ್ ಜನಿಸಿದ್ದು 1950ರ ಸೆಪ್ಟೆಂಬರ್ 18ರಂದು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ. ತಂದೆ ಎಚ್.ಎಲ್. ನಾರಾಯಣ ರಾವ್ ಪತ್ರಕರ್ತರೂ ಮತ್ತು ಚಿತ್ರಸಾಹಿತಿಗಳೂ ಆಗಿದ್ದು ಆ ಕಾಲದಲ್ಲೇ ಮಂಗಳಸೂತ್ರ, ವರದಕ್ಷಿಣೆ ಮುಂತಾದ ಚಿತ್ರಗಳಿಗೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದಿದ್ದರು. ತಾಯಿ ಕಾಮಾಕ್ಷಮ್ಮ ಆಕಾಶವಾಣಿ ಕಲಾವಿದೆಯಾಗಿದ್ದರು. ಕಲೆ, ಸಾಹಿತ್ಯ, ಸಂಗೀತದ ಹಿನ್ನೆಲೆಯ ಇಂಥ ಸುಸಂಸ್ಕೃತ ಕುಟುಂಬದಲ್ಲಿ ಜನಿಸಿದ್ದ ವಿಷ್ಣುವರ್ಧನ್ ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸವನ್ನು ಮೈಸೂರಿನ ಗೋಪಾಲಸ್ವಾಮಿ ಶಿಶುವಿಹಾರದಲ್ಲಿ ಆರಂಭಿಸಿ ಪಿಯುಸಿ ತನಕ ಮೈಸೂರಿನಲ್ಲೇ ಕಲಿತು ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಬಿಎಸ್ಸಿ ಪದವಿ ಮುಗಿಸಿದ್ದರು. ಅಂದಿನ ಖ್ಯಾತ ಪತ್ರಕರ್ತ ವೈಎನ್ಕೆ ಅವರಿಂದಾಗಿ ಗಿರೀಶ್ ಕಾರ್ನಾಡ್–ಬಿ.ವಿ.ಕಾರಂತ್ ಜೋಡಿಯ 'ವಂಶವೃಕ್ಷ' ಚಿತ್ರದಲ್ಲಿ ಅಭಿನಯಿಸುವ ಯೋಗ ಕೂಡಿಬಂದಾಗ ಮನೆಯವರು ವಿರೋಧಿಸಿದ್ದರಾದರೂ ವಿಷ್ಣುವರ್ಧನ್ ಅವರ ಅಭಿಮಾನದ ಗುರುಗಳಾಗಿದ್ದ ಎಚ್.ನರಸಿಂಹಯ್ಯ ಅವರು ತಿಳಿಹೇಳಿ ಮನೆಯವರನ್ನು ಒಪ್ಪಿಸಿದ್ದರಿಂದ 'ವಂಶವೃಕ್ಷ'ದಲ್ಲಿ ಅವರು ನಟಿಸಿದ್ದರು. ಹಾಗೆ ನೋಡಿದರೆ ವಿಷ್ಣು ಬಾಲನಟರಾಗಿ 1955 ರಲ್ಲೇ ಶಿವಶರಣೆ ನಂಬಿಯಕ್ಕ, ಕೋಕಿಲವಾಣಿ, ಸತಿಸುಕನ್ಯ ಚಿತ್ರಗಳಲ್ಲಿ ಅಭಿನಯಿಸಿದ್ದರು. ಸಂಪತ್ ಕುಮಾರ್ ಎಂದಿದ್ದ ಅವರ ಮೂಲ ಹೆಸರು 'ವಂಶವೃಕ್ಷ'ಕ್ಕಾಗಿ ಕುಮಾರ್ ಆಗಿ ಮೊಟಕಾಗಿತ್ತು. ನಂತರ 'ನಾಗರಹಾವು' ಚಿತ್ರಕ್ಕಾಗಿ ಪುಟ್ಟಣ್ಣನಿಂದ ಅವರು ವಿಷ್ಣುವರ್ಧನ್ ಆದದ್ದು ಈಗ ಇತಿಹಾಸ.

●ಬನ್ನೂರು ಕೆ. ರಾಜು, ಸಾಹಿತಿ–ಪತ್ರಕರ್ತ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಇಸ್ಕಾನ್ ದೇವಾಲಯದಲ್ಲಿ ಜ.2ರಂದು ವೈಕುಂಠ ಏಕಾದಶಿ

ಜ.7ರಂದು ಶ್ರೀಕೃಷ್ಣ ಬಲರಾಮ ರಥಯಾತ್ರೆ



ಮೈಸೂರು,ಡಿ.29(ಪಿಎಂ)–ಮೈಸೂರಿನ ಇಸ್ಕಾನ್ ದೇವಾಲಯದ ವತಿಯಿಂದ ಜ.2ರಂದು ವೈಕುಂಠ ಏಕಾದಶಿ ಹಾಗೂ ಜ.7ರಂದು ಶ್ರೀಕೃಷ್ಣ ಬಲರಾಮ ರಥಯಾತ್ರೆ ಹಮ್ಮಿಕೊಳ್ಳಲಾಗಿದೆ. ಜ.2ರಂದು ದೇವಾಲಯದಲ್ಲಿ ವೈಕುಂಠ ಏಕಾದಶಿ ಪೂಜಾ ಕೈಂಕರ್ಯಗಳು ನಡೆಯಲಿದ್ದು, ಅಂದು ಬೆಳಗ್ಗೆ 7.30ರಿಂದ ರಾತ್ರಿ 10ರವರೆಗೆ ವೈಕುಂಠ ದ್ವಾರ ದರ್ಶನಕ್ಕೆ ಭಕ್ತಾದಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಈ ಉತ್ಸವದ ಪ್ರಯುಕ್ತ ಭಕ್ತರು ವಿವಿಧ ಸೇವೆ ನೀಡಲು ವ್ಯವಸ್ಥೆ ಮಾಡಲಾಗಿದೆ. ಪುಷ್ಪಾಲಂಕಾರ ಸೇವೆಗೆ 10 ಸಾವಿರ ರೂ., ವೈಕುಂಠ ದ್ವಾರ ಸೇವೆಗೆ 15 ಸಾವಿರ ರೂ. ಹಾಗೂ ಯಜಮಾನ ಸೇವೆಗೆ 25 ಸಾವಿರ ರೂ. ದರ ನಿಗದಿ ಮಾಡಲಾಗಿದೆ. ಜೊತೆಗೆ ವಿವಿಧ ದರದಲ್ಲಿ ಪ್ರಸಾದ ವಿನಿಯೋಗ ಸೇವೆಗಳೂ ಲಭ್ಯವಿವೆ. ಜ.7ರಂದು ಸಂಜೆ 4.30ಕ್ಕೆ ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಇಸ್ಕಾನ್ ದೇವಾಲಯದವರೆಗೆ ಶ್ರೀ ಕೃಷ್ಣ ಬಲರಾಮ ರಥಯಾತ್ರೆ ಹಮ್ಮಿಕೊಳ್ಳಲಾಗಿದೆ. ರಾತ್ರಿ 8.30ಕ್ಕೆ ದೇವಾಲಯದಲ್ಲಿ ಸಂಕೀರ್ತನೆಯೊಂದಿಗೆ ಆರತಿ ಪೂಜಾ ವಿಧಿವಿಧಾನ ನಡೆಯಲಿದೆ. ಪುಷ್ಪಾಲಂಕಾರ ಸೇವೆಗೆ 15 ಸಾವಿರ ರೂ., ಮಂಟಪ ಸೇವೆಗೆ 25 ಸಾವಿರ ರೂ. ಮತ್ತು ಯಜಮಾನ ಸೇವೆಗೆ 50 ಸಾವಿರ ರೂ. ದರ ನಿಗದಿ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.



ಮೈಸೂರು ಗೋಕುಲಂನ ಶರತ್ ಯೋಗ ಸೆಂಟರ್ ವತಿಯಿಂದ ಪಿಂಜರಾಪೋಲ್‌ನಲ್ಲಿರುವ ಪ್ರಾಣಿಗಳಿಗೆ ಆಹಾರ ಮತ್ತು ಔಷಧಿಗಾಗಿ ಆರ್ಥಿಕ ನೆರವು ನೀಡಲಾಯಿತು. ಯೋಗ ಗುರು ಶರತ್ ಜೋಯಿಸ್ ಅವರಿಂದ ಪಿಂಜರಾಪೋಲ್ ಕಾರ್ಯದರ್ಶಿ ವಿನೋದ್ ನೆರವು ಸ್ವೀಕರಿಸಿದರು. ಈ ಸಂದರ್ಭದಲ್ಲಿ ಹಿರಿಯ ವಿದ್ಯಾರ್ಥಿಗಳಾದ ರಾಕೇಶ್ ಜೈನ್, ಡಾ.ಸೌಮ್ಯ, ದಿನೇಶ್ ಜೈನ್, ಪಿಂಜರಾಪೋಲ್‌ನ ಸಾರ್ವಜನಿಕ ಸಂಪರ್ಕ ಅಧಿಕಾರಿ ಸುರೇಂದರ್, ಸುಶೀಲ್, ಸಿದ್ದಾರ್ಥ್ ಮತ್ತಿತರರು ಉಪಸ್ಥಿತರಿದ್ದರು.

ಮುಂದಿನ ಅಧಿವೇಶನದಲ್ಲಿ ಹಣಕಾಸು ಪರಿಸ್ಥಿತಿ ಸಂಬಂಧ ಶ್ವೇತಪತ್ರ ಮಂಡನೆ



ಬೆಂಗಳೂರು,ಡಿ.29(ಕೆಎಂಶಿ)–ಮುಂದಿನ ಅಧಿವೇಶನದಲ್ಲಿ ರಾಜ್ಯ ಹಣಕಾಸು ಪರಿಸ್ಥಿತಿ ಕುರಿತ ಶ್ವೇತಪತ್ರ ಮಂಡಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿಂದು ತಿಳಿಸಿದರು.

ಪೂರಕ ಅಂದಾಜುಗಳ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಜನಪರ ಹಾಗೂ ಅಭಿವೃದ್ಧಿ ಯೋಜನೆಗಳಿಗೆ ಹಿಂದಿನ ಸರ್ಕಾರದಲ್ಲಿ ಎಷ್ಟು ಹಣ ಒದಗಿಸಲಾಗಿತ್ತು. ನಮ್ಮ ಸರ್ಕಾರ ಒದಗಿಸಿರುವ ಹಣ ಮತ್ತು ತೆರಿಗೆ ಸಂಗ್ರಹ ಕುರಿತ ಅಂಶಗಳನ್ನು ಒಳಗೊಂಡ ಸಮಗ್ರ ಶ್ವೇತಪತ್ರ ಹೊರಡಿಸುವುದಾಗಿ ಹೇಳಿದರು.

ಕೃಷ್ಣ ಭೈರೇಗೌಡ ಅವರು ಪೂರಕ ಅಂದಾಜುಗಳ ಚರ್ಚೆ ಸಂದರ್ಭದಲ್ಲಿ ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ಪಾಲು ಪಡೆಯುವಲ್ಲಿ ಸರ್ಕಾರ ಎಡವಿದೆ. ಇದರಿಂದಾಗಿ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಹಣಕಾಸಿನ ಕೊರತೆ ಎದುರಾಗಿದೆ ಎಂದು ಆರೋಪಿಸಿದಾಗ ಮುಖ್ಯಮಂತ್ರಿ ಮೇಲಿನಂತೆ ಪ್ರತಿಕ್ರಿಯಿಸಿದರು.

ಅಡ್ಡಾಗಳಲ್ಲಿ ತಾಜಾ... ತಾಜಾ... ರಾಜಕೀಯ ಚರ್ಚೆ ಆರಂಭ!

● ಅವರು ಅಲ್ಲಿ ಸ್ಪರ್ಧಿಸುತ್ತಾರಂತೆ... ಇವರು ಇಲ್ಲಿ ಸ್ಪರ್ಧಿಸುವುದಿಲ್ಲವಂತೆ... ಇವರ ವಿರುದ್ಧ ಅವರು ಗೆಲ್ಲಲಾರರು! ಇವರು ನಿಂತರೆ ಅವರು ಸೋಲುವುದು ಗ್ಯಾರಂಟಿ... ● ಹೋಟೆಲ್, ಕ್ಯಾಂಟೀನ್‌ಗಳ ಮುಂದೆ ಬಿಸಿ ಬಿಸಿ ಕಾಫಿ-ಟೀ ಹೀರುತ್ತಾ ಚರ್ಚೆಯೋ ಚರ್ಚೆ!

ಮೈಸೂರು, ಡಿ.29(ಎಸ್‌ಬಿಡಿ)– ಮುಂಬರುವ ವಿಧಾನಸಭೆ ಚುನಾವಣೆಗೆ ರಾಜಕೀಯ ಪಕ್ಷಗಳು ಕಸರತ್ತು ಆರಂಭಿಸಿರುವ ನಡುವೆ ಸಾರ್ವಜನಿಕ ವಲಯದಲ್ಲೂ ಚರ್ಚೆ ಜೋರಾಗಿದೆ.

ವಿಧಾನಸಭೆಗೆ 2023ರ ಮೇ ತಿಂಗಳಲ್ಲಿ ಅಥವಾ ಅದಕ್ಕೂ ಮುನ್ನ ಚುನಾವಣೆ ನಡೆಯಲಿದ್ದು, ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳೂ ಸಿದ್ಧತೆ ಮಾಡಿಕೊಳ್ಳುತ್ತಿವೆ. ವಿಭಿನ್ನ ಯಾತ್ರೆ ಹೆಸರಿನಲ್ಲಿ ರಾಜ್ಯ ಪ್ರವಾಸ ನಡೆಸುವ ಮೂಲಕ ತಮ್ಮ ಖಾಯಂ ಮತಗಳನ್ನು ಭದ್ರ ಮಾಡಿಕೊಳ್ಳುವುದರ ಜೊತೆಗೆ ಹೊಸ ಮತದಾರರನ್ನು ಸೆಳೆಯುವ ಪ್ರಯತ್ನ ನಡೆಸಿವೆ. ಈಗಾಗಲೇ ಅಬ್ಬರದ ಪ್ರಚಾರ, ಭಾರೀ ಬಹಿರಂಗ ಸಭೆಗಳ ಮೂಲಕ ರಾಜಕೀಯ ಕಹಳೆ ಮೊಳಗಿಸುತ್ತಿವೆ. ಒಟ್ಟಾರೆ ಚುನಾವಣೆ ಕಣ ದಿನೇ ದಿನೆ ರಂಗೇರುತ್ತಿರುವ ಹಿನ್ನೆಲೆಯಲ್ಲಿ ಮೈಸೂರಿನ ಕೆಲವು ಸ್ಥಳಗಳಲ್ಲಿ ಚರ್ಚೆ ಚುರುಕಾಗಿದೆ.



ಫೈಲ್ ಚಿತ್ರ

ರಾಜಕೀಯ ಪಕ್ಷದ ಕಾರ್ಯಕರ್ತರು, ರಾಜಕಾರಣದ ಬಗ್ಗೆ ಹೆಚ್ಚು ಆಸಕ್ತಿವುಳ್ಳವರು, ರಾಜಕೀಯ ವಿಚಾರಗಳನ್ನು ತಿಳಿದುಕೊಳ್ಳಲು ಇಚ್ಛಿಸುವವರು ಹೀಗೆ ರಾಜಕೀಯ ಸಂಬಂಧ ಸಮಾನ ಮನಸ್ಸುಳ್ಳವರು ಕಾಫಿ–ತಿಂಡಿ ನೆಪದಲ್ಲಿ ಒಟ್ಟಿಗೆ ಸೇರುತ್ತಿದ್ದಾರೆ. ನಜರ್‌ಬಾದ್, ಒಂಟಿಕೊಪ್ಪಲು, ಕೆ.ಜಿ.ಕೊಪ್ಪಲು, ದೇವರಾಜ ಮೊಹಲ್ಲಾ ಸೇರಿದಂತೆ ಹಲವೆಡೆ ಹೋಟೆಲ್‌ಗಳ ಮುಂದೆ ಕೂತು–ನಿಂತು ಕುಳಿತು ಗಂಟೆಗಟ್ಟಲೆ ರಾಜಕೀಯ ಚರ್ಚೆ ನಡೆಸಲಾರಂಭಿಸಿದ್ದಾರೆ. ಹೋಟೆಲ್‌ಗಳು ಮಾತ್ರವಲ್ಲದೆ ಸಣ್ಣಪುಟ್ಟ ಟೀ ಸ್ಟಾಲ್‌ಗಳ ಬಳಿಯೂ ರಾಜಕೀಯದ ಮಾತುಗಳೇ ಕೇಳಿಬರುತ್ತಿವೆ. ವಾಣಿಜ್ಯ ಪ್ರದೇಶದಲ್ಲೂ ವರ್ತಕರು ಬಿಡುವಿನ ವೇಳೆಯಲ್ಲಿ ರಾಜಕೀಯ ವಿಚಾರಗಳನ್ನು ಚರ್ಚಿಸುವುದು ಕಂಡುಬರುತ್ತಿದೆ.

ಮಾಜಿ ಸಿಎಂ ಸಿದ್ದರಾಮಯ್ಯನವರು ವರುಣಾ ಕ್ಷೇತ್ರದಲ್ಲೇ ಸ್ಪರ್ಧಿಸುತ್ತಾರೆ, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜಿ.ಟಿ.ದೇವೇಗೌಡರ ಪ್ರತಿಸ್ಪರ್ಧಿ ಯಾರಾಗಬಹುದು, ಯಾರು ಕಣಕ್ಕಿಳಿದರೆ ಕಠಿಣ ಸ್ಪರ್ಧೆ ಸೃಷ್ಟಿಯಾಗಬಹುದು, ಹುಣಸೂರಿನಲ್ಲಿ ಜಿಟಿಡಿ ಪುತ್ರ ಹರೀಶ್‌ಗೌಡರು ಜಯಗಳಿಸಬಹುದಾ, ನಂಜನಗೂಡಿನಲ್ಲಿ ಕಾಂಗ್ರೆಸ್ ಟಿಕೆಟ್ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅಥವಾ ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪರಿಗೆ ಸಿಗಲಿದೆಯೇ, ಹೆಚ್.ಡಿ.ಕೋಟೆ ಕ್ಷೇತ್ರವನ್ನು ಮತ್ತೆ ಜೆಡಿಎಸ್ ತೆಕ್ಕೆಗೆ ತೆಗೆದುಕೊಳ್ಳಲಿದೆಯಾ, ಪಿರಿಯಾಪಟ್ಟಣದಲ್ಲಿ ಜೆಡಿಎಸ್ ಅಭ್ಯರ್ಥಿ ಕೆ.ಮಹದೇವ ಅವರಿಗೆ ಕಾಂಗ್ರೆಸ್ ಪ್ರಬಲ ಪೈಪೋಟಿ ನೀಡಬಹುದಾ, ತಿ.ನರಸೀಪುರದಲ್ಲಿ ಮತ್ತೆ ಜೆಡಿಎಸ್ ಗೆಲ್ಲಬಹುದಾ, ಕೆ.ಆರ್.ನಗರದಲ್ಲಿ ಸಾ.ರಾ.ಮಹೇಶ್ ಪ್ರತಿಸ್ಪರ್ಧಿ ಯಾರಾಗಬಹುದು, ಕೃಷ್ಣರಾಜ, ಚಾಮರಾಜ ಹಾಗೂ ನರಸಿಂಹರಾಜ ಕ್ಷೇತ್ರಗಳ ಸದ್ಯದ ಪರಿಸ್ಥಿತಿ ಏನು. ಹೀಗೆ ಮೈಸೂರು ಜಿಲ್ಲೆಯ ಕ್ಷೇತ್ರಗಳು ಮಾತ್ರವಲ್ಲದೆ ಮಂಡ್ಯ, ಚಾಮರಾಜನಗರ, ಹಾಸನ, ಕೊಡಗು, ರಾಮನಗರ, ಬೆಂಗಳೂರು ಇನ್ನಿತರ ಜಿಲ್ಲೆಗಳ ರಾಜಕೀಯ ಜಿದ್ದಾಜಿದ್ದಿ ಬಗ್ಗೆಯೂ ಮಾತನಾಡುವುದು ಸಹಜವಾಗಿದೆ.

> ಸ್ನೇಹಿತರು–ಸಂಬಂಧಿಕರು ಒಟ್ಟಿಗೆ ಕುಳಿತಾಗ ವೈಯಕ್ತಿಕ ವಿಚಾರಗಳ ಜೊತೆಗೆ ಲೋಕಾಭಿರಾಮವಾಗಿ ಮಾತನಾಡುವುದು ಸಹಜವಾಗಿತ್ತು. ಆದರೆ ಈಗ ಎಲ್ಲೆಡೆ ರಾಜಕೀಯ ಜ್ವರ ಶುರುವಾಗಿದ್ದು, ಮುಂದಿನ ದಿನಗಳಲ್ಲಿ ಅದರ ತಾಪ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ. ಆದರೆ ಏನೇ ರಾಜಕೀಯ ಜಿದ್ದಾಜಿದ್ದಿಯಿದ್ದರೂ ಸ್ನೇಹ–ಸಂಬಂಧ ಹಾಳಾಗದಂತೆ ಎಚ್ಚರ ವಹಿಸಿದರೆ ಒಳ್ಳೆಯದು.

ಅಷ್ಟೇ ಅಲ್ಲದೆ ಯಾವ ಕ್ಷೇತ್ರದಲ್ಲಿ ಸಮುದಾಯವಾರು ಮತದಾರರೆಷ್ಟು, ಯಾವ ಪಕ್ಷಕ್ಕೆ ಎಷ್ಟು ಮತ ವಿಂಗಡಣೆಯಾಗುತ್ತವೆ, ಅಭ್ಯರ್ಥಿ ಯಾರೇ ಆದರೂ ಪಕ್ಷಗಳಿಗೆ ಸಿಗುವ ನಿಶ್ಚಿತ ಮತಗಳೆಷ್ಟು, ಯಾವ ಸಮುದಾಯದವರನ್ನು ಕಣಕ್ಕಿಳಿಸಿದರೆ ಗೆಲುವಿಗೆ ಅನುಕೂಲ, ಯಾವ ನಾಯಕರು ಪ್ರಚಾರಕ್ಕೆ ಬಂದರೆ ಎಷ್ಟು ಹೊಸ ಮತಗಳನ್ನು ಸೆಳೆಯುವ ಸಾಧ್ಯತೆ ಇದೆ ಹೀಗೆ ರಾಜಕೀಯದ ಎಲ್ಲಾ ಮಜಲುಗಳು ಬಗ್ಗೆಯೂ ಚರ್ಚೆ ನಡೆಯುವುದಲ್ಲದೆ, ತಮ್ಮದೇ ಆದ ವಿಶ್ಲೇಷಣೆಯನ್ನೂ ನೀಡುತ್ತಾರೆ. ಈ ವೇಳೆ ಸಲುಗೆಯ ವಾಕ್ಸಮರವೂ ನಡೆಯುವುದನ್ನು ಕಾಣಬಹುದು.

ಏಕಾತ್ಮಕ ಸ್ವರೂಪದ ಖಾಸಗಿ ವಿಶ್ವವಿದ್ಯಾಲಯ ಸ್ಥಾಪನೆ



ಬೆಂಗಳೂರು,ಡಿ.29(ಕೆಎಂಶಿ)–ಏಕಾತ್ಮಕ ಸ್ವರೂಪದ ಖಾಸಗಿ ವಿಶ್ವವಿದ್ಯಾಲಯ ಸ್ಥಾಪಿಸಬೇಕೆಂಬ ರಾಜ್ಯ ಒಕ್ಕಲಿಗರ ಸಂಘದ ಕನಸು ನನಸಾಗುವ ಕಾಲ ಕೂಡಿ ಬಂದಿದೆ.

ವಿಶ್ವವಿದ್ಯಾಲಯ ಸ್ಥಾಪನೆ ಸಂಬಂಧ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು, 2022ರ ರಾಜ್ಯ ಒಕ್ಕಲಿಗರ ಸಂಘ ವಿಶ್ವವಿದ್ಯಾಲಯ ವಿಧೇಯಕವನ್ನು ವಿಧಾನಸಭೆಯಲ್ಲಿ ಮಂಡಿಸಿದ್ದು, ಈ ಸಮುದಾಯದ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಲು ಅನುಕೂಲ ಮಾಡಿಕೊಡುತ್ತಿದ್ದಾರೆ. ಒಕ್ಕಲಿಗರ ಸಂಘವು ಬಹಳ ದಿನಗಳಿಂದಲೂ ವಿವಿ ಸ್ಥಾಪಿಸಲು ಸಾಕಷ್ಟು ಶ್ರಮವಹಿಸಿ ಪ್ರಯತ್ನಪಟ್ಟಿತ್ತು. ಈಗ ಆ ಪ್ರಯತ್ನಕ್ಕೆ ತಕ್ಕ ಫಲ ದೊರೆತಿದೆ. ಉದ್ದೇಶಿತ ವಿವಿ ಸ್ಥಾಪನೆ ಮೂಲಕ ವಿಜ್ಞಾನ, ಎಂಜಿನಿಯರಿಂಗ್‌ನ ಎಲ್ಲ ವಿಭಾಗಗಳು, ವ್ಯವಸ್ಥಾಪನೆ, ವಾಣಿಜ್ಯ, ಸಮಾಜ ವಿಜ್ಞಾನ ಹಾಗೂ ಮಾನವಿಕ ಶಿಕ್ಷಣ ವಿಷಯಗಳಲ್ಲಿ ಅನ್ವಯಿಕ ವಿಶ್ವವಿದ್ಯಾಲಯ ಶಿಕ್ಷಣವನ್ನು ಉತ್ತೇಜಿಸಿ ಪ್ರಗತಿ ಸಾಧಿಸಬೇಕು ಎಂಬುದು ಎಲ್ಲರ ಬಯಕೆಯಾಗಿದೆ. ಗುಣಮಟ್ಟದ ಶಿಕ್ಷಣ ನೀಡುವುದರ ಜತೆಗೆ ದಾಖಲಾತಿ ಪ್ರಮಾಣ ಏರಿಕೆಗೂ ವಿಧೇಯಕ ಅವಕಾಶ ಮಾಡಿಕೊಟ್ಟಿದೆ.



ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಕಚೇರಿಯಲ್ಲಿ ರಾಷ್ಟ್ರಕವಿ ಕುವೆಂಪು ಜಯಂತಿ ಆಚರಣೆ ವೇಳೆ ಮುಡಾ ನೂತನ ಅಧ್ಯಕ್ಷ ಯಶಸ್ವಿ ಸೋಮಶೇಖರ್ ಅವರನ್ನು ಅಭಿನಂದಿಸಲಾಯಿತು. ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ, ರಾಜ್ಯ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಕೆ.ವಿ.ಶ್ರೀಧರ್, ನಿರ್ದೇಶಕರಾದ ಸಿ.ಜಿ.ಗಂಗಾಧರ್, ಎಂ.ಬಿ.ಮಂಚೇಗೌಡ, ವಿದ್ಯಾವಿಕಾಸ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಕವೀಶ್‌ಗೌಡ, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಜಿಲ್ಲಾ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಚೇತನ್, ಸಹ ಕಾರ್ಯದರ್ಶಿ ಜಯರಾಮ್, ನಿರ್ದೇಶಕರಾದ ಒಂಟಿಕೊಪ್ಪಲ್ ಗುರುರಾಜ್, ಕುಮಾರ್ ಗೌಡ, ಬಿ.ಪಿ.ಬೋರೇಗೌಡ, ಕೆ.ಪಿ.ನಾಗಣ್ಣ, ಪಿ.ಪ್ರಶಾಂತ್ ಗೌಡ, ಎ.ರವಿ, ಉಮೇಶ್ ಗೋಪಾಲ್, ಗಿರೀಶ್ ಗೌಡ, ಮುಖಂಡರಾದ ಚರಣ್‌ರಾಜ್, ವಿನಯ್, ತೇಜಸ್ ಲೋಕೇಶ್‌ಗೌಡ, ವೇದರಾಜ್, ಸಿದ್ದರಾಜು, ಅಭಿಷೇಕ್, ರಮೇಶ್ ಮತ್ತಿತರರಿದ್ದರು.

ರಾಷ್ಟ್ರಕವಿ ವಿಶ್ವಮಾನವ ಸಂದೇಶ ಪ್ರಸ್ತುತ

ಮಾಜಿ ಮೇಯರ್ ಸಂದೇಶ್ ಸ್ವಾಮಿ ಅಭಿಮತ



ಮೈಸೂರು,ಡಿ.29(ಎಸ್‌ಬಿಡಿ)–ರಾಷ್ಟ್ರಕವಿ ಕುವೆಂಪು ಅವರ ವಿಶ್ವಮಾನವ ಸಂದೇಶ ಇಡೀ ವಿಶ್ವಕ್ಕೆ ಪ್ರಸ್ತುತ ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಅಭಿಪ್ರಾಯಿಸಿದರು.

ಪ್ರಜ್ಞಾವಂತ ನಾಗರಿಕ ವೇದಿಕೆ ವತಿಯಿಂದ ಮೈಸೂರಿನ ಗನ್‌ಹೌಸ್ ವೃತ್ತದ ಬಳಿಯ ಕುವೆಂಪು ಉದ್ಯಾನದಲ್ಲಿ ಕುವೆಂಪು ಜಯಂತಿ ಆಚರಣೆ ವೇಳೆ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಸಂದೇಶ್ ಸ್ವಾಮಿ, ಕುವೆಂಪು ಅವರ ಸಂದೇಶ ವಿಶ್ವಕ್ಕೆ ಬೆಳಕು ಚೆಲ್ಲುತ್ತದೆ. ವಿಶ್ವಮಾನವ ಸಂದೇಶ ಸಾರಿದ್ದಷ್ಟೇ ಅಲ್ಲ ಅದರಂತೆ ನಡೆದರು. ಜೈ ಭಾರತ ಜನನಿಯ ತನುಜಾತೆ... ನಾಡಗೀತೆಯಲ್ಲಿ ಸರ್ವಜನಾಂಗದ ಶಾಂತಿಯ ತೋಟವೆಂದಿರುವುದು ನಾಡಿನ ಸಾಮರಸ್ಯದ ಹಿರಿಮೆಗೆ ಕನ್ನಡಿಯಾಗಿದೆ ಎಂದರು.

ಕುವೆಂಪು ಅವರ ಜಯಂತಿಯಂದು ಅವರ ಪ್ರತಿಮೆಗೆ ಹಾರ ಹಾಕಿ, ಅವರನ್ನು ಬಣ್ಣಿಸಿದರೆ ಸಾಲದು. ಅವರ ಹಾದಿಯಲ್ಲಿ ನಡೆಯುವ ಪ್ರಯತ್ನ ಮಾಡಬೇಕು. ಸರ್ವಜನಾಂಗದ ಶಾಂತಿಯ ತೋಟವಾಗಿರುವ ಕರುನಾಡಿನಲ್ಲಿ ಎಲ್ಲರೂ ಸಾಮರಸ್ಯದಿಂದ ಬದುಕಬೇಕು. ಹಿಂದೂ, ಕ್ರೈಸ್ತ, ಮುಸ್ಲಿಂ, ಜೈನ, ಬೌದ್ಧ ಯಾವ ಧರ್ಮದವರಾದರೂ ನಾವೆಲ್ಲಾ ಭಾರತೀಯರೆಂಬ ಭಾವನೆ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮೈಸೂರು ನಗರ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್, ಪಾಲಿಕೆ ನಾಮನಿರ್ದೇಶಿತ ಸದಸ್ಯ ಜಗದೀಶ್, ರಾಜ್ಯ ಹಿಂದುಳಿದ ವರ್ಗಗಳ ಸಂಚಾಲಕ ಮುರುಳಿ, ನರಸಿಂಹರಾಜ ಯುವ ಮೋರ್ಚಾ ಅಧ್ಯಕ್ಷ ಲೋಹಿತ್, ನಗರ ಹಿಂದುಳಿದ ವರ್ಗಗಳ ಮೋರ್ಚಾ ಕಾರ್ಯದರ್ಶಿ ಜಗದೀಶ್, ನಂದೀಶ್ ನಾಯಕ್, ಬಸವರಾಜ್ ಬಸಪ್ಪ ಮತ್ತಿತರರಿದ್ದರು.

ಬೇಡಿಕೆ ಈಡೇರಿಸದಿದ್ದರೆ ನಾಳೆ ಅಹೋರಾತ್ರಿ ಪ್ರತಿಭಟನೆ

ಜಿಲ್ಲಾ ಲಾರಿ ಮಾಲೀಕರ ಮತ್ತು ಚಾಲಕರ ಸಂಘ ಎಚ್ಚರಿಕೆ

ಮಡಿಕೇರಿ, ಡಿ.29– ಪ್ರಮುಖ ಬೇಡಿಕೆಗಳ ಈಡೇರಿಕೆಗಾಗಿ ರಾಜ್ಯ ಕ್ರಷರ್ ಮತ್ತು ಕಲ್ಲುಕೋರೆ ಮಾಲೀಕರ ಅಸೋಸಿಯೇಷನ್ ರಾಜ್ಯವ್ಯಾಪಿ ಕರೆ ನೀಡಿರುವ ಹಿನ್ನೆಲೆಯಲ್ಲಿ ಕೊಡಗು ಜಿಲ್ಲೆಯ ಎಲ್ಲಾ ಕ್ರಷರ್‌ಗಳು ಮುಚ್ಚಲ್ಪಟ್ಟಿವೆ. ಇದರಿಂದ ಲಾರಿ ಮಾಲೀಕರು, ಚಾಲಕರು, ಕಾರ್ಮಿಕ ವರ್ಗ ಕೆಲಸವಿಲ್ಲದೆ ಸಂಕಷ್ಟಕ್ಕೆ ಸಿಲುಕಿದೆ. ಜಿಲ್ಲೆಗೆ ಸೀಮಿತವಾಗಿ ಶುಕ್ರವಾರ ಸಂಜೆ 6 ಗಂಟೆಯ ಒಳಗಾಗಿ ಸಮಸ್ಯೆ ಬಗೆಹರಿಸಲು ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಡಿ.31 ರಂದು ಬೆಳಗ್ಗೆ ವಿವಿಧ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ನಗರದಲ್ಲಿ ಜಾಥಾ ನಡೆಸಿ, ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಸೇರಿದಂತೆ 'ಅಹೋರಾತ್ರಿ' ಪ್ರತಿಭಟನೆ ನಡೆಸುವುದಾಗಿ ಜಿಲ್ಲಾ ಲಾರಿ ಮಾಲೀಕರ ಮತ್ತು ಚಾಲಕರ ಸಂಘ ಸ್ಪಷ್ಟಪಡಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಜಿಲ್ಲಾಧ್ಯಕ್ಷ ಮಸೂದ್ ಮೊಹಮ್ಮದ್, ಕಟ್ಟಡ ಕಾಮಗಾರಿಗಳಿಗೆ ಅಗತ್ಯ ಸಾಮಗ್ರಿಗಳನ್ನು ಪೂರೈಸುವ ಲಾರಿ ಮಾಲೀಕರು, ಚಾಲಕರು, ಕಾರ್ಮಿಕರನ್ನು ಒಳಗೊಂಡಂತೆ 10 ಸಾವಿರ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿರುವುದಾಗಿ ಕಳವಳ ವ್ಯಕ್ತಪಡಿಸಿದರು.

ಕ್ರಷರ್‌ಗಳಿಗೆ ವಿಧಿಸುವ ಪೆನಾಲ್ಟಿಗಳಿಗೆ ಸಂಬಂಧಿಸಿದಂತೆ ಸಮಸ್ಯೆ ಬಗೆಹರಿಸುವಂತೆ ರಾಜ್ಯ ಕ್ರಷರ್ ಮತ್ತು ಕಲ್ಲುಕೋರೆ ಮಾಲೀಕರ ಅಸೋಸಿಯೇಷನ್ ಸರ್ಕಾರವನ್ನು ಕೋರಿತ್ತು. ಬೆಳಗಾವಿ ಅಧಿವೇಶನದಲ್ಲಿ ಸಮಸ್ಯೆ ಬಗೆಹರಿಯಬಹುದೆನ್ನುವ ನಿರೀಕ್ಷೆ ಹೊಂದಲಾಗಿತ್ತು. ಆದರೆ, ಅಧಿವೇಶನದಲ್ಲಿ ಸಮಸ್ಯೆ ಇತ್ಯರ್ಥವಾಗದ ಹಿನ್ನೆಲೆ ಇದೇ ಡಿ.22ರಿಂದ ಅಸೋಸಿಯೇಷನ್ ಏಕಾಏಕಿ ನೀಡಿದ ಕರೆಯಂತೆ ಕ್ರಷರ್‌ಗಳು ಮುಚ್ಚಲ್ಪಟ್ಟಿರುವುದಾಗಿ ಅವರು ತಿಳಿಸಿದರು.

ಕ್ರಷರ್, ಕಲ್ಲು ಕೋರೆ ಮುಚ್ಚಿರುವುದರಿಂದ ಕಾರ್ಮಿಕರಿಗೆ ಸಂಕಷ್ಟ



ಕಾಮಗಾರಿಗಳು ಸ್ಥಗಿತ: ಕ್ರಷರ್‌ಗಳು ಮುಚ್ಚಲ್ಪಟ್ಟಿರುವುದರಿಂದ ಜಿಲ್ಲೆಯಾದ್ಯಂತ ಎಲ್ಲಾ ಸರ್ಕಾರಿ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ ಇತರೆ ಖಾಸಗಿಯವರ ಕಾಮಗಾರಿಗಳು ಸ್ಥಗಿತಗೊಂಡಿವೆ. ಅಭಿವೃದ್ಧಿ ಕಾಮಗಾರಿಗೆ ಅಗತ್ಯವಾದ ಎಂ. ಸ್ಯಾಂಡ್, ಜಲ್ಲಿ, ಕಲ್ಲುಗಳನ್ನು ಪೂರೈಸಲು ಜಿಲ್ಲೆಯ ಲಾರಿ ಮಾಲೀಕರು ಚಾಲಕರುಗಳಿಗೆ ಸಾಧ್ಯವಾಗುತ್ತಿಲ್ಲವೆಂದು ಬೇಸರ ವ್ಯಕ್ತಪಡಿಸಿದರು. ಪ್ರಸ್ತುತ ಜಿಲ್ಲೆಯಲ್ಲಿ ಕಟ್ಟಡ ಸಾಮಗ್ರಿಗಳನ್ನು ಸಾಗಿಸುವ 1500 ಲಾರಿಗಳಿದ್ದು, 3 ಸಾವಿರ ಮಂದಿ ಚಾಲಕರು, 5 ಸಾವಿರದಷ್ಟು ತಲೆ ಹೊರೆ ಕಾರ್ಮಿಕರು, ಕ್ರಷರ್‌ಗಳಲ್ಲಿ ದುಡಿಯುವ 3 ಸಾವಿರಕ್ಕೂ ಹೆಚ್ಚಿನ ಕೂಲಿ ಕಾರ್ಮಿಕರುಗಳಿದ್ದಾರೆ. ಇವರನ್ನು ಅವಲಂಬಿಸಿದ 10 ಸಾವಿರ ಕುಟುಂಬಗಳು ಅಗತ್ಯ ಕೆಲಸವಿಲ್ಲದೆ ತೊಂದರೆಗೆ ಒಳಗಾಗಿದ್ದಾರೆ ಎಂದು ತೀವ್ರ ಕಳವಳ ವ್ಯಕ್ತಪಡಿಸಿದರು. ಸಮಸ್ಯೆ ಇತ್ಯರ್ಥವಾಗುವವರೆಗೆ ಇದೇ ರೀತಿ ಕ್ರಷರ್‌ಗಳು ಮುಚ್ಚಲ್ಪಟ್ಟರೆ ನಮ್ಮ ಪರಿಸ್ಥಿತಿ ಏನೆಂದು ಮಸೂದ್ ಮೊಹಮದ್ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಕೊಡಗು ಜಿಲ್ಲಾ ಲಾರಿ ಮಾಲೀಕರು ಮತ್ತು ಚಾಲಕರ ಸಂಘದ ಕಾನೂನು ಹೋರಾಟ ಸಮಿತಿಯ ಅಧ್ಯಕ್ಷ ಬೋಪಣ್ಣ ಎಂ.ಬಿ, ಜಿಲ್ಲಾ ಖಜಾಂಚಿ ಆರ್.ಮಂಜು, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸಿಜು ಎಂ.ಎ, ಮಡಿಕೇರಿ ತಾಲೂಕು ಅಧ್ಯಕ್ಷ ಬಿ.ಜಿ. ಮೋಹನ್, ಸಂಘದ ಸದಸ್ಯ ಡಿ.ಕೆಂಚಪ್ಪ ಉಪಸ್ಥಿತರಿದ್ದರು.

ತಾತ್ಕಾಲಿಕ ಸತ್ಯಾಪನೆ ಮುದ್ರೆ ಶಿಬಿರ

ಮಡಿಕೇರಿ, ಡಿ.29– ಕಾನೂನು ಮಾಪನಶಾಸ್ತ್ರ ಇಲಾಖೆ ವತಿಯಿಂದ ತಾತ್ಕಾಲಿಕ ಸತ್ಯಾಪನೆ ಮುದ್ರೆ ಶಿಬಿರವು ಡಿ.28 ರಿಂದ ಪ್ರಾರಂಭವಾಗಿದ್ದು, 31 ರವರೆಗೆ ಕೊಡ್ಲಿಪೇಟೆ ಬಸವೇಶ್ವರ ಕಲ್ಯಾಣ ಮಂಟಪದ ಎದುರಿನ ಯತೀಶ್ ಕಾಂಪ್ಲೆಕ್ಸ್‌ನಲ್ಲಿ ನಡೆಯಲಿದೆ. ತಮ್ಮಲ್ಲಿ ಉಪಯೋಗಿಸುವ ಅಳತೆ, ತೂಕ ಮತ್ತು ತೂಕದ ಸಾಧನಗಳನ್ನು ಹಾಜರುಪಡಿಸಿ ಸತ್ಯಾಪನೆ ಮುದ್ರೆ ಮಾಡಿಸುವಂತೆ ಕಾನೂನು ಮಾಪನಶಾಸ್ತ್ರ ನಿರೀಕ್ಷಕರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ವಿಶ್ವ ಮಾನವ ದಿನಾಚರಣೆ

ಕುವೆಂಪು ಕನ್ನಡ ಅಕ್ಷರ ಲೋಕದ ಮೇರು ಶಿಖರ



ಮಡಿಕೇರಿ, ಡಿ.29– ರಾಷ್ಟ್ರಕವಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕುವೆಂಪು ಅವರು ಕುಪ್ಪಳ್ಳಿಯಲ್ಲಿ ಹುಟ್ಟಿ, ಮೈಸೂರಿನಲ್ಲಿ ಬೆಳೆದು, ರಾಜ್ಯ, ರಾಷ್ಟ್ರ ಮಾತ್ರವಲ್ಲ ಇಡೀ ವಿಶ್ವಕ್ಕೆ ಕನ್ನಡ ಸಾಹಿತ್ಯವನ್ನು ವಿಸ್ತರಿಸಿ ಇತಿಹಾಸದ ದಿಗ್ಗಜರ ಪಾಲಿಗೆ ಸೇರಿದರು. ಕನ್ನಡ ಅಕ್ಷರ ಲೋಕದ ನವ ಸಾಹಿತ್ಯವನ್ನು ಮೇರು ಶಿಖರಕ್ಕೆ ಏರಿಸಿದ ಮಹಾನ್ ಚೇತನ ಎಂದು ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್ ವರ್ಣಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕ ಹಾಗೂ ಕೊಡಗು ಜಿಲ್ಲಾ ಜಾನಪದ ಪರಿಷತ್ ಸಹಕಾರದಲ್ಲಿ ನಗರದ 'ಕುವೆಂಪು ಪುತ್ಥಳಿ' ಆವರಣದಲ್ಲಿ ಗುರುವಾರ ನಡೆದ 'ವಿಶ್ವ ಮಾನವ ದಿನಾಚರಣೆ'ಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕುವೆಂಪು ಅವರು ನಮ್ಮ ತಲೆಮಾರನ್ನು ವೈಚಾರಿಕ ಅಂಗಳಕ್ಕೆ ಕರೆದೊಯ್ದು ಪರಿಚಯಿಸಿದ ಅದ್ಭುತ ವಿಚಾರವಂತ. ಕುವೆಂಪು ಅವರು ನೀಡಿರುವ ವಿಶ್ವ ಮಾನವ ಸಂದೇಶ ಸದಾ ಕಾಲಕ್ಕೆ ಸಲ್ಲುತ್ತದೆ ಎಂದು ಅವರು ನುಡಿದರು. ಕುವೆಂಪು ಅವರು ರಚಿಸಿದ ಎರಡು ಮಹಾ ಕಾದಂಬರಿಗಳಾದ 'ಕಾನೂರು ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಪ್ರಮುಖವಾಗಿವೆ. ಈ ಎರಡು ಕೃತಿಗಳು ಕನ್ನಡ ಸಾಹಿತ್ಯಕ ಮೌಲ್ಯವನ್ನು ಸಾರಿ ಹೇಳುತ್ತವೆ. ಮಲೆನಾಡಿನಲ್ಲಿ ನಡೆಯುವ ಈ ಕಥನಗಳು ಕುವೆಂಪು ಅವರ ನಿರೂಪಣಾ ಪ್ರತಿಭೆಗೆ ಶ್ರೇಷ್ಠ ಉದಾಹರಣೆಯಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷರು ಬಣ್ಣಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕದ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್ ಅವರು ಮಾತನಾಡಿ, ರಾಷ್ಟ್ರಕವಿ ಕುವೆಂಪು ಅವರು ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು ಎಂಬ ದೀಕ್ಷೆಯನ್ನು ಕೊಟ್ಟಿದ್ದಾರೆ. ನೀ ಮೆಟ್ಟುವ ನೆಲ ಅದೇ ಕರ್ನಾಟಕ, ನೀ ಕುಡಿಯುವ ನೀರು ಅದೇ ಕಾವೇರಿ, ಕನ್ನಡ ಮತ್ತು ಸಂಸ್ಕೃತಿ ವಿಶ್ವ ವ್ಯಾಪ್ತಿಯಾಗಿಯೂ ಕನ್ನಡತನ ಉಳಿಸಿಕೊಳ್ಳುವ ದೂರದೃಷ್ಟಿಯನ್ನು ಕುವೆಂಪು ಅವರು ನೀಡಿದ್ದಾರೆ ಎಂದು ಅವರು ವಿವರಿಸಿದರು.

ಕೊಡಗು ಜಿಲ್ಲಾ ಜಾನಪದ ಪರಿಷತ್ ಅಧ್ಯಕ್ಷ ಬಿ.ಜಿ.ಅನಂತಶಯನ, ಜಿಪಂ ಮಾಜಿ ಅಧ್ಯಕ್ಷರು ಹಾಗೂ ಕುವೆಂಪು ಅವರ ಕುಟುಂಬಸ್ಥರಾದ ಕೆ.ಪಿ.ಚಂದ್ರಕಲಾ ಅವರು ಮಾತನಾಡಿದರು. ಕುವೆಂಪು ಅವರ ಪುತ್ಥಳಿ ನವೀಕರಣಕ್ಕೆ ಜಿಲ್ಲಾಡಳಿತ ಸ್ಪಂದಿಸಿದ್ದು, ಜಿಲ್ಲಾಧಿಕಾರಿ ಅವರಿಗೆ ಕೃತಜ್ಞತೆ ಎಂದು ಇದೇ ಸಂದರ್ಭದಲ್ಲಿ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಮುನೀರ್ ಅಹಮ್ಮದ್, ಉಪ ವಿಭಾಗಾಧಿಕಾರಿ ಯತೀಶ್ ಉಳ್ಳಾಲ್, ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಸರ್ವೋದಯ ಸಮಿತಿ ಅಧ್ಯಕ್ಷ ಅಂಬೆಕಲ್ ಕುಶಾಲಪ್ಪ, ರಕ್ಷಣಾ ವೇದಿಕೆಯ ರವಿಗೌಡ, ತಹಶೀಲ್ದಾರ್ ಪಿ.ಎಸ್.ಮಹೇಶ್, ಪೌರಾಯುಕ್ತ ವಿಜಯ, ನೆರವಂಡ ಉಮೇಶ್, ಅಂಬೆಕಲ್ ನವೀನ್, ಕಾರ್ಮಿಕ ಇಲಾಖಾ ಅಧಿಕಾರಿ ಅನಿಲ್ ಬಗಟಿ, ಜಿಲ್ಲಾ ಆಯುಷ್ ಅಧಿಕಾರಿ ಡಾ.ರೇಣುಕಾ ದೇವಿ, ಕಸಾಪ ಗೌರವ ಕಾರ್ಯದರ್ಶಿ ರೇವತಿ ರಮೇಶ್, ಜಾನಪದ ಪರಿಷತ್ತಿನ ಸಂಪತ್ತು ಕುಮಾರ್, ಮದೆ ಮಹೇಶ್ವರ ಕಾಲೇಜಿನ ಪ್ರಾಂಶುಪಾಲರಾದ ಸಿದ್ದರಾಜು ಬೆಳ್ಳಯ್ಯ ಇತರರು ಇದ್ದರು.

ಆಸ್ತಿ ವೈಷಮ್ಯ: ಗುಂಡಿನ ದಾಳಿಯಿಂದ ವ್ಯಕ್ತಿ ಪಾರು

ಪಿಕ್‌ಅಪ್ ವಾಹನಕ್ಕೆ ತಾಗಿದ ಗುಂಡು, ಮತ್ತೋರ್ವನ ಮೇಲೆ ಹಲ್ಲೆ

ಮಡಿಕೇರಿ, ಡಿ.29– ಆಸ್ತಿ ವೈಷಮ್ಯದ ಹಿನ್ನೆಲೆಯಲ್ಲಿ ವ್ಯಕ್ತಿಯೊರ್ವರು ಮತ್ತೋರ್ವ ವ್ಯಕ್ತಿ ಮೇಲೆ ನಡೆಸಿದ ಗುಂಡಿನ ದಾಳಿಯಿಂದ ಆತ ಪಾರಾಗಿರುವ ಘಟನೆ ಮಡಿಕೇರಿ ಬಳಿಯ ಬಿಳಿಗೇರಿಯಲ್ಲಿ ನಡೆದಿದೆ.

ಬಿಳಿಗೇರಿ ಗ್ರಾಮದ ಡಿ.ನಿಶ್ಚಲ್, ಭುಜಂಗಯ್ಯ ಹಾಗೂ ಡಿ.ತೀರ್ಥ ಅವರುಗಳ ಮಧ್ಯೆ ಆಸ್ತಿ ವಿಚಾರಕ್ಕೆ ಸಂಬಂಧಿಸಿದಂತೆ ವೈಷಮ್ಯವಿತ್ತು. ಈ ವಿಷಯಕ್ಕೆ ಸಂಬಂಧಿಸಿದಂತೆ ಮಾತುಕತೆ ನಡೆಸುವ ಸಂಬಂಧ ಊರಿನಲ್ಲಿ ಸಭೆ ಕರೆಯಲಾಗಿತ್ತು ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಪಿಕ್‌ಅಪ್ ವಾಹನದಲ್ಲಿ ತೀರ್ಥ ಅವರು ಸಭೆಗೆ ಆಗಮಿಸುತ್ತಿದ್ದ ಸಂದರ್ಭ ಭುಜಂಗಯ್ಯ ಅವರು ಬಂದೂಕಿನಿಂದ ಗುಂಡು ಹಾರಿಸಿದ್ದಾರೆ ಎನ್ನಲಾಗಿದೆ.

ಈ ವೇಳೆ ತೀರ್ಥ ಅವರು ಗುಂಡಿನ ದಾಳಿಯಿಂದ ತಪ್ಪಿಸಿಕೊಂಡಿದ್ದು, ಗುಂಡು ವಾಹನ ಹಾಗೂ ಸೀಟ್‌ಗೆ ತಗುಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ನಡುವೆ ನಿಶ್ಚಲ್ ಅವರ ಮೇಲೆ ಕೆಲವರು ಹಲ್ಲೆ ನಡೆಸಿದ ಪರಿಣಾಮ ನಿಶ್ಚಲ್ ಆಸ್ಪತ್ರೆಗೆ ದಾಖಲಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಘಟನೆಗಳ ಕುರಿತು ಮಡಿಕೇರಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಘಟನಾ ಸ್ಥಳ ಮತ್ತು ಜಿಲ್ಲಾಸ್ಪತ್ರೆಗೆ ತೆರಳಿದ ಮಡಿಕೇರಿ ಉಪ ವಿಭಾಗದ ಡಿವೈಎಸ್‌ಪಿ ಗಜೇಂದ್ರ ಪ್ರಸಾದ್ ಅವರುಗಳು ಮಾಹಿತಿ ಪಡೆದಿದ್ದಾರೆ.

ಇಂದು ಕಾಲೇಜು ವಾರ್ಷಿಕೋತ್ಸವ

ಮಡಿಕೇರಿ ಡಿ.29– ಸರ್ಕಾರಿ ಪದವಿ ಪೂರ್ವ ಕಾಲೇಜಿನ 2022–23 ನೇ ಸಾಲಿನ ಕಾಲೇಜು ವಾರ್ಷಿಕೋತ್ಸವ ಮತ್ತು ವಿದ್ಯಾರ್ಥಿ ಸಂಘದ ಸಮಾರೋಪ ಸಮಾರಂಭವು ಡಿ.30 ರಂದು ಬೆಳಗ್ಗೆ 10.30 ಗಂಟೆಗೆ ನಗರದ ಸರಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ನಡೆಯಲಿದೆ. ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಸಿ.ಪುಟ್ಟರಾಜು ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಕರ್ತವ್ಯ ಲೋಪ: ಹುಲಿಕೆರೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಅಮಾನತು

ಶ್ರೀರಂಗಪಟ್ಟಣ, ಡಿ.29– ಅಕ್ರಮ ಖಾತೆ, ಕರ್ತವ್ಯ ಲೋಪ ಎಸಗಿದ ಆರೋಪದ ಮೇಲೆ ತಾಲೂಕಿನ ಹುಲಿಕೆರೆ ಗ್ರಾಪಂ ಕಾರ್ಯದರ್ಶಿ ಎಸ್.ಶಿವಲಿಂಗಯ್ಯ ಅವರನ್ನು ಜಿಪಂ ಸಿಇಓ ಶಾಂತ ಹುಲ್ಮನಿ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.



ತಾಲೂಕಿನ ಹೊಸಹುಂಡವಾಡಿ ಗ್ರಾಮದ ಹೆಚ್.ಸಿ.ರಘು ಎಂಬುವರಿಗೆ ಸೇರಿದ 31x41 ಅಳತೆಯ ಮನೆಯನ್ನು ಅಕ್ರಮವಾಗಿ ಪುಟ್ಟಲಕ್ಷ್ಮಮ್ಮ ಮತ್ತು ಚನ್ನೇಗೌಡರ ಹೆಸರಿಗೆ ಅಕ್ರಮ ಖಾತೆ ಮಾಡಿಕೊಟ್ಟಿದ್ದ ಹಿನ್ನೆಲೆಯಲ್ಲಿ ಕಾರ್ಯದರ್ಶಿ ಶಿವಲಿಂಗಯ್ಯ ವಿರುದ್ಧ ಜಿಪಂ ಸಿಇಓ ಹಾಗೂ ತಾಪಂ ಇಓಗೆ ದೂರು ನೀಡಲಾಗಿತ್ತು. ಈ ಹಿನ್ನೆಲೆಯಲ್ಲಿ ಜಿಪಂ ಉಪ ಕಾರ್ಯದರ್ಶಿ, ಸಹಾಯಕ ಕಾರ್ಯದರ್ಶಿ ಹಾಗೂ ಶ್ರೀರಂಗಪಟ್ಟಣ ತಾಪಂ ಇಓ ಅವರ ಜಂಟಿ ಪರಿಶೀಲನೆ ವೇಳೆ ಶಿವಲಿಂಗಯ್ಯ ಅವರು ನಿಯಮ ಬಾಹಿರವಾಗಿ ಇ–ಸ್ವತ್ತು ಮಾಡಿರುವುದು ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಲಾಗಿತ್ತು. ಈ ವರದಿ ಆಧಾರದ ಮೇಲೆ ಜಿಪಂ ಸಿಇಓ ಶಾಂತ ಹುಲ್ಮನಿ ಅವರು ಶಿವಲಿಂಗಯ್ಯ ಅವರನ್ನು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ದೇವೇಗೌಡರೊಂದಿಗೆ ಅಮಿತ್ ಶಾ ಮೆಗಾ ಡೇರಿ ಉದ್ಘಾಟನೆ

ಮಂಡ್ಯ, ಡಿ.29– ಗೆಜ್ಜಲಗೆರೆಯ ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ಗೆಜ್ಜಲಗೆರೆ ವತಿಯಿಂದ ಮೆಗಾ ಡೇರಿಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಸಿಎಂ ಬಸವರಾಜ ಬೊಮ್ಮಾಯಿ ಅವರೊಂದಿಗೆ ಉದ್ಘಾಟಿಸಲಿದ್ದಾರೆ ಎಂದು ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರ ತಿಳಿಸಿದರು.



ಮನ್‌ಮುಲ್ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶುಕ್ರವಾರ ಬೆಳಗ್ಗೆ 10.30ಕ್ಕೆ ಮದ್ದೂರು ತಾಲೂಕಿನ ಗೆಜ್ಜಲಗೆರೆಯ ಮನ್‌ಮುಲ್‌ನಲ್ಲಿ ಮೆಗಾ ಡೇರಿ ಉದ್ಘಾಟನಾ ಸಮಾರಂಭ ನಡೆಯಲಿದೆ ಎಂದರು.

ಸಮಾರಂಭದ ಸಾನ್ನಿಧ್ಯವನ್ನು ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದ ಶ್ರೀ ವಹಿಸಲಿದ್ದು, ಮೆಗಾ ಡೇರಿಯನ್ನು ಕೇಂದ್ರ ಸಚಿವ ಅಮಿತ್ ಶಾ ಉದ್ಘಾಟಿಸುವರು. ಸಮಾರಂಭವನ್ನು ಸಿಎಂ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರೆ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಜ್ಯೋತಿ ಬೆಳಗಿಸಲಿದ್ದಾರೆ. ಯುಎಚ್‌ಟಿ ಕಟ್ಟಡವನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಲೋಕಾರ್ಪಣೆಗೊಳಿಸಲಿದ್ದು, ಒಕ್ಕೂಟದ ಕೈಪಿಡಿಯನ್ನು ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಬಿಡುಗಡೆ ಮಾಡುವರು ಎಂದರು. ಹಾಲಿನ ಪುಡಿ ಘಟಕವನ್ನು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, ಪಶು ಸಂಗೋಪನಾ ಸಚಿವ ಪ್ರಭು ಚೌಹಾಣ್ ನೂತನ ಬಾಯ್ಲರ್ ಘಟಕ, ನೂತನ ರೆಫ್ರಿಜರೇಶನ್ ಘಟಕವನ್ನು ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಉದ್ಘಾಟಿಸಲಿದ್ದು, ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರ ಅಧ್ಯಕ್ಷತೆ ವಹಿಸುವರು ಎಂದರು.

ಮುಖ್ಯ ಅತಿಥಿಗಳಾಗಿ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಹೆಚ್.ಡಿ. ಕುಮಾರಸ್ವಾಮಿ, ಸಿದ್ದರಾಮಯ್ಯ, ಎಸ್.ಎಂ. ಕೃಷ್ಣ ಆಗಮಿಸಲಿದ್ದು, ವಿಶೇಷ ಆಹ್ವಾನಿತರಾಗಿ ಜಿಲ್ಲೆಯ ಸಂಸದರು, ಹಾಲಿ, ಮಾಜಿ ಜನಪ್ರತಿನಿಧಿಗಳು ಹಾಗೂ ಅಕ್ಕಪಕ್ಕದ ಜಿಲ್ಲೆಯ ಜನಪ್ರತಿನಿಧಿಗಳನ್ನು ಆಹ್ವಾನಿಸಲಾಗಿದೆ ಎಂದರು. ಗೋಷ್ಠಿಯಲ್ಲಿ ಮನ್‌ಮುಲ್ ಉಪಾಧ್ಯಕ್ಷ ಎಂ.ಎಸ್.ರಘುನಂದನ್, ನಿರ್ದೇಶಕರಾದ ಬಾಲು, ರೂಪಾ, ಕೋಟಿ ರವಿ, ಡಾಲು ರವಿ, ವ್ಯವಸ್ಥಾಪಕ ನಿರ್ದೇಶಕ ಮಂಜೇಶ್ ಉಪಸ್ಥಿತರಿದ್ದರು.

ರೈತರೊಂದಿಗೆ ಸಂಧಾನ ಸಫಲ: ಅಮಿತ್ ಶಾ ಭೇಟಿಗೆ ಅವಕಾಶ ಭರವಸೆ



ಮಂಡ್ಯ, ಡಿ.29– ನಾಳೆ ಮಂಡ್ಯದಲ್ಲಿ ನಡೆಯುವ ವಿವಿಧ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗವಹಿಸಲಿದ್ದು, ಈ ವೇಳೆ ತಮ್ಮ ಬೇಡಿಕೆಗಳನ್ನು ಹೇಳಿಕೊಳ್ಳಲು ಐವರು ರೈತರನ್ನು ಅಮಿತ್ ಶಾ ಅವರೊಂದಿಗೆ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ತಿಳಿಸಿದರು. ಇದಕ್ಕೆ ಪ್ರತಿಭಟನಾನಿರತ ರೈತರು ಒಪ್ಪಿಗೆ ಸೂಚಿಸಿದ್ದು, ರೈತರೊಂದಿಗಿನ ಸರ್ಕಾರದ ಸಂಧಾನ ತಾತ್ಕಾಲಿಕವಾಗಿ ಸಫಲವಾಗಿದೆ.

ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಬಳಿ ವಿವಿಧ ಸಂಘಟನೆಗಳ ರೈತ ಮುಖಂಡರೊಂದಿಗೆ ಸಭೆ ನಡೆಸಿ ಬಳಿಕ ಮಾತನಾಡಿದ ಸಚಿವರು, ರೈತರ ಸಮಸ್ಯೆಗಳ ಕುರಿತು ಜ.7 ರೊಳಗೆ ಮುಖ್ಯಮಂತ್ರಿಗಳೊಂದಿಗೆ ಸಭೆ ನಡೆಸಿ ಚರ್ಚಿಸಿ ಬಗೆಹರಿಸಿಕೊಡುತ್ತೇವೆ ಎಂದರು.

ನಾಳೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಂಡ್ಯ ಜಿಲ್ಲೆಗೆ ಆಗಮಿಸುವ ವೇಳೆ ರೈತರು ತಮ್ಮ ಬೇಡಿಕೆಗಳನ್ನು ಸಚಿವರ ಮುಂದೆ ಹೇಳಿಕೊಳ್ಳಲು ಅವಕಾಶ ಮಾಡಿ ಕೊಡುತ್ತೇನೆ ಎಂದು ರೈತರಿಗೆ ಭರವಸೆ ನೀಡಿದರು.

ಜಿಲ್ಲೆಯಲ್ಲಿ ಹಲವು ದಿನಗಳಿಂದ ವಿವಿಧ ಸಂಘಟನೆಗಳೊಂದಿಗೆ ಸೇರಿ ರೈತರು ತಮ್ಮ ಬೇಡಿಕೆಯನ್ನಿಟ್ಟು ಮಾಡುತ್ತಿದ್ದ ಪ್ರತಿಭಟನೆ ಕೈಬಿಡಲಾಗಿದೆ ಎಂದು ರೈತ ಮುಖಂಡರು ತಿಳಿಸಿದ್ದು, ನಿನ್ನೆ ಪ್ರತಿಭಟನೆಯನ್ನು ಪೊಲೀಸರು ಸ್ಥಗಿತಗೊಳಿಸಿದ ಬಳಿಕವೂ ತಡರಾತ್ರಿಯಿಂದ ಮತ್ತೆ ಪ್ರತಿಭಟನೆ ಆರಂಭ ಮಾಡಲಾಗಿತ್ತು. ಜೊತೆಗೆ ಶಾ ಅವರಿಗೆ ಕಪ್ಪು ಬಾವುಟ ಪ್ರದರ್ಶನ ಮಾಡುವ ಎಚ್ಚರಿಕೆ ಸಹ ನೀಡಿದ್ದರು. ಈ ನಿಟ್ಟಿನಲ್ಲಿ ಸಚಿವ ಗೋಪಾಲಯ್ಯ ನೇತೃತ್ವದಲ್ಲಿ ಸಭೆ ನಡೆಸಿ, ಕೇಂದ್ರ ಗೃಹ ಸಚಿವರನ್ನು ಭೇಟಿ ಮಾಡಿಸುವ ಭರವಸೆ ನೀಡಿರುವುದರಿಂದ ಧರಣಿಯನ್ನು ತಾತ್ಕಾಲಿಕವಾಗಿ ವಾಪಸ್ ಪಡೆಯಲಾಗಿದೆ.

ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್, ಡಿಸಿ ಡಾ.ಹೆಚ್.ಎನ್. ಗೋಪಾಲಕೃಷ್ಣ, ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಹಾಗೂ ಜಿಲ್ಲೆಯ ವಿವಿಧ ಸಂಘಟನೆ ರೈತ ಮುಖಂಡರು ಸೇರಿದಂತೆ ಇತರರಿದ್ದರು.

ಸುಮಲತಾ ಶೀಘ್ರ ಬಿಜೆಪಿ ಸೇರ್ಪಡೆ: ಯೋಗೇಶ್ವರ್

ಮಂಡ್ಯ, ಡಿ.29– ಸಂಸದೆ ಸುಮಲತಾ ಶೀಘ್ರ ಬಿಜೆಪಿ ಸೇರಲಿದ್ದು, ಪಕ್ಷದ ವರಿಷ್ಠರು ಈ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸದರ ಸೇರ್ಪಡೆ ಬಗ್ಗೆ ಈ ಹಿಂದಿನಿಂದಲೂ ಮಾತುಕತೆ ನಡೆಯುತ್ತಿದೆ. ಅವರು ಬಿಜೆಪಿ ಬಗ್ಗೆ ಒಲವು ಹೊಂದಿದ್ದು, ಶೀಘ್ರ ಪಕ್ಷಕ್ಕೆ ಸೇರ್ಪಡೆಯಾಗಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ವರಿಷ್ಠರು ಕೇವಲ ಉತ್ತರ ಕರ್ನಾಟಕದ ಬೆಳಗಾವಿ, ಹುಬ್ಬಳ್ಳಿ, ಕರಾವಳಿಗೆ ಮಾತ್ರ ಬರುತ್ತಾರೆ ಹೋಗುತ್ತಾರೆ ಎಂಬ ಮಾತಿತ್ತು. ಆದರೆ ಹಳೇ ಮೈಸೂರು ಭಾಗದಲ್ಲಿ ಬಿಜೆಪಿಯನ್ನು ಸದೃಢಗೊಳಿಸಲು ಅಮಿತ್ ಷಾ ಅವರೇ ಮಂಡ್ಯ ಜಿಲ್ಲೆಗೆ ಆಗಮಿಸುತ್ತಿದ್ದು, ಈ ಭಾಗದ ಎಲ್ಲಾ ಜಿಲ್ಲೆಗಳಿಗೂ ಅವರು ಬರಲಿದ್ದಾರೆ. ಜೊತೆಗೆ ಪ್ರಧಾನಿ ಮೋದಿ ಸಹ ಬರುತ್ತಾರೆ ಎಂದು ಹೇಳಿದರು.

ಗೋಷ್ಠಿಯಲ್ಲಿ ಸಚಿವ ಕೆ.ಗೋಪಾಲಯ್ಯ, ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಮುಖಂಡ ಸಿದ್ದರಾಮಯ್ಯ, ವಕ್ತಾರರಾದ ಮಹೇಶ್, ಸಿ.ಟಿ.ಮಂಜುನಾಥ್ ಇತರರಿದ್ದರು.

ಅರಣ್ಯ ಇಲಾಖೆ ಬೋನಿಗೆ ಬಿದ್ದ ಚಿರತೆ

ಪಾಂಡವಪುರ, ಡಿ.29– ತಾಲೂಕಿನ ಚಿಕ್ಕಕೊಪ್ಪಲು ಗ್ರಾಮದಲ್ಲಿ ಅರಣ್ಯ ಇಲಾಖೆ ಇರಿಸಿದ್ದ ಬೋನಿನಲ್ಲಿ ಚಿರತೆ ಸೆರೆಯಾಗಿದೆ.



ಗ್ರಾಮದ ಹೊರವಲಯದ ಶಿವರಾಮು ಎಂಬುವರ ಜಮೀನಿನಲ್ಲಿ ಅರಣ್ಯಾಧಿಕಾರಿಗಳು ಇರಿಸಿದ್ದ ಬೋನಿಗೆ ಗುರುವಾರ ಮಧ್ಯಾಹ್ನ ಗಂಡು ಚಿರತೆ ಸೆರೆಸಿಕ್ಕಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯಾಧಿಕಾರಿಗಳು ಚಿರತೆ ಸ್ಥಳಾಂತರಿಸಿದ್ದು, ಮೇಲಾಧಿಕಾರಿಗಳ ಅನುಮತಿ ಪಡೆದು ಬಂಡೀಪುರ ಅಥವಾ ನಾಗರಹೊಳೆಗೆ ಚಿರತೆ ಬಿಡಲಾಗುವುದು ಎಂದು ವಲಯ ಅರಣ್ಯಾಧಿಕಾರಿ ಪುಟ್ಟಸ್ವಾಮಿ ತಿಳಿಸಿದರು. ಕಾರ್ಯಾಚರಣೆಯಲ್ಲಿ ಅರಣ್ಯ ಇಲಾಖೆ ಡಿಆರ್‌ಎಫ್ ಇಮ್ರಾನ್, ಸಿಬ್ಬಂದಿಗಳಾದ ಧನಂಜಯ್, ಲವ ಇದ್ದರು.

ಕಾಂಗ್ರೆಸ್ಸಿನ ಎಲ್ಲಾ ಪ್ರಧಾನಿಗಳು ಭ್ರಷ್ಟರು

ಬಿಜೆಪಿ ರಾಜ್ಯ ಪ್ರಕೋಷ್ಠಗಳ ಕಾರ್ಯಕಾರಿಣಿ ಸಮಾರೋಪದಲ್ಲಿ ನಳೀನ್‌ಕುಮಾರ್ ಕಟೀಲ್ ಆರೋಪ

ಚಾಮರಾಜನಗರ, ಡಿ.29– ದೇಶಕ್ಕೆ ಪರಿವಾರ ವಾದ, ಆತಂಕ ವಾದ ಹಾಗೂ ಭ್ರಷ್ಟಾಚಾರ ವಾದ ಕಾಂಗ್ರೆಸ್‌ನ ಕೊಡುಗೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಆರೋಪಿಸಿದರು.



ನಗರದ ಸತ್ತಿ ರಸ್ತೆಯಲ್ಲಿರುವ ಕಿಂಗ್ಸ್ ಕೋರ್ಟ್ ರೆಸಾರ್ಟ್‌ನಲ್ಲಿ ನಡೆದ ಬಿಜೆಪಿ ರಾಜ್ಯ ಪ್ರಕೋಷ್ಠಗಳ ಕಾರ್ಯಕಾರಿಣಿ ಸಮಾರೋಪದಲ್ಲಿ ಮಾತನಾಡಿ, ದೇಶದಲ್ಲಿ ದೀರ್ಘಾವಧಿಯ ಅಧಿಕಾರ ನಡೆಸಿದ್ದು ಕಾಂಗ್ರೆಸ್. ಮೊದಲ ಪ್ರಧಾನಿ ನೆಹರು ಅವರಿಂದ ಮನಮೋಹನ್ ಸಿಂಗ್‌ವರೆಗೆ ಹಲವು ಹಗರಣ ನಡೆದಿದೆ ಲಾಲ್‌ಬಹದ್ದೂರ್ ಶಾಸ್ತ್ರಿ ಹೊರತಾಗಿ ಕಾಂಗ್ರೆಸ್‌ನ ಎಲ್ಲಾ ಪ್ರಧಾನಿಗಳು ಭ್ರಷ್ಟರು. ಸಿದ್ದರಾಮಯ್ಯ ಕಾಲದಲ್ಲೂ ಹಾಸಿಗೆಯಿಂದ ಹಿಡಿದು ಸೋಲಾರ್‌ವರೆಗೆ ಹಗರಣ ನಡೆದಿದೆ ಎಂದು ಆರೋಪಿಸಿದರು.

ಭ್ರಷ್ಟಾಚಾರದ ಪಿತಾಮಹ ಕಾಂಗ್ರೆಸ್ ಪಕ್ಷ. ಹೆಚ್ಚು ಭ್ರಷ್ಟಾಚಾರ ಮಾಡಿರುವುದೇ ಕಾಂಗ್ರೆಸ್. ಕಳೆದ 9 ವರ್ಷದ ನರೇಂದ್ರ ಮೋದಿ ಅವರ ಆಡಳಿತದಲ್ಲಿ ಮೋದಿ ಅವರ ಮೇಲಾಗಲಿ ಅಥವಾ ಸಚಿವ ಸಂಪುಟದ ಮೇಲಾಗಲಿ, ಸಂಸದರ ಮೇಲಾಗಲಿ ಒಂದೇ ಒಂದು ಭ್ರಷ್ಟಾಚಾರ ಆರೋಪ ಇಲ್ಲ. ಇದನ್ನು ಜನರು ಅರ್ಥ ಮಾಡಿಕೊಳ್ಳಬೇಕು ಎಂದರು.

ಭಯೋತ್ಪಾದಕರು, ಉಗ್ರರಿಗೆ ಬೆಂಬಲ ಕೊಡುತ್ತಾ ಕಾಂಗ್ರೆಸ್ ಭಯೋತ್ಪಾದಕರ ಪಾರ್ಟಿಯೇ ಆಗಿಬಿಟ್ಟಿದೆ. ಕಾಂಗ್ರೆಸ್ ಕಾಲದಲ್ಲಿ ಕೇವಲ ಬಾಂಬ್ ತಯಾರಕ ಕಾರ್ಖಾನೆಗಳು ಮಾತ್ರ ಸ್ಥಾಪನೆಯಾದವು. ಕೇವಲ ಭಯೋತ್ಪಾದನೆಗೆ ಬೆಂಬಲ ನೀಡುವ ಕೆಲಸ ಕಾಂಗ್ರೆಸ್ ಅವಧಿಯಲ್ಲಿ ಆಗಿದೆ ಎಂದು ಕಿಡಿಕಾರಿದರು. ನವಭಾರತಕ್ಕೆ ನವ ಕರ್ನಾಟಕ ಕಟ್ಟುವ ನಿಟ್ಟಿನಲ್ಲಿ ಜಿಲ್ಲೆಯಿಂದಲೇ ಪ್ರಾರಂಭವಾಗಲಿದೆ. ಚಾಮರಾಜನಗರದ ನಾಲ್ಕು ಕ್ಷೇತ್ರದಲ್ಲಿ ಬಿಜೆಪಿ ಗೆಲ್ಲಲಿದೆ. ಹಳೆ ಮೈಸೂರು ಭಾಗದಲ್ಲಿ ಬಿಜೆಪಿ ಅಧಿಕಾರ ಹಿಡಿಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ಆಕಾಂಕ್ಷಿಗಳ ಪಟ್ಟಿ ದೊಡ್ಡದಿರುವುದು ಹೆಮ್ಮೆ ವಿಚಾರ. ಇಂದು ಕಾಂಗ್ರೆಸ್ ಜೆಡಿಎಸ್‌ನಲ್ಲಿ ಅಭ್ಯರ್ಥಿಗಳಿಗಾಗಿ ಅರ್ಜಿ ಕರೆಯುವಂತ ಪರಿಸ್ಥಿತಿ ನಿರ್ಮಾಣವಾಗಿದೆ. ಹಣ ನೀಡಿ ಅರ್ಜಿ ಹಾಕಬೇಕು. ನಮ್ಮಲ್ಲಿ ಕಾರ್ಯಕರ್ತನ ಶ್ರಮವನ್ನು ನೋಡಿ ಅವಕಾಶ ನೀಡುತ್ತೇವೆ ಎಂದರು. ಅಂಬೇಡ್ಕರ್ ಅವರ ಹೆಸರಿನಲ್ಲಿ ಅಧಿಕಾರವನ್ನು ಪಡೆದ ಕಾಂಗ್ರೆಸ್ ಅವರಿಗೆ ಚುನಾವಣೆಗೆ ನಿಲ್ಲಲು ಅವಕಾಶ ನೀಡಲಿಲ್ಲ. ಅವರು ಮೃತರಾದ ಸಂದರ್ಭದಲ್ಲಿ ದೆಹಲಿಯಲ್ಲಿ ಅವರ ಅಂತ್ಯಸಂಸ್ಕಾರಕ್ಕೂ ಸೂಕ್ತ ಬೆಂಬಲ ನೀಡಿರಲಿಲ್ಲ. ಈ ಮೂಲಕ ಅಂಬೇಡ್ಕರ್‌ಗೂ ಕಾಂಗ್ರೆಸ್ ಅವಮಾನ ಮಾಡಿತ್ತು ಎಂದು ದೂರಿದರು.

ಸಭೆಯಲ್ಲಿ ಬಿಜೆಪಿ ರಾಜ್ಯ ಪ್ರಕೋಷ್ಠಗಳ ಸಂಯೋಜಕ ಎಂ.ಬಿ. ಭಾನುಪ್ರಕಾಶ್, ಸಹ ಸಂಯೋಜಕ ಜಯತೀರ್ಥ ಕಟ್ಟಿ, ಬಿಜೆಪಿ ರಾಜ್ಯ ಉಪಾಧ್ಯಕ್ಷರೂ ಆದ ಜಿಲ್ಲೆಯ ಸಂಘಟನಾ ಉಸ್ತುವಾರಿ ರಾಜೇಂದ್ರ, ಜಿಲ್ಲಾಧ್ಯಕ್ಷ ಆರ್. ಸುಂದರ್, ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ, ಕಾಡಾ ಅಧ್ಯಕ್ಷ ಜಿ. ನಿಜಗುಣರಾಜು, ಎಪಿಎಂಸಿ ಅಧ್ಯಕ್ಷ ಮನೋಜ್ ಪಟೇಲ್, ಚಾಮುಲ್ ಅಧ್ಯಕ್ಷ ನಾಗೇಂದ್ರ, ರಾಷ್ಟ್ರೀಯ ಒಬಿಸಿ ಕಾರ್ಯಕಾರಿಣಿ ಸದಸ್ಯರು ನೂರೊಂದುಶೆಟ್ಟಿ, ಎಸ್‌ಸಿ ಮೋರ್ಚಾ ಅಧ್ಯಕ್ಷ ಕಿನಕಹಳ್ಳಿ ರಾಚಯ್ಯ, ಜಿಲ್ಲಾ ವಕ್ತಾರು ಅಯ್ಯನಪುರ ಶಿವಕುಮಾರ್, ಮಾಧ್ಯಮ ಸಂಚಾಲಕ ಎನ್. ಮಂಜುನಾಥ್ ಹಾಜರಿದ್ದರು.

6 ಜ.2ರಿಂದ 12ರವರೆಗೆ ಬೂತ್ ವಿಜಯಿ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಬೂತ್ ಮಟ್ಟದಿಂದಲೂ ಪಕ್ಷ ಸಂಘಟನೆಗೆ ಮುಂದಾಗಬೇಕು. ಮನೆ–ಮನೆಗೂ ತೆರಳಿ ಬಿಜೆಪಿ ಬಾವುಟವನ್ನು ನೀಡಿ, ಸರ್ಕಾರದ ಸಾಧನೆಯನ್ನು ತಿಳಿಸಬೇಕು. ಇದಾದ ನಂತರ ಜ.21 ರಿಂದ 29ರವರೆಗೆ ವಿಜಯಿ ಸಂಕಲ್ಪ ಯಾತ್ರೆ ನಡೆಸಲಾಗುವುದು.

-ನಳಿನ್‌ಕುಮಾರ್ ಕಟೀಲ್,
ಬಿಜೆಪಿ ರಾಜ್ಯಾಧ್ಯಕ್ಷರು.

ಚಾ.ನಗರದಲ್ಲಿ ಗಿರಿಜನರ ಬೃಹತ್ ಪ್ರತಿಭಟನೆ

ಪುಣಜನೂರು ವ್ಯಾಪ್ತಿಯ ಕಾಲೋನಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸುವಂತೆ ಆಗ್ರಹ

ಚಾಮರಾಜನಗರ, ಡಿ.29– ಪುಣಜನೂರು ಗ್ರಾಮ ಪಂಚಾಯಿತಿಯ ಎಲ್ಲಾ ಲಂಬಾಣಿ ತಾಂಡ, ಗಿರಿಜನರ ಪೋಡು, ದಲಿತ ಕಾಲೋನಿ, ಕುರುಬರಹಟ್ಟಿ, ಬಡಗರ ಕಾಲೋನಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವಂತೆ ಒತ್ತಾಯಿಸಿ ನಿವಾಸಿಗಳು ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.



ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಆವರಣದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ, ತಹಸೀಲ್ದಾರ್ ಬಸವರಾಜು ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ಮೆರವಣಿಗೆ ಉದ್ದಕ್ಕೂ ಆಗಲಿ ಆಗಲಿ ಪುಣಜನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು ಕಂದಾಯ ಗ್ರಾಮವಾಗಲಿ ಎಂದು ಘೋಷಣೆ ಕೂಗಿದರು.

ಚಾಮರಾಜನಗರ ಸ್ಟೇಟ್ ಫಾರೆಸ್ಟ್‌ನ ಜಮೀನುಗಳಿಗೆ ಸಂಬಂಧಿಸಿದಂತೆ ಸರ್ವೆ, ಸ್ಕೆಚ್, ಆಕಾರ್ ಬಂದ್, ಅಟ್ಲಾಸ್, ಮ್ಯೂಟೇಷನ್ ಇತ್ಯಾದಿ ಭೂ ದಾಖಲೆಗಳನ್ನು ನೀಡುವಂತೆ ಚಾ.ನಗರ ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಅರ್ಜಿ ಸಲ್ಲಿಸಿದರೆ, ಚಾಮರಾಜನಗರ ಸ್ಟೇಟ್ ಫಾರೆಸ್ಟ್ ಎಂಬ ಯಾವುದೇ ಗ್ರಾಮ ಇರುವುದಿಲ್ಲ ಎಂದು ಹಿಂಬರಹ ನೀಡುತ್ತಿದ್ದಾರೆ. ಈ ಬಗ್ಗೆ ಅನೇಕ ಬಾರಿ ಜಿಲ್ಲಾಡಳಿತ ಹಾಗೂ ಸರ್ಕಾರ ಮನವಿ ಸಲ್ಲಿಸಿದರು ಯಾವುದೇ ಪ್ರಯೋಜನವಾಗಿಲ್ಲ ಬೆಳಗಾವಿ ಅಧಿವೇಶನದಲ್ಲಿ ಕಂದಾಯ ಸಚಿವ ಆರ್. ಆಶೋಕ್ ಅವರು ಈ ಗ್ರಾಮಗಳನ್ನು ಕಂದಾಯ ಗ್ರಾಮವನ್ನಾಗಿ ಘೋಷಣೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪುಣಜನೂರು ಗ್ರಾ.ಪಂ. ವ್ಯಾಪ್ತಿಯಲ್ಲಿ ನೆಲೆಗೊಂಡಿರುವ ಜನ ವಸತಿಗಳ ಪೈಕಿ ಹಲವಾರು ಜನ ವಸತಿಗಳು ವಿಶೇಷವಾಗಿ ಲಂಬಾಣಿ ತಾಂಡ, ಕೊಲ್ಲರ ಹಟ್ಟಿ, ನಾಯಕರ ಹಟ್ಟಿ, ಮಜರೆ ದೊಡ್ಡಿ, ಪಾಳ್ಯ, ಕ್ಯಾಂಪ್, ಕಾಲೋನಿ ಹಾಡಿ ಇತ್ಯಾದಿ ಹೆಸರುಗಳಿಂದ ಗುರುತಿಸಲ್ಪಡುವ ಜನ ವಸತಿಗಳು ದಾಖಲೆ ರಹಿತವಾಗಿಯೇ ಉಳಿದುಕೊಂಡಿದ್ದು, ಇಂಥ ಜನ ವಸತಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಅಥವಾ ಅಸ್ತಿತ್ವದಲ್ಲಿರುವ ಕಂದಾಯ ಗ್ರಾಮಗಳ ಭಾಗವಾಗಿ ಪರಿವರ್ತಿಸಿ, ಇಲ್ಲಿಯ ನಿವಾಸಿಗಳಿಗೆ ವಾಸ್ತವ್ಯದ ಹಕ್ಕು ದಾಖಲೆಗಳನ್ನು ಒದಗಿಸಬೇಕೆಂದು ಅವರು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ತಾಪಂ ಮಾಜಿ ಸದಸ್ಯ ಪಿ.ಕುಮಾರ್ ನಾಯಕ್, ಗ್ರಾಪಂ ಅಧ್ಯಕ್ಷ ಮಣಿನಾಯಕ, ಉಪಾಧ್ಯಕ್ಷೆ ಗೀತಾ ಸಿದ್ದರಾಜು, ಸದಸ್ಯ ಚಂದ್ರಶೇಖರ್, ಪರಿಸರವಾದಿ ಪುಣಜನೂರು ದೊರೆಸ್ವಾಮಿ, ಬಂಜಾರ ಸೇವಾ ಸಮಿತಿಯ ಗ್ರಾಪಂ ಮಾಜಿ ಸದಸ್ಯ ಎಚ್.ಮೂರ್ತಿ, ಜಗದೀಶ್ ನಾಯಕ, ಶಮೀರ್‌ಪಾಷ, ಗಣೇಶ್‌ನಾಯಕ್, ಮಹೇಶ್ ನಾಯಕ್, ಚಂದ್ರಶೇಖರ್, ಗುರುನಾಯಕ್, ಶಿವರಾಜ್‌ನಾಯಕ್, ಬಾಲಾಜಿ ನಾಯಕ್, ಭಗವಾನ್‌ನಾಯಕ್, ಮಹದೇವಯ್ಯ, ವೆಂಕಟೇಶ್, ಕಾಳೇಗೌಡ, ಸತೀಶ್ ನಾಯಕ್, ಶಿವಾಜಿನಾಯಕ್ ಸೇರಿದಂತೆ ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಚಾಮರಾಜನಗರದಲ್ಲಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ

ಚಾಮರಾಜನಗರ, ಡಿ.29– ವಿವಿಧ ಹಕ್ಕೊತ್ತಾಯಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ಆಶಾ ಕಾರ್ಯಕರ್ತೆಯರು ಭಾರೀ ಪ್ರತಿಭಟನೆ ನಡೆಸಿದರು.

ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಜಿಲ್ಲಾ ಸಮಿತಿ ಆಶ್ರಯದಲ್ಲಿ ಇಲ್ಲಿನ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗ ಭಾರೀ ಸಂಖ್ಯೆಯಲ್ಲಿ ಆಶಾ ಕಾರ್ಯಕರ್ತೆಯರು ಜಮಾಯಿಸಿದರು. ನಂತರ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಪ್ರಮುಖ ರಸ್ತೆಗಳ ಮೂಲಕ ಜಿಲ್ಲಾಡಳಿತ ಭವನ ತಲುಪಿದರು. ಅಲ್ಲಿ ಸ್ವಲ್ಪ ಸಮಯ ಧರಣಿ ನಡೆಸಿದ ನಂತರ ಜಿಲ್ಲಾಡಳಿತದ ಮೂಲಕ ಸಿಎಂಗೆ ಮನವಿ ಸಲ್ಲಿಸಿದರು.

ಆರ್‌ಸಿಎಚ್ ಪೋರ್ಟಲ್ ಮೂಲಕ ಪ್ರೋತ್ಸಾಹಧನ ನೀಡುವುದನ್ನು ರದ್ದುಪಡಿಸಿ, ರುಟಿನ್ ಕೆಲಸಗಳು ಮತ್ತು ಇತರ ನಿಗದಿತ ಚಟುವಟಿಕೆಗಳಿಗೆ ಕೇಂದ್ರ ಸರ್ಕಾರ ನೀಡುತ್ತಿರುವ ಹಣವನ್ನು ಒಟ್ಟುಗೂಡಿಸಿ ಮಾಸಿಕ ಗೌರವಧನ ನಿಗದಿಪಡಿಸಬೇಕು. ವಿವಿಧ ಸಮಸ್ಯೆಗಳ ಕಾರಣಗಳಿಂದ ಕಳೆದ 2ವರ್ಷಗಳಿಂದ ಆಗಿರುವ ಆರ್ಥಿಕ ನಷ್ಟವನ್ನು ತುಂಬಿಕೊಡಲು ಹಿಂಬಾಕಿ ರೂಪದಲ್ಲಿ ನಷ್ಟ ಪರಿಹಾರ ನೀಡಬೇಕು. ಗೌರವ ಧನವನ್ನು ಹೆಚ್ಚಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷೆ ಕವಿತಾ, ಉಮಾ ಮಹೇಶ್ವರಿ, ರಾಣಿ, ಶಶಿಕಲಾ, ಮಂಜುಳಾ, ಸುಲೋಚನಾ, ಪ್ರೇಮಾ, ರಾಜಮ್ಮ, ಸುಮಾ, ಸಿದ್ದನಾಗಮ್ಮ, ಚೆನ್ನಾಜಮ್ಮ, ಜ್ಯೋತಿ ಇತರರು ಪಾಲ್ಗೊಂಡಿದ್ದರು.



ರಾಜಕಾಲುವೆ ಪುನಶ್ಚೇತನಗೊಳಿಸಿ ಲಿಂಗಾಂಬುಧಿ ಕೆರೆಗೆ ಸಂಪರ್ಕ ಕಲ್ಪಿಸಿ

ದಟ್ಟಗಳ್ಳಿ ಗ್ರೀನ್ ಫೌಂಡೇಷನ್ ಒತ್ತಾಯ



ಮೈಸೂರು, ಡಿ.29 (ಪಿಎಂ)– ದಟ್ಟಗಳ್ಳಿ ರಿಪಬ್ಲಿಕ್ ಪಾರ್ಕ್ ಬಳಿಯಿಂದ ರಾಜಕಾಲುವೆಯನ್ನು ಪುನಶ್ಚೇತನಗೊಳಿಸಿ ಲಿಂಗಾಂಬುಧಿ ಕೆರೆಗೆ ಸಂಪರ್ಕ ಕಲ್ಪಿಸುವ ಮೂಲಕ ಇಲ್ಲಿನ ನಿವಾಸಿಗಳು ಮಳೆಗಾಲದಲ್ಲಿ ಅನುಭವಿಸಿರುವ ತೀವ್ರತರ ಸಮಸ್ಯೆ ಪರಿಹರಿಸಬೇಕು ಎಂದು ದಟ್ಟಗಳ್ಳಿ ಗ್ರೀನ್ ಫೌಂಡೇಷನ್ ಒತ್ತಾಯಿಸಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಫೌಂಡೇಷನ್ ಅಧ್ಯಕ್ಷ ಡಾ.ನಾರಾಯಣ್ ಹೆಗ್ಡೆ, ದಟ್ಟಗಳ್ಳಿ ರಿಪಬ್ಲಿಕ್ ಪಾರ್ಕ್ ಬಳಿಯಿಂದ ಮುಂದಕ್ಕೆ ರಾಜಕಾಲುವೆ ಮುಚ್ಚಿ ಹೋಗಿದ್ದು, ಅದನ್ನು ಲಿಂಗಾಂಬುಧಿ ಕೆರೆಗೆ ಸಂಪರ್ಕ ಕಲ್ಪಿಸದ ಹಿನ್ನೆಲೆಯಲ್ಲಿ ಮಳೆಗಾಲದಲ್ಲಿ ಸದರಿ ಪಾರ್ಕ್‌ನ ಬಳಿಯ 25ಕ್ಕೂ ಹೆಚ್ಚು ಮನೆಗಳ ಮುಂದೆ ಮಳೆ ನೀರು ನಿಲ್ಲುವಂತಾಗಿದೆ. ಜೊತೆಗೆ ರಾಜಕಾಲುವೆಗೆ ಒಳಚರಂಡಿ ಸಂಪರ್ಕವಿರುವ ಕಾರಣ ಮಳೆ ಬಂದಾಗ ದುರ್ವಾಸನೆ ಉಂಟಾಗುತ್ತಿದೆ. ಇದರಿಂದ ಸಾಂಕ್ರಾಮಿಕ ರೋಗ ರುಜಿನ ಹರಡುವ ಭೀತಿಯಲ್ಲಿ ಇಲ್ಲಿನ ನಾಗರಿಕರು ವಾಸ ಮಾಡಬೇಕಿದೆ ಎಂದರು.

ಭಾರೀ ಮಳೆ ಸಂದರ್ಭದಲ್ಲಿ ಮನೆ ಎದುರು ಕೆರೆಯಂತೆ ನೀರು ಶೇಖರಣೆಗೊಂಡು ಸಂಚಾರಕ್ಕೂ ತೊಡಕಾಗುತ್ತದೆ. ವ್ಯಾಪಕ ಮಳೆಯಾದಾಗ ಮಳೆ ನೀರಿನೊಂದಿಗೆ ಒಳಚರಂಡಿ ನೀರು ಮಿಶ್ರಿತಗೊಂಡು ಮಲಿನ ವಾತಾವರಣ ನಿರ್ಮಾಣವಾಗುತ್ತಿದೆ. ಜೊತೆಗೆ ರಾಜಕಾಲುವೆಯು ಲಿಂಗಾಂಬುಧಿ ಕೆರೆಗೆ ಸಂಪರ್ಕ ಇಲ್ಲವಾದರೂ ಉಕ್ಕಿ ಹರಿಯುವ ಕಲುಷಿತ ನೀರು ನಿಧಾನವಾಗಿ ಕೆರೆಗೂ ಸೇರುವಂತಾಗಿದೆ ಎಂದು ದೂರಿದರು.

ಈ ಸಂಬಂಧ ಕಳೆದ 2 ವರ್ಷಗಳಿಂದ ಜಿಲ್ಲಾಡಳಿತ, ನಗರಪಾಲಿಕೆ, ಮುಡಾ ಮತ್ತು ಅರಣ್ಯ ಇಲಾಖೆಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಅನೈರ್ಮಲ್ಯದ ವಾತಾವರಣದಿಂದ ಇಲ್ಲಿನ ವಯೋವೃದ್ಧರು, ಮಕ್ಕಳು ಪದೇ ಪದೆ ಅನಾರೋಗ್ಯಕ್ಕೆ ತುತ್ತಾಗುವ ಪರಿಸ್ಥಿತಿ ಇದೆ ಎಂದು ತಿಳಿಸಿದರು. ಸ್ಥಳೀಯ ನಿವಾಸಿಗಳಾದ ಹರ್ಷ, ಕೆ.ವಿ.ರಂಜಿತ್, ಸುಯೋಧನ್, ಪರಿಸರವಾದಿ ಭಾನುಮೋಹನ್ ಗೋಷ್ಠಿಯಲ್ಲಿದ್ದರು.

ಜ.1, ಚಲನಚಿತ್ರ ಗೀತೆಗಳ ಗಾಯನ



ಮೈಸೂರು,ಡಿ.29(ಪಿಎಂ)– ಭೂಮಿಕಾ ಅಸೋಸಿಯೇಟ್ಸ್ ಹಾಗೂ ದಿವಂಗತ ಮೈಕ್ ಚಂದ್ರು ಗೆಳೆಯರ ಬಳಗದ ಜಂಟಿ ಆಶ್ರಯದಲ್ಲಿ ಹೊಸ ವರ್ಷದ ಸಂಭ್ರಮದ ಪ್ರಯುಕ್ತ ಜ.1ರಂದು ಸುಮಧುರ ಹಳೆಯ ಕನ್ನಡ, ಹಿಂದಿ ಮತ್ತು ತೆಲುಗು ಚಲನಚಿತ್ರ ಗೀತೆಗಳ ಗಾನಮಂಜರಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ವಾದ್ಯ ಕಲಾವಿದ ಡಾ.ಸಿ.ಆರ್.ರಾಘವೇಂದ್ರ ಪ್ರಸಾದ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾದಬ್ರಹ್ಮ ಸಂಗೀತ ಸಭಾದಲ್ಲಿ ಅಂದು ಸಂಜೆ 5ಕ್ಕೆ ಗಾನಮಂಜರಿ ಕಾರ್ಯಕ್ರಮ ಆರಂಭಗೊಳ್ಳಲಿದೆ. ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ ಎಂದರು.

ಸಂಗೀತ ನಿರ್ದೇಶಕ ಎ.ಎಸ್.ಪ್ರಸನ್ನಕುಮಾರ್ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿದೆ. ಖ್ಯಾತ ಗಾಯಕರು ಗೀತೆಗಳನ್ನು ಸಾದರಪಡಿಸಲಿದ್ದಾರೆ. ಶ್ರೀನಾಥ್ ಭಾರದ್ವಾಜ್, ಡಾ.ಎ.ಡಿ.ಶ್ರೀನಿವಾಸ್, ಸಿ.ವಿಶ್ವನಾಥ್, ರಾಘವೇಂದ್ರ ರತ್ನಾಕರ್, ರಾಮಚಂದ್ರ, ನೀತು ನಿನಾದ್, ಹಂಸಿನಿ ಕುಮಾರ್, ದಿವ್ಯಾ ಮತ್ತು ನಯನ ನಾಗರಾಜ್ ಗಾಯನದಲ್ಲಿ ಕಾರ್ಯಕ್ರಮ ಮೂಡಿಬರಲಿದೆ. ವಾದ್ಯವೃಂದದಲ್ಲಿ ಎ.ಎಸ್.ಪ್ರಸನ್ನಕುಮಾರ್, ವೀರೇಶ್, ರಘುನಾಥ್, ನೀತು ನಿನಾದ್, ವಿನ್ಸೆಂಟ್, ಟೈಟಸ್, ಕೌಶಿಕ್, ಕುಮಾರ್ ಮತ್ತು ಸುದರ್ಶನ್ ಸಹಕಾರ ನೀಡಲಿದ್ದಾರೆ ಎಂದು ತಿಳಿಸಿದರು. ಪಿ.ಬಿ.ಶ್ರೀನಿವಾಸ್ ಹಾಡಿರುವ ಕನ್ನಡ ಚಿತ್ರಗೀತೆಗಳನ್ನು ಚಲನಚಿತ್ರ ಹಿನ್ನೆಲೆ ಗಾಯಕ ಶ್ರೀನಾಥ್ ಭಾರದ್ವಾಜ್ ಸಾದರಪಡಿಸಲಿದ್ದಾರೆ. ಜೊತೆಗೆ ದೇಶ–ವಿದೇಶಗಳಲ್ಲಿ ಖ್ಯಾತನಾಮರಾದ ಮೈಸೂರು ಆನಂದ್ ಅವರು ಹಾಸ್ಯ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಕಾರ್ಯಕ್ರಮಕ್ಕೆ ಮಾಸ್ಕ್ ಕಡ್ಡಾಯ ಎಂದು ಹೇಳಿದರು. ಬಳಗದ ಅಧ್ಯಕ್ಷ ಕೆ.ಎಸ್.ಸುರೇಶ್, ಹಾಸ್ಯ ಕಲಾವಿದ ಮೈಸೂರು ಆನಂದ್, ಮುಖಂಡ ವಾಸುದೇವ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಮುಡಾ ನೂತನ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಅವರನ್ನು ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರ ಅಧ್ಯಕ್ಷ ಬಿ.ಎಂ.ರಘು, ಬಿಜೆಪಿ ನಗರ ಉಪಾಧ್ಯಕ್ಷ ರಮೇಶ್, ಈರೇಗೌಡ, ರಾಕೇಶ್‌ಭಟ್, ತ್ಯಾಗರಾಜ್, ಹಿರಿಯಣ್ಣ, ಶಶಿಕಾಂತ್, ಶಿವಕುಮಾರ್, ಪ್ರತಾಪ್ ದಟ್ಟಗಳ್ಳಿ, ಚಂದ್ರಶೇಖರ ಸ್ವಾಮಿ, ಶ್ರೀಧರ್, ಕಾಂತರಾಜ್ ಅರಸ್, ಸಾಗರ್, ಅಜೇಯ್ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿದರು.

ಸಿಬಿಎಸ್‌ಇ 10, 12ನೇ ತರಗತಿ ಪರೀಕ್ಷೆ ವೇಳಾಪಟ್ಟಿ ಪ್ರಕಟ

ನವದೆಹಲಿ: ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್ ಸಿಬಿಎಸ್‌ಇನ 10ನೇ ಮತ್ತು 12ನೇ ತರಗತಿಯ ಪರೀಕ್ಷೆಗೆ ದಿನಾಂಕ ಪ್ರಕಟವಾಗಿದೆ ಫೆ.15ರಂದೇ ಎರಡೂ ಪರೀಕ್ಷೆಗಳು ಆರಂಭವಾಗಲಿವೆ. 10ನೇ ತರಗತಿ ಪರೀಕ್ಷೆಯು ಫೆ.15ರಿಂದ ಆರಂಭವಾಗಲಿದ್ದು ಮಾ.21ರವರೆಗೆ ನಡೆಯಲಿದೆ. ಅದೇ ರೀತಿಯಾಗಿ 12ನೇ ತರಗತಿ ಪರೀಕ್ಷೆಯು ಫೆ.15ರಂದು ಪ್ರಾರಂಭವಾಗುತ್ತದೆ ಏ.5ರಂದು ಈ ಪರೀಕ್ಷೆ ಕೊನೆಗೊಳ್ಳುತ್ತದೆ. 10 ಮತ್ತು 12ನೇ ತರಗತಿಯ ಎರಡೂ ಪರೀಕ್ಷೆಗಳು ಬೆಳಗ್ಗೆ 1030ಕ್ಕೆ ಆರಂಭವಾಗಿ ಮಧ್ಯಾಹ್ನ 130ಕ್ಕೆ ಮುಕ್ತಾಯವಾಗಲಿವೆ. ಇದೇ ವೇಳೆ ಯಾವುದೇ ವಿದ್ಯಾರ್ಥಿಗಳಿಗೂ ಇತರ ವಿಷಯಗಳ ಪರೀಕ್ಷೆಗೆ ತೊಂದರೆಯಾಗದಂತೆ ಪರೀಕ್ಷಾ ದಿನಾಂಕ ನಿಗದಿಪಡಿಸಲಾಗಿದೆ. ಜೊತೆಗೆ ಸಿಬಿಎಸ್‌ಇಯು 10 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ಓದಿಕೊಳ್ಳಲು 15 ನಿಮಿಷಗಳ ಸಮಯವನ್ನು ನೀಡುತ್ತದೆ ಎಂದು ತಿಳಿಸಿದೆ. ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್ cbse.gov.inನಲ್ಲಿ ಪರಿಶೀಲಿಸಬಹುದು.

ಮೂರನೇ ಪುಟದಿಂದ

ಇಂದು ಮಂಡ್ಯಕ್ಕೆ ಅಮಿತ್ ಶಾ ಎಂಟ್ರಿ

ಎರಡು ಬಾರಿಯು ಬಹುಮತದಿಂದ ಅಧಿಕಾರ ಪಡೆಯಲು ಸಾಧ್ಯವಾಗಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡೇ ಅಮಿತ್ ಶಾ ಹಳೇ ಮೈಸೂರು ಭಾಗದಲ್ಲಿ ಧೂಳೆಬ್ಬಿಸಲು ನಾಳೆ ಮಂಡ್ಯಕ್ಕೆ ಕಾಲಿಡುತ್ತಿದ್ದಾರೆ. ಅಮಿತ್ ಶಾ ದೆಹಲಿಗೆ ಹಿಂತಿರುಗುತ್ತಿದ್ದಂತೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಮೊದಲ ಹಂತದ ರ‍್ಯಾಲಿ ನಡೆಸಲಿದ್ದಾರೆ. ಅಮಿತ್ ಷಾ ನಾಳೆ ಸಹಕಾರಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರ ಜೊತೆಗೆ ಮಂಡ್ಯ ನಗರದಲ್ಲಿ ಬೃಹತ್ ಸಾರ್ವಜನಿಕರ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ. ನಂತರ ಎರಡು ದಿನಗಳ ಕಾಲ ಬೆಂಗಳೂರಲ್ಲೇ ಬಿಡಾರ ಹೂಡಿ, ಹಳೇ ಮೈಸೂರು ಭಾಗದ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಆಯ್ಕೆ ಮತ್ತು ಚುನಾವಣಾ ತಂತ್ರಗಾರಿಕೆಯ ಬಗ್ಗೆ ರಾಜ್ಯ ಮುಖಂಡರೊಟ್ಟಿಗೆ ನಿರಂತರ ಸಭೆಗಳನ್ನು ನಡೆಸಲಿದ್ದಾರೆ. ಕಳೆದ ಚುನಾವಣೆಯಲ್ಲಿ ಬೆಂಗಳೂರು ನಗರ ಜಿಲ್ಲೆಯ 28 ಸ್ಥಾನಗಳಲ್ಲಿ 16 ಸ್ಥಾನಗಳನ್ನು ಗೆದ್ದಿದ್ದರೆ ಉಳಿದ 68 ಸ್ಥಾನಗಳಲ್ಲಿ ಕೇವಲ 15 ಕ್ಷೇತ್ರಗಳಲ್ಲಿ ಪಕ್ಷ ಜಯಗಳಿಸಿತ್ತು.

ಹಳೇ ಮೈಸೂರು ಭಾಗದ ಕೆಲವು ಕ್ಷೇತ್ರಗಳಲ್ಲಿ ಇದುವರೆಗೂ ಖಾತೆಗಳನ್ನೇ ತೆರೆದಿಲ್ಲ. ಅಂತಹ ಕ್ಷೇತ್ರಗಳಲ್ಲಿ ಸ್ಥಳೀಯವಾಗಿ ಅನ್ಯ ಪಕ್ಷಗಳಲ್ಲಿ ಪ್ರಬಲರಾಗಿರುವವರನ್ನು ಸೆಳೆದುಕೊಳ್ಳಲು ಬಿಜೆಪಿ ನಿರ್ಧರಿಸಿದೆ. ಕಳೆದ ಸೋಮವಾರ ಮುಖ್ಯಮಂತ್ರಿಯವರನ್ನು ದೆಹಲಿಗೆ ಕರೆಸಿಕೊಂಡು ಸಮಾಲೋಚನೆ ನಡೆಸಿದ ಸಂದರ್ಭದಲ್ಲೂ ಈ ಭಾಗಕ್ಕೆ ಸಂಬಂಧಿಸಿದಂತೆ ಹೆಚ್ಚು ಚರ್ಚೆ ನಡೆಸಿದ್ದಾರೆ. ಹಳೇ ಮೈಸೂರಿನ ಕೆಲವು ಕ್ಷೇತ್ರಗಳಲ್ಲಿ ಅದರಲ್ಲೂ ಬೆಂಗಳೂರು ನಗರದಲ್ಲಿ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಿದೆ. ಇದನ್ನು ಹೊರತುಪಡಿಸಿದರೆ, ಏಳು ಕ್ಷೇತ್ರಗಳಲ್ಲಿ ಸಮಸ್ಯೆ ಎದುರಾಗಿದೆ. ಇದೆಲ್ಲವನ್ನೂ ತಮ್ಮ ರಾಜ್ಯ ಭೇಟಿ ಸಂದರ್ಭದಲ್ಲಿ ಖುದ್ದು ಬಗೆಹರಿಸಲಿದ್ದಾರೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ. 2008ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ 110 ಸ್ಥಾನ ಮತ್ತು 2018ರಲ್ಲಿ 104 ಸ್ಥಾನಗಳನ್ನು ಗಳಿಸುವಷ್ಟಕ್ಕೆ ಪಕ್ಷ ಸುಸ್ತಾಗಿದ್ದರೆ, ಅದಕ್ಕೆ ಹಳೇ ಮೈಸೂರು ಭಾಗದಲ್ಲಿ ಕಾಣುತ್ತಿರುವ ಸತತ ವೈಫಲ್ಯವೇ ಕಾರಣ.

ಕಳೆದ ಬಾರಿ ಹಳೇ ಮೈಸೂರು ಭಾಗದ ಜಿಲ್ಲೆಗಳಲ್ಲಿ ಸುಮಾರು ಹದಿನೈದು ಸೀಟುಗಳ ಗಡಿ ತಲುಪಿದ್ದ ಬಿಜೆಪಿ, ಇನ್ನಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದರೆ ಪಕ್ಷ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರುತ್ತಿತ್ತು. 2008ರ ಅನುಭವದಿಂದ ನಾವು ಪಾಠ ಕಲಿಯದೇ ಹೋಗಿದ್ದೇ 2018ರ ವೈಫಲ್ಯಕ್ಕೂ ಕಾರಣ. ಆದರೆ 2023ರ ವಿಧಾನಸಭಾ ಚುನಾವಣೆಯ ಹೊತ್ತಿಗೆ ಈ ವೈಫಲ್ಯಗಳನ್ನು ಸರಿಪಡಿಸಿಕೊಂಡು ಹಳೇ ಮೈಸೂರು ಭಾಗದ ಜಿಲ್ಲೆಗಳಲ್ಲಿ ಬೆಂಗಳೂರು ಜಿಲ್ಲೆ ಹೊರತುಪಡಿಸಿ, 35 ಸೀಟುಗಳನ್ನು ಗೆಲ್ಲಲೇಬೇಕು ಎಂಬುದು ಅಮಿತ್ ಷಾ ಅವರ ಲೆಕ್ಕಾಚಾರ.

ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ, ಕೊಡಗು, ಚಿಕ್ಕಮಗಳೂರು, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಪೈಕಿ ಎರಡು–ಮೂರು ಜಿಲ್ಲೆಗಳನ್ನು ಹೊರತುಪಡಿಸಿದರೆ ಉಳಿದ ಬಹುತೇಕ ಕಡೆ ಬಿಜೆಪಿಯ ಶಕ್ತಿ ಗಣನೀಯವಾಗಿಲ್ಲ. ಹೀಗಾಗಿ ಈ ಭಾಗದಲ್ಲಿ ಜೆಡಿಎಸ್ ನಂಬರ್ ಒನ್ ಆಗಿ ಹೊರಹೊಮ್ಮುತ್ತಿದ್ದರೆ, ಕಾಂಗ್ರೆಸ್ ನಂಬರ್ ಟೂ ಆಗಿ ಹೊರಹೊಮ್ಮುತ್ತಿದೆ. ಆದರೆ ಈ ಭಾಗದಲ್ಲಿ ಬಿಜೆಪಿ ಸದಾಕಾಲ ಮೂರನೇ ಸ್ಥಾನದಲ್ಲಿದೆ. ಈ ಪರಿಸ್ಥಿತಿಯನ್ನು ಬದಲಾಯಿಸಲೇ ಷಾ ನಾಳೆ ಮಂಡ್ಯ ಪ್ರವೇಶಿಸಲಿದ್ದಾರೆ.

ಎಲ್ಲಾ ಜಿಲ್ಲೆಗಳಲ್ಲೂ ಮಿನಿ ಫುಡ್‌ಪಾರ್ಕ್‌ಗೆ ಸರ್ಕಾರ ಚಿಂತನೆ

ಆಹಾರ ಕರ್ನಾಟಕ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಕೆ.ಮೊಹಮದ್ ಇರ್ಫಾನ್





ಮೈಸೂರಿನ ರುಚಿ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ಆಯೋಜಿಸಿದ್ದ ಆಹಾರ ಸಂಸ್ಕರಣೆ ಕುರಿತ ಅರಿವು ಕಾರ್ಯಕ್ರಮದಲ್ಲಿ ಆಹಾರ ಕರ್ನಾಟಕ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಕೆ.ಮೊಹಮದ್ ಇರ್ಫಾನ್ ಮಾತನಾಡಿದರು. ಬಿ.ಪ್ರವೀಣ್, ಕೆ.ಎನ್.ನರಸಿಂಹಮೂರ್ತಿ, ಲೋಕೇಶ್, ಸುಬ್ರಹ್ಮಣ್ಯಂ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಡಿ.29(ಆರ್‌ಕೆ)–ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಮಿನಿ ಫುಡ್‌ಪಾರ್ಕ್ ಆರಂಭಿಸಲು ಸರ್ಕಾರ ಚಿಂತನೆ ನಡೆಸಿದೆ ಎಂದು ಆಹಾರ ಕರ್ನಾಟಕ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರಾದ ಕರ್ನಾಟಕ ಕೃಷಿ ವಾಣಿಜ್ಯ ಅಭಿವೃದ್ಧಿ ನಿಗಮದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಮೊಹಮದ್ ಇರ್ಫಾನ್ ಇಂದಿಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ ಹಾಗೂ ಜಿಲ್ಲಾ ಕೈಗಾರಿಕಾ ಸಂಘದ ಸಹಯೋಗದಲ್ಲಿ ಮೈಸೂರಿನ ರುಚಿ ದಿ ಪ್ರಿನ್ಸ್ ಹೋಟೆಲ್ ಸಭಾಂಗಣದಲ್ಲಿ ಇಂದು ಏರ್ಪಡಿಸಿದ್ದ ಆಹಾರ ಸಂಸ್ಕರಣೆ, ಮುನಿಸಿಪಾಲಿಟಿ ಕಾಯ್ದೆ ಮತ್ತು ಆನ್ ಬೋರ್ಡಿಂಗ್ ಜೆಡ್ ಪ್ರಮಾಣೀಕರಣ ಕುರಿತು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಆಹಾರ ಧಾನ್ಯ ಉದ್ದಿಮೆಗಳನ್ನು ಪ್ರೋತ್ಸಾಹಿಸಿ ರಫ್ತು ವಹಿವಾಟು ಹೆಚ್ಚಿಸುವ ಸಲುವಾಗಿ ಸರ್ಕಾರವು ಎಲ್ಲಾ ಜಿಲ್ಲೆಗಳಲ್ಲೂ ಮಿನಿ ಫುಡ್‌ಪಾರ್ಕ್ ಸ್ಥಾಪಿಸಲು ಚಿಂತನೆ ನಡೆಸಿದೆ ಎಂದರು.

2023ರ ರಾಜ್ಯ ಬಜೆಟ್‌ನಲ್ಲಿ ಈ ಯೋಜನೆ ಘೋಷಣೆಯಾಗಲಿದ್ದು, ಅದಕ್ಕಾಗಿ ಮುಖ್ಯಮಂತ್ರಿಗಳು ಮಾಹಿತಿ ಸಂಗ್ರಹಿಸಿ ಸಿದ್ಧತೆ ನಡೆಸುತ್ತಿದ್ದಾರೆ. ರೈತರು, ಟ್ರೇಡರ್ಸ್, ಆಹಾರ ವಲಯವನ್ನು ಉತ್ತೇಜಿಸಲು ಈ ವಿನೂತನ ಯೋಜನೆ ಜಾರಿಗೆ ಬರುತ್ತಿದೆ ಎಂದರು.

ಹೂಟಗಳ್ಳಿ ನಗರಸಭೆ ಪೌರಾಯುಕ್ತ ಪಿ.ಎನ್.ನರಸಿಂಹಮೂರ್ತಿ ಮಾತನಾಡಿ, ಉದ್ದಿಮೆಯ ಸಾಮರ್ಥ್ಯ, ಪ್ರಮಾಣಕ್ಕನುಗುಣವಾಗಿ ಕೈಗಾರಿಕೆಗಳಿಗೆ ತೆರಿಗೆ ವಿಧಿಸಲಾಗುತ್ತಿದೆ. ಅದರಂತೆ ಸಣ್ಣ, ಮಧ್ಯಮ ಹಾಗೂ ಬೃಹತ್ ಕೈಗಾರಿಕೆಗಳಿಗೆ ವಿವಿಧ ಪ್ರಮಾಣದ ತೆರಿಗೆ ನಿಗದಿಪಡಿಸಿರುವುದರಿಂದ ಈ ಬಗ್ಗೆ ಗೊಂದಲವಿದ್ದಲ್ಲಿ ಕೈಗಾರಿಕೋದ್ಯಮಿಗಳು ತಮ್ಮನ್ನೇ ನೇರವಾಗಿ ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬಹುದು ಎಂದರು. ಕಾಸಿಯಾ ಅಧ್ಯಕ್ಷ ಕೆ.ಎನ್.ನರಸಿಂಹಮೂರ್ತಿ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಟಿ.ದಿನೇಶ್, ಸ್ಮಾಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಐಡಿಬಿಐ) ವ್ಯವಸ್ಥಾಪಕ ಲೋಕೇಶ್, ಕಾಸಿಯಾ ಪ್ರಧಾನ ಕಾರ್ಯದರ್ಶಿ ಬಿ. ಪ್ರವೀಣ್, ಸದಸ್ಯ ಸುಬ್ರಹ್ಮಣ್ಯಂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ನಂತರ ನಡೆದ ತಾಂತ್ರಿಕ ಅಧಿವೇಶನದಲ್ಲಿ ಆಹಾರ ಸಂಸ್ಕರಣೆ ಮತ್ತು ಕೃಷಿ ವ್ಯವಹಾರ ಮುನಿಸಿಪಾಲಿಟಿ ಕಾಯ್ದೆ, ಆನ್ ಬೋರ್ಡಿಂಗ್ ಜೆಡ್, ಎಸ್‌ಐಡಿಬಿಐ ಯೋಜನೆ ಕುರಿತಂತೆ ತಜ್ಞರು ವಿಷಯ ಮಂಡಿಸಿದರು.

ಜಾಹಿರಾತು ಮೂಲಕ ಗ್ರಾಹಕರಿಗೆ ವಂಚಿಸಿದರೆ ಕಾನೂನು ಕ್ರಮ

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಬಿ.ನಾರಾಯಣಪ್ಪ ಎಚ್ಚರಿಕೆ



ಮೈಸೂರು, ಡಿ.29(ಆರ್‌ಕೆ)– ತಪ್ಪು ಮಾಹಿತಿಯೊಂದಿಗೆ ಜಾಹಿರಾತು ಮೂಲಕ ಗ್ರಾಹಕರಿಗೆ ಮೋಸ ಮಾಡಿದರೆ ಉದ್ದಿಮೆದಾರರು, ವ್ಯಾಪಾರಸ್ಥರ ವಿರುದ್ಧ ಪ್ರಕರಣ ದಾಖಲಿಸಿ, ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಬಿ. ನಾರಾಯಣಪ್ಪ ಇಂದಿಲ್ಲಿ ಎಚ್ಚರಿಕೆ ನೀಡಿದ್ದಾರೆ.

ಜಿಲ್ಲಾಡಳಿತ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಎಂಬಿಎ ವಿಭಾಗದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಗ್ರಾಹಕರಿಗೆ ವಂಚನೆ ಆಗುವುದನ್ನು ತಡೆಗಟ್ಟುವ ಸಲುವಾಗಿ ಜಾರಿಗೆ ತಂದಿರುವ ಗ್ರಾಹಕರ ಕಾಯ್ದೆಯನ್ನು ಬಳಸಿ ವ್ಯಾಪಾರಸ್ಥರು, ಉದ್ದಿಮೆಗಳಿಂದ ತೊಂದರೆಯಾಗದಂತೆ ತಡೆಯಲಾಗುವುದು ಎಂದರು.

ಆನ್‌ಲೈನ್‌ನಲ್ಲಿ ಜಾಹಿರಾತು ಮೂಲಕ ತಪ್ಪು ಮಾಹಿತಿ ನೀಡಿ ಗ್ರಾಹಕರನ್ನು ಆಕರ್ಷಿಸಿ ವಂಚಿಸಿದವರ ವಿರುದ್ಧ ಪ್ರಕರಣ ದಾಖಲಿಸಿ ಕಾಯ್ದೆಯಡಿ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು. ಯಾವುದೇ ಖಾಸಗಿ ಸಂಸ್ಥೆ, ಉದ್ಯಮ, ನೀರು, ವಿದ್ಯುತ್ ಸರಬರಾಜು ಇನ್ನಿತರ ಎಲ್ಲಾ ಸೇವೆಗಳಲ್ಲಿ ಲೋಪ ಕಂಡು ಬಂದರೂ ಗ್ರಾಹಕರ ಕಾಯ್ದೆಯಡಿ ಕ್ರಮವಹಿಸಿ ಸಾರ್ವಜನಿಕರಿಗೆ ಪರಿಹಾರೋಪಾಯ ಕಲ್ಪಿಸಲಾಗುತ್ತದೆ ಎಂದು ಅವರು ನುಡಿದರು.

2019 ಗ್ರಾಹಕರ ರಕ್ಷಣಾ ಕಾಯ್ದೆ (ತಿದ್ದುಪಡಿ) ಅನ್ವಯ ವಸ್ತುಗಳ ಗುಣಮಟ್ಟ ಉತ್ಪನ್ನದ ಸಂಪೂರ್ಣ ಮಾಹಿತಿಯನ್ನು ಪದಾರ್ಥದ ಮೇಲೆ ಮುದ್ರಿಸಬೇಕು. ಯಾವುದೇ ಸೇವೆಯಲ್ಲಿ ಲೋಪವಾದಲ್ಲಿ ಉತ್ಪಾದಕರು, ಪೂರೈಕೆದಾರರು ಅದರ ಜವಾಬ್ದಾರಿ ಹೊರಬೇಕಾಗುತ್ತದೆ ಎಂದ ಅವರು, ಗ್ರಾಹಕರು ತಮಗೆ ಅನ್ಯಾಯವಾದಾಗ ಹಿಂಜರಿಯದೇ ಆಯೋಗಕ್ಕೆ ದೂರು ನೀಡಿ ನ್ಯಾಯ ಪಡೆದುಕೊಳ್ಳಬೇಕು ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ, ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯರಾದ ಎಂ.ಕೆ. ಲಲಿತ, ಮಾರುತಿ ಹೆಚ್.ವಡ್ಡರ್, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕಿ ಕುಮುದ, ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಪ್ರಹ್ಲಾದ್ ಮೋದಿ ಅಪಘಾತ ಪ್ರಕರಣ

ಕಾರು ಚಾಲಕನ ಮೇಲೆ ಎಫ್‌ಐಆರ್

ಮೈಸೂರು, ಡಿ.29(ಆರ್‌ಕೆ)–ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಕಿರಿಯ ಸಹೋದರ ಪ್ರಹ್ಲಾದ್ ಮೋದಿ ಅವರೇ ಡ್ರೈವರ್‌ಗೆ ಕ್ಲೀನ್‌ಚಿಟ್ ನೀಡಿದರೂ, ಮೈಸೂರು ಗ್ರಾಮಾಂತರ ಠಾಣೆ ಪೊಲೀಸರು ಅಪಘಾತಕ್ಕೆ ಅಜಾಗರೂಕತೆ ಮತ್ತು ನಿರ್ಲಕ್ಷ್ಯವೇ ಕಾರಣವೆಂದು ಚಾಲಕನ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಬೆಂಗಳೂರು–ನೀಲಗಿರಿ ಹೆದ್ದಾರಿಯಲ್ಲಿ ಕಡಕೊಳ ಬಳಿ ಮರ್ಸಿಡಿಸ್ ಬೆನ್ಜ್ ಕಾರು ಡಿಸೆಂಬರ್ 27ರಂದು ರಸ್ತೆ ಡಿವೈಡರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಪ್ರಹ್ಲಾದ್ ಮೋದಿ, ಪುತ್ರ ಮೆಹುಲ್ ಮೋದಿ, ಸೊಸೆ ಜಿನಾಲ್ ಮೋದಿ ಹಾಗೂ ಮೊಮ್ಮಗ ಮಹಾರ್ಥ ಮೋದಿ ಅವರು ಗಾಯಗೊಂಡಿದ್ದರು.


ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಾವಲು ವಾಹನಕ್ಕೆ ನಿಯೋಜನೆಗೊಂಡಿದ್ದ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಎಆರ್‌ಎಸ್‌ಐ ಎಸ್.ಮಹದೇವ ಅವರು ನೀಡಿದ ದೂರಿನ ಮೇರೆಗೆ ಮರ್ಸಿಡಿಸ್ ಬೆನ್ಜ್ (ಕೆಎ 51 ಎಂಎನ್ 5678) ಕಾರು ಚಾಲಕ ಸತ್ಯನಾರಾಯಣ ಅವರ ವಿರುದ್ಧ ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ ಎಎಸ್‌ಐ ಆರ್.ಸ್ವಾಮಿಗೌಡ ಅವರು ಐಪಿಸಿ ಸೆಕ್ಷನ್ 279, 337ರ ರೀತ್ಯಾ ಡಿಸೆಂಬರ್ 27ರಂದು ಎಫ್‌ಐಆರ್(ಅಪರಾಧ ಸಂಖ್ಯೆ 0280/2022) ದಾಖಲಿಸಿದ್ದಾರೆ.

ಅಪಘಾತಕ್ಕೆ ಚಾಲಕನ ಅಜಾಗರೂಕತೆ ಮತ್ತು ನಿರ್ಲಕ್ಷ್ಯವೇ ಕಾರಣವಾಗಿದ್ದು, ಸತ್ಯನಾರಾಯಣ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳುವಂತೆ ಮಹದೇವ ಅವರು ದೂರು ನೀಡಿದ್ದರು. ಕಾರು ಚಾಲಕ 46 ವರ್ಷದ ಎನ್.ಸತ್ಯನಾರಾಯಣ ಬೆಂಗಳೂರು ನಿವಾಸಿಯಾಗಿದ್ದು, ಕಾರು ಬೆಂಗಳೂರಿನ ರಾಜಶೇಖರ್ ಎಂಬುವರಿಗೆ ಸೇರಿದ್ದಾಗಿದೆ.

ರಾಜಶೇಖರ ಅವರ ಖಾಯಂ ಕಾರು ಚಾಲಕ ರಜೆಯಲ್ಲಿದ್ದ ಕಾರಣ ಡಿಸೆಂಬರ್ 27ರಂದು ಸತ್ಯನಾರಾಯಣ ಸದರಿ ಬೆನ್ಜ್ ಕಾರನ್ನು ಚಾಲನೆ ಮಾಡುತ್ತಿದ್ದರು ಎನ್ನಲಾಗಿದೆ. ಪ್ರಹ್ಲಾದ್ ಮೋದಿ ಮತ್ತು ಕುಟುಂಬದವರು ಡಿಸೆಂಬರ್ 26ರಂದು ರಾತ್ರಿ ಬೆಂಗಳೂರಿನ ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದರು. ಅವರನ್ನು ಅಲ್ಲಿಂದ ಕುಮಾರ ಕೃಪ ಅತಿಥಿ ಗೃಹಕ್ಕೆ ಸತ್ಯನಾರಾಯಣ ಕರೆತಂದಿದ್ದರು.

ಹಾಗಾಗಿ ಅಂದು ರಾತ್ರಿ ತಡವಾಗಿ ಮನೆಗೆ ಹಿಂದಿರುಗಿದ್ದ ಸತ್ಯನಾರಾಯಣ, ಮರುದಿನ ಬೆಳಗ್ಗೆಯೇ ಗಣ್ಯರನ್ನು ಉಪಾಹಾರಕ್ಕೆ ರಾಜಶೇಖರ ಅವರ ಮನೆಗೆ ಕರೆದೊಯ್ದಿದ್ದರು. ಹಿಂದಿನ ದಿನ ರಾತ್ರಿ ಸರಿಯಾಗಿ ನಿದ್ರೆ ಮಾಡದಿದ್ದ ಕಾರಣ, ಬಂಡೀಪುರಕ್ಕೆ ಪ್ರಹ್ಲಾದ್ ಮೋದಿ ಹಾಗೂ ಕುಟುಂಬದವರನ್ನು ಕರೆದೊಯ್ಯುವಾಗ ನಿದ್ರೆ ಮಂಪರಿನಲ್ಲಿ ನಿಯಂತ್ರಣ ತಪ್ಪಿ ಕಾರು ರಸ್ತೆ ಡಿವೈಡರ್‌ಗೆ ಡಿಕ್ಕಿ ಹೊಡೆದಿರಬಹುದೆಂದು ಶಂಕಿಸಲಾಗಿದೆ. ಆದರೆ ಸತ್ಯನಾರಾಯಣ ಅನುಭವಿ ಚಾಲಕ ಎಂದು ಹೇಳಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.12.2022 ಶುಕ್ರವಾರ, ಮಳೆ ನಕ್ಷತ್ರ: ಪೂಷಾ, 30.12.2022ರಿಂದ 10.01.2023
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮೀ, ನಕ್ಷತ್ರ: ಉಭಾ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಕನ್ನಡದ ಅನನ್ಯ ಲೇಖಕಿಯರು, ಲೇಖನ–ಪ್ರೊ.ಹೇಮಲತಾ ಎಚ್.ಎಂ., 6.40 ಅರಿವಿನ ಶಿಖರ–ಗಾಯನ–ಸಿ.ವಿಶ್ವನಾಥ್, ಟಿ.ಎಸ್.ಸ್ನೇಹಾ, ಜಿ.ಪುಷ್ಪಲತಾ, ವ್ಯಾಖ್ಯಾನ–ಡಾ.ಹೆಚ್.ಎಂ.ಕಲಾಶ್ರೀ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ಶಿಕ್ಷಣ ಸಂಚಲನ", 9.30 ಗಾಂಧೀ ಸ್ಮೃತಿ, 10.00 ಆರ್.ಮೋಹನ್–ಕ್ಲಾರಿಯೋನೆಟ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್, 1.20 ಭಾವಗೀತೆ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ.ರವೀಂದ್ರಕುಮಾರ್, 3.00 ಅವಧರಿಸು ಬಾ ಅಮರ ನಾರೇಯಣ–ಕಾರ್ಯಕ್ರಮ ಸರಣಿ ಸಂಶೋಧನೆ, ಆಲೇಖ ಮತ್ತು ಸಂಗೀತ ನಿರ್ದೇಶನ–ಟಿ.ಎಸ್.ವಸಂತಮಾಧವಿ, ಪರಿಕಲ್ಪನೆ ಮತ್ತು ನಿರೂಪಣೆ–ಡಾ.ಎನ್.ರಘು ಸಾಹಿತ್ಯ ಮತ್ತು ನಿರೂಪಣೆ–ಪ್ರೊ.ಆರ್.ವಿಶ್ವೇಶ್ವರನ್, ನಿರ್ಮಾಣ–ಗೀತಾ ರಮಾನಂದ್, 4.00 ಮಹಿಳಾರಂಗ–ಹೊಸ ವರ್ಷದ ಕನಸುಗಳು–ಅಭಿಪ್ರಾಯಗಳನ್ನಾಧರಿಸಿದ ಕಾರ್ಯಕ್ರಮ, 4.30 ವೃತ್ತಿ ಮಾರ್ಗದರ್ಶನ–ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿನ ಇತ್ತೀಚಿನ ಬೆಳವಣಿಗೆಗಳು ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಗುರುರಾಜ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ–ಕೃಷಿ ಬಳಕೆಗಾಗಿ ಅಂತರ್ಜಲ ನಿರ್ವಹಣಾ ತಾಂತ್ರಿಕತೆಗಳು ಕುರಿತು ಡಾ.ಎಸ್.ಶ್ರೀಧರ ಹೆಗ್ಡೆ ಅವರೊಡನೆ ಸಂದರ್ಶನ, 8.00 ಸಂಧ್ಯಾರಾಗ, 9.15 ಜನಪದ ಸಂಗೀತ–ಕಸ್ತೂರಪ್ಪ ಮಾಶಣ್ಣನವರ್ ಮತ್ತು ತಂಡ, 10.00 ವಾದ್ಯವೃಂದ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :**ಧನುರ್ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹಾಭಿಷೇಕ, ಅಲಂಕಾರಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನಂ, ರಾಘವೇಂದ್ರನಗರ, ಬೆಳಗ್ಗೆಯಿಂದ

■ **ಶಾರದಾ ವಿಲಾಸ ಪದವಿಪೂರ್ವ ಕಾಲೇಜು:** 'ಸಮಷ್ಟಿ' ವಾರ್ಷಿಕ ಕ್ರೀಡಾಕೂಟ–2022, ಮುಖ್ಯ ಅತಿಥಿಗಳು: ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ ಮತ್ತು ಶಿಕ್ಷಣ ನಿಕಾಯ ವಿಭಾಗದ ಅಧ್ಯಕ್ಷ ಪ್ರೊ.ಎಸ್.ಮದಿ ಅಳಗನ್, ವಿಶೇಷ ಅತಿಥಿಗಳು: ಶಾರದಾ ವಿಲಾಸ ವಿದ್ಯಾಸಂಸ್ಥೆಗಳ ಅಧ್ಯಕ್ಷರಾದ ಡಾ.ಬಿ.ಎಂ.ಸುಬ್ರಾಯ, ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್, ಸ್ಥಳ: ಶಾರದಾ ವಿಲಾಸ ಪದವಿಪೂರ್ವ ಕಾಲೇಜು ಆವರಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ8.30ಕ್ಕೆ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು:** ಕೌದಿ ಕಲೆ ನರಸಿಮುಲು ಪಿ. ಬ್ಯಾಗೇರಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 10 ರಿಂದ.

■ **ಮೈಸೂರು ಅರಮನೆ ಮಂಡಳಿ:** ಫಲಪುಷ್ಪ ಪ್ರದರ್ಶನ, ಸ್ಥಳ: ಮೈಸೂರು ಅರಮನೆ ಆವರಣ, ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ.

■ **ಸುಪ್ರಭ ನಾಗೇಶ್‌ರಾವ್ ಸೇವಾ ಪ್ರತಿಷ್ಠಾನ :** ಏಕ ವ್ಯಕ್ತಿಯಿಂದ ವಿಶ್ವಶಾಂತಿಗಾಗಿ ವಿಷ್ಣು ಸಹಸ್ರನಾಮ ಪಾರಾಯಣ, ಸ್ಥಳ: 622, 2ನೇ ಮೇನ್, ಶಾರದಾದೇವಿನಗರ, ಬೆಳಗ್ಗೆ

■ **ಮಾನವ ಹಕ್ಕುಗಳ ಸೇವಾ ಸಮಿತಿ:** ವಿವಿಧ ಕ್ಷೇತ್ರದ ಸಾಧಕರಿಗೆ ಸಾಧಕ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ : ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ, ಅಧ್ಯಕ್ಷತೆ : ಸಮಾಜ ಸೇವಕ ಡಾ. ಕೆ.ರಘುರಾಂ ವಾಜಪೇಯಿ, ಸ್ಥಳ: ಪುರಭವನ, ಬೆಳಗ್ಗೆ 10.30ಕ್ಕೆ.

■ **ವಿಷ್ಣು ಸೇನಾ ಸಮಿತಿ :** ವಿಷ್ಣುವರ್ಧನ್ ಅವರ 13ನೇ ಪುಣ್ಯಸ್ಮರಣೆ, ಮುಖ್ಯ ಅತಿಥಿಗಳು : ಇಳೈ ಆಳ್ವಾರ್ ಸ್ವಾಮೀಜಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಪಾಲಿಕೆ ಸದಸ್ಯ ಸತೀಶ್, ಭರತ್, ಒಕ್ಕಲಿಗರ ಸಂಘದ ಕಾರ್ಯದರ್ಶಿ ಗಂಗಾಧರಗೌಡ, ಸ್ಥಳ : ವಿಷ್ಣುವರ್ಧನ್ ಉದ್ಯಾನವನ, ಬೆಳಗ್ಗೆ 10.30ಕ್ಕೆ.

■ **ಮಾತೃ ಮಂಡಲಿ ವಿದ್ಯಾಸಂಸ್ಥೆ** : ವಾರ್ಷಿಕೋತ್ಸವ, ಉದ್ಘಾಟನೆ : ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ನಾಗಮಲ್ಲೇಶ್, ಮುಖ್ಯ ಅತಿಥಿಗಳು : ಜಾನಪದ ವಿದ್ವಾಂಸ ಡಾ. ಪಿ.ಕೆ.ರಾಜಶೇಖರ್, ಅಧ್ಯಕ್ಷತೆ : ವಿದ್ಯಾಸಂಸ್ಥೆ ಅಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮಿ ಅರಸ್, ಸ್ಥಳ : ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಕರುಣಾಮಯಿ ವಿಷ್ಣು ಅಭಿಮಾನಿ ಬಳಗ :** ವಿಷ್ಣುವರ್ಧನ್ ಅವರ 13ನೇ ಪುಣ್ಯಸ್ಮರಣೆ ಅಂಗವಾಗಿ ಪೌರಕಾರ್ಮಿಕರಿಗೆ ಸೀರೆ ವಿತರಣೆ, ಮುಖ್ಯ ಅತಿಥಿಗಳು: ರಂಗಕರ್ಮಿ ಮಂಡ್ಯ ರಮೇಶ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಪಾಲಿಕೆ ಸದಸ್ಯ ಮಾ.ವಿ. ರಾಮಪ್ರಸಾದ್, ಸ್ಥಳ: ತಗಡೂರು ರಾಮಚಂದ್ರರಾವ್ ಉದ್ಯಾನವನ, ಬೆಳಗ್ಗೆ 11.30ಕ್ಕೆ.

■ **ಕಾವೇರಿ ಕರ್ನಾಟಕ ಪ್ರಾದೇಶಿಕ ಸಾಂಸ್ಕೃತಿಕ ಮತ್ತು ಸಾಹಿತ್ಯ ಅಕಾಡೆಮಿ:** ಕಾವೇರಿ ಕರ್ನಾಟಕ ರತ್ನ ಪ್ರಶಸ್ತಿ ಮತ್ತು ಅಕಾಡೆಮಿ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಶ್ರೀ ಕಲ್ಮೇಶ್ವರ ಸ್ವಾಮೀಜಿ, ಉದ್ಘಾಟನೆ: ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ ಡಾ.ಸತೀಶ್‌ಕುಮಾರ್ ಎಸ್.ಹೊಸಮನಿ, ಅಧ್ಯಕ್ಷತೆ: ಹಿರಿಯ ಗಜಲ್ ಕವಿ ಸಿದ್ದರಾಮ ಹೊನ್ಕಲ್, ಪ್ರಶಸ್ತಿ ವಿತರಣೆ: ಮಾಜಿ ಶಾಸಕ ಮಾರುತಿರಾವ್ ಪವಾರ್, ಲಯನ್ ಡಾ.ವೆಂಕಟೇಶ್, ಸ್ಥಳ: ರಂಗಚಾರ್ಲು ಪುರಭವನ, ಮಧ್ಯಾಹ್ನ 2 ರಿಂದ.

■ **ಶರಣ ಸಾಹಿತ್ಯ ಪರಿಷತ್ತು, ಸ್ನೇಹ ಬಳಗ, ಭಾವನಾಂತರಂಗ ಸಂಗೀತ ಶಾಲೆ :** ದತ್ತಿ ಕಾರ್ಯಕ್ರಮ, ಉದ್ಘಾಟನೆ : ಪ್ರೊ.ಎಂ.ಕೃಷ್ಣೇಗೌಡ ಅವರಿಂದ ಕರುಣೆ ಬಂದರೆ ಕಾಯೋ ಮರಣ ಬಂದರೆ ಒಯ್ಯೊ ಕುರಿತು ಉಪನ್ಯಾಸ, ಉಪಸ್ಥಿತರು : ಸ್ನೇಹ ಬಳಗದ ಅಧ್ಯಕ್ಷ ಹೆಚ್.ಜಿ. ಪರಶಿವಪ್ಪ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಸ್ಥಳ : ಶಿವ ದೇವಾಲಯದ ಆವರಣ, ಶ್ರೀರಾಂಪುರ, ಸಂಜೆ 4ಕ್ಕೆ.

■ **ವಿವೇಕಾನಂದ ರಾಕ್ ಮೆಮೋರಿಯಲ್, ವಿವೇಕಾನಂದ ಕೇಂದ್ರ :** ಸಮರ್ಥ ಭಾರತ ಪರ್ವ ಉತ್ಸವ ಪ್ರಯುಕ್ತ ಯೋಗಾಸನ, ಸುಭಾಷಿತ ಮತ್ತು ಶ್ಲೋಕ, ಸ್ಥಳ: ವಿವೇಕಾನಂದ ಕೇಂದ್ರ, ಪಂಪಾಪತಿ ರಸ್ತೆ, ಸಂಜೆ 4ಕ್ಕೆ.

■ **ಸ್ವರಾಲಯ ಸಂಗೀತ ಸಂಸ್ಥೆ :** ಸ್ವರಾಲಯ ಸಾಂಸ್ಕೃತಿಕ ಹಬ್ಬ, ಉದ್ಘಾಟನೆ : ವಿದ್ವಾನ್ ಸಿ. ಚೇತನ್, ಮುಖ್ಯ ಅತಿಥಿಗಳು : ಸಂಗೀತ ಶಿಕ್ಷಕ ವಿದುಷಿ ಶ್ರೀಮತಿ ಚಂದ್ರಿಕಾ, ಅಧ್ಯಕ್ಷತೆ : ವಿದುಷಿ ಶ್ರೀಮತಿ ಡಾ. ಸುಮಹರಿನಾಥ್, ಟ್ರೈಬಲ್ ನೃತ್ಯ, ಕು. ಆರ್.ಪಿ. ಕೌಶಿಕ್ ಅವರಿಂದ ಶಾಸ್ತ್ರೀಯ ಸಂಗೀತ ಗಾಯನ, ಕಲಾರ್ಪಣಂ ತಂಡದಿಂದ ಭರತನಾಟ್ಯ ಕಾರ್ಯಕ್ರಮ, ನಿರ್ದೇಶನ : ಜಯಶ್ರೀ ತೋಲ್‌ಪಾಡಿ, ವಿದ್ವಾನ್ ಸಿ. ಚೇತನ್–ವಯೋಲಿನ್, ವಿದ್ವಾನ್ ವಿ. ಶ್ಯಾಮ್–ಮೃದಂಗ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ ಭವನ, ಸಂಜೆ 4.30ಕ್ಕೆ.

■ **ಗೋಪಾಲಸ್ವಾಮಿ ಶಿಶುವಿಹಾರ ಸಂಸ್ಥೆಗಳು** : ಶಾಲಾ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಪ್ರಾಧ್ಯಾಪಕರಾದ ಡಾ. ಜ್ಯೋತಿಶಂಕರ್, ಅಧ್ಯಕ್ಷತೆ : ಮಹಾರಾಜ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ. ಎಸ್. ಮುರಳಿ, ಸ್ಥಳ: ಸ್ವಾಮಿ ವಿವೇಕಾನಂದ ರಂಗಮಂಟಪ, ಸಂಜೆ 5ಕ್ಕೆ.

■ **ಶ್ರೀ ಆಂಡಾಳ್ ಮಂದಿರಂ:** ಧನುರ್ಮಾಸ ಪೂಜೆ, ವಿದ್ವಾನ್ ಎಂ.ಕೆ. ಶೆಲ್ವ ನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ. ಸ್ಥಳ: ಆಂಡಾಳ್ ಮಂದಿರಂ ಆವರಣ. ವಿವಿ ಮೊಹಲ್ಲಾ, ಸಂಜೆ 6 ರಿಂದ 7.30ರವರೆಗೆ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ:** ವಿದುಷಿ ಬಿ.ಕೆ. ಸೀತಾಲಕ್ಷ್ಮಿ ಅವರಿಂದ ತಿರುಪ್ಪಾವೈ ಪ್ರವಚನ. ಸ್ಥಳ: ದೇವಸ್ಥಾನ ಆವರಣ, ತ್ಯಾಗರಾಜ ರಸ್ತೆ, ಸಂಜೆ 6ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆಆರ್. ವನಂ :** ಡಾ. ಎನ್.ಕೆ. ರಾಮಶೇಷನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಡಾ. ಕಮಲರಾಮನ್ ಅವರ ಮಂದಿರ, ಅಂಬೇಡ್ಕರ್ ರಸ್ತೆ, ಸಂಜೆ 6.15 ರಿಂದ.

■ **ಶ್ರೀ ಮಹಾಜನಸಭಾ :** ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಶ್ರೀ ಕೃಷ್ಣಮೂರ್ತಿಪುರಂ ಶ್ರೀರಾಮಮಂದಿರ, ಕಾಂತರಾಜ ಅರಸು ರಸ್ತೆ, ಸಂಜೆ 6.15 ರಿಂದ.

■ **ನಾದರಂಗ** : ನಾಟಕೋತ್ಸವ, ಆಶಯ ನುಡಿ : ರಂಗಾನಂದ ಕಲಾ ಸಂಘದ ರಂಗ ನಿರ್ದೇಶಕ ರಂಗಸ್ವಾಮಿ, ಶ್ರೀ ಗುರುಶಾಲೆ ಮಕ್ಕಳಿಂದ ಡಾ. ಹೆಚ್.ಕೆ. ರಾಮನಾಥ್ ವಿರಚಿತ ಮಕ್ಕಳ ನಾಟಕ 'ಮತ್ತೆ ಬದುಕಿರಿ', ನಿರ್ದೇಶನ : ಹೆಚ್.ಎಸ್. ಕವಿತ, ಸ್ಥಳ: ಕಿರು ರಂಗಮಂದಿರ, ಸಂಜೆ 6.45ಕ್ಕೆ.

ಕಂಚಮಳ್ಳಿಯಲ್ಲಿಂದು, ಹೆಚ್.ಡಿ. ಕೋಟೆ ತಾ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಪದವಿಪೂರ್ವ ಕಾಲೇಜು :** ಎನ್‌ಎಸ್‌ಎಸ್ ವಾರ್ಷಿಕ ಶಿಬಿರದ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಪ್ರಾಂಶುಪಾಲ ಎಂ.ಪಿ. ರೇವಣ್ಣ, ಸಮಾರೋಪ ಭಾಷಣ : ಸಹಾಯಕ ಸಂಯೋಜನಾಧಿಕಾರಿ ಡಾ. ಟಿ.ಕೆ. ರವಿ, ಮುಖ್ಯ ಅತಿಥಿಗಳು : ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಉದಯಕುಮಾರ್, ಹೆಚ್.ವಿ. ಕೃಷ್ಣಸ್ವಾಮಿ, ಜಯಪ್ರಕಾಶ್ ಚಿಕ್ಕಣ್ಣ, ಪಿ. ನಟರಾಜು, ರಂಗಸ್ವಾಮಿ, ಶೇಖರ್, ಮಲ್ಲಿಗಮ್ಮ, ಸಿ.ಕೆ. ಗಿರೀಶ್, ಸಿದ್ದರಾಜು, ಬೆಳಗ್ಗೆ 11ಕ್ಕೆ.

ಸುತ್ತೂರು ಕ್ಷೇತ್ರ, ನಂಜನಗೂಡು ತಾ.

■ **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ :** ಎನ್‌ಎಸ್‌ಎಸ್ ವಾರ್ಷಿಕ ಶಿಬಿರ, ಡಾ. ಮಧುಸೂದನ್ ಅವರಿಂದ ಆರೋಗ್ಯಕರ ಜೀವನ ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು : ಅಂತಾರಾಷ್ಟ್ರೀಯ ಕ್ರೀಡಾಪಟು ಎಸ್.ಪಿ. ಶಿವಕುಮಾರ್, ಅಧ್ಯಕ್ಷತೆ: ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಮುಖ್ಯಸ್ಥೆ ಶ್ರೀಮತಿ ವಿ. ಗೀತಾ, ಸಂಜೆ 4ಕ್ಕೆ.

ಮೈಸೂರಿನ ವಾಹನ ದಟ್ಟಣೆ ನೋಡಿದರೆ ಆತಂಕವಾಗುತ್ತದೆ!

● ನಿಮಾನ್ಸ್ ನಿರ್ದೇಶಕಿ ಡಾ.ಪ್ರತಿಮಾ ಮೂರ್ತಿ ಬೇಸರ ● ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ಭಾಗಿ



ಮೈಸೂರು, ಡಿ.29(ಜಿಎ)– ಕಣ್ಣುಗಳಲ್ಲಿ ಜಗತ್ತನ್ನು ನೋಡುವ ಹಾಗೇ ಕೆಲವರು ಬಾಯಿ ಮತ್ತು ಕಿವಿಯ ಮೂಲಕವೂ ಜಗತ್ತನ್ನು ನೋಡುತ್ತಾರೆ. ಅದಕ್ಕೆ ವಾಕ್ ಮತ್ತು ಶ್ರವಣ ವಿದ್ಯಾರ್ಥಿಗಳ ಸಹಕಾರ ಬಹಳ ಮುಖ್ಯ ಎಂದು ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ(ನಿಮಾನ್ಸ್) ನಿರ್ದೇಶಕಿ ಡಾ.ಪ್ರತಿಮಾ ಮೂರ್ತಿ ಹೇಳಿದರು.

ನಗರದ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಭವನದಲ್ಲಿ ಆಯೋಜಿಸಿದ್ದ ಮೈಸೂರು ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಮಾತನಾಡಿದರು.

ಮೈಸೂರಿಗೆ ಬರುವುದು ಎಂದರೆ, ನನಗೆ ಸಂತಸದ ವಿಚಾರವಾಗಿದ್ದು, ಅದರಲ್ಲಿಯೂ ಜೆಎಸ್‌ಎಸ್ ಸಂಸ್ಥೆಯವರು ತಮ್ಮ ವಿವಿಧ ಸಂಸ್ಥೆಗಳ ಮೂಲಕ ಸಮಾಜಕ್ಕೆ ಉತ್ತಮ ಕೊಡುಗೆಗಳನ್ನು ನೀಡಿದ್ದಾರೆ. ಅವರ ಆಹ್ವಾನ ನೋಡಿದ ತಕ್ಷಣ ಮೈಸೂರಿಗೆ ಆಗಮಿಸಿದೆ. ಇಲ್ಲಿನ ಪರಿಸರ ನೆಮ್ಮದಿಯನ್ನು ನೀಡುತ್ತದೆ. ಆದರೆ, ಆಸ್ಪತ್ರೆಯ ಮುಂಭಾಗದ ವಾಹನ ದಟ್ಟಣೆ ನೋಡಿದಾಗ ಬೆಂಗಳೂರು ನೆನಪಾಯಿತು ಎಂದು ಆತಂಕ ವ್ಯಕ್ತಡಿಸಿದರು.

ನೀವು ಅದ್ಭುತವಾದ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದೀರಾ. ಕಿವಿ ಕೇಳದ ಒಂದು ಮಗು ನೀವು ಚಿಕಿತ್ಸೆ ನೀಡಿದ ನಂತರ ತನ್ನ ತಾಯಿಯ ಮಾತುಗಳನ್ನು ಕೇಳಿ ಆನಂದಿಸುವ ಕ್ಷಣಕ್ಕೆ ನೀವು ಸಾಕ್ಷಿಯಾಗುತ್ತಿರಾ. ಅಂತಹ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಲು ನಿಮ್ಮ ಕುಟುಂಬಸ್ಥರು ಒಪ್ಪಿಕೊಂಡಿರುವುದಕ್ಕೆ ನಾನು ಧನ್ಯವಾದ ತಿಳಿಸುತ್ತೇನೆ ಎಂದರು.

ತಂತ್ರಜ್ಞಾನ ಅನೇಕ ಸಮಸ್ಯೆಗಳಿಗೆ ನೆರವಾಗಲಿದ್ದು, ಅದೇ ರೀತಿ ವಾಕ್ ಮತ್ತು ಶ್ರವಣ ದೋಷಗಳಿಗೆ ತಂತ್ರಜ್ಞಾನ ಪರಿಹಾರ ಕಲ್ಪಿಸಿದೆ. ಅದನ್ನು ಬಳಕೆ ಮಾಡಿಕೊಳ್ಳಬೇಕಾಗಿದೆ. ಈ ಕುರಿತು ಜನಸಾಮಾನ್ಯರಿಗೂ ಅರಿವು ಮೂಡಿಸಬೇಕು. ಇದರಿಂದ ವಾಕ್ ಮತ್ತು ಶ್ರವಣ ದೋಷವುಳ್ಳ ಜನರು ಸಾಮಾನ್ಯರಂತೆ ಬದುಕಬಹುದು. ಅದಕ್ಕೆ ಈ ಕ್ಷೇತ್ರದ ವೈದ್ಯರು ನೆರವಾಗಬೇಕು. ಇದು ಸಾಧ್ಯವಾದರೆ ಅವರ ಜೀವನದಲ್ಲಿ ಹೊಸ ಆಶಾಕಿರಣ ಮೂಡಲಿದೆ ಎಂದರು.

ಶ್ರವಣದೋಷ ಉಪಕರಣಗಳು, ಧ್ವನಿಯಲ್ಲಿ ಬದಲಾವಣೆ ತರುವ ಮತ್ತು ಅಗತ್ಯ ಮಾರ್ಗದರ್ಶನ ನೀಡುವ ಸಂಶೋಧನೆಗಳು ನಗರ ಪ್ರದೇಶದಲ್ಲಿ ಮಾತ್ರ ಹೆಚ್ಚಿನ ಪ್ರಮಾಣದಲ್ಲಿ ಲಭ್ಯ ಇವೆ. ಆದರೆ, ಗ್ರಾಮೀಣ ಪ್ರದೇಶದ ಜನತೆ ಇದರಿಂದ ದೂರ ಉಳಿದಿದ್ದಾರೆ. ಈ ಅಂತರವನ್ನು ಕಡಿಮೆ ಮಾಡಬೇಕಿದೆ ಎಂದು ತಿಳಿಸಿದರು.

ಸ್ನಾತಕ ಪದವಿಯ 39, ಸ್ನಾತಕೋತ್ತರ ಪದವಿಯ 38 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ವಿವಿಧ ವಿಷಯಗಳಲ್ಲಿ ವಿಶೇಷ ಸಾಧನೆ ಮಾಡಿದ 12 ವಿದ್ಯಾರ್ಥಿಗಳಿಗೆ ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್ ಉಪಸ್ಥಿತರಿದ್ದರು.

ಮಾಧವಗೆರೆ ಗ್ರಾಮದಲ್ಲಿ ಆತಂಕ ಸೃಷ್ಟಿಸಿದ್ದ ಮತ್ತೊಂದು ಚಿರತೆ ಸೆರೆ

ಮೈಸೂರು,ಡಿ.29(ಎಂಟಿವೈ)– ಮೈಸೂರು ಜಿಲ್ಲೆಯಲ್ಲಿ ಕಳೆದ ಕೆಲವು ದಿನಗಳಿಂದ ಚಿರತೆಗಳ ಹಾವಳಿ ಹೆಚ್ಚಾಗಿದ್ದು, ಅರಣ್ಯ ಇಲಾಖೆ ಇಟ್ಟಿದ್ದ ಬೋನಿಗೆ ಆಹಾರ ಅರಸಿ ಬಂದ ಚಿರತೆಯೊಂದು ಸೆರೆ ಸಿಕ್ಕಿದೆ. ಮೈಸೂರು ತಾಲೂಕಿನ ಮಾಧವಗೆರೆ ಗ್ರಾಮದಲ್ಲಿ ಕಳೆದ ಕೆಲವು ದಿನಗಳಿಂದ ಕಾಣಿಸಿಕೊಂಡು ಜನರಲ್ಲಿ ಆತಂಕವನ್ನುಂಟು ಮಾಡಿದ್ದ ಚಿರತೆ ಕೊನೆಗೂ ಬೋನಿಗೆ ಬಿದ್ದಿದೆ. ಗ್ರಾಮದಲ್ಲಿ ಕಾಣಿಸಿಕೊಳ್ಳುತ್ತಿದ್ದರೂ ಜಾನುವಾರುಗಳ ಮೇಲೆ ದಾಳಿ ನಡೆಸಿರುವ ಪ್ರಕರಣ ದಾಖಲಾಗಿರಲಿಲ್ಲ. ಆದರೂ, ಗ್ರಾಮಸ್ಥರ ಕೋರಿಕೆ ಮೇರೆಗೆ ಬೋನ್ ಇಡಲಾಗಿತ್ತು. ಆದರೆ, ಆಹಾರ ಅರಸಿ ಬಂದ ಚಿರತೆ ಬೋನ್‌ಗೆ ಬಿದ್ದಿದೆ. 4–5 ವರ್ಷದ ಗಂಡು ಚಿರತೆ ಸೆರೆ ಸಿಕ್ಕಿದ್ದು, ಆರೋಗ್ಯದಿಂದ ಕೂಡಿದೆ. ಪಶು ವೈದ್ಯರಿಂದ ಆರೋಗ್ಯ ತಪಾಸಣೆ ಮಾಡಿಸಿದ ಬಳಿಕ, ಅರಣ್ಯ ಪ್ರದೇಶಕ್ಕೆ ಕೊಂಡೊಯ್ದು ಬಿಡಲಾಯಿತು.



ಮುಗಿಬಿದ್ದ ಜನತೆ: ಬೋನಿಗೆ ಬಿದ್ದ ಚಿರತೆಯನ್ನು ನೋಡಲು ಕುತೂಹಲದಿಂದ ಗ್ರಾಮಸ್ಥರು ಮುಗಿಬಿದ್ದರು. ಮೊಬೈಲ್‌ನಲ್ಲಿ ಚಿತ್ರ ತೆಗೆದುಕೊಂಡು ಸಂಭ್ರಮಿಸಿದರು. ಗ್ರಾಮಸ್ಥರಲ್ಲಿ ಈ ಚಿರತೆ ಮೇಲೆ ಅಸಮಾಧಾನವಾಗಲೀ, ಆಕ್ರೋಶವಾಗಲೀ ವ್ಯಕ್ತವಾಗದೇ ಅಬ್ಬಾ ಇದೇನಾ ಆ ಚಿರತೆ ಎಂಬ ಉದ್ಗಾರ ಕೇಳಿಬಂತು. 15 ದಿನದಲ್ಲಿ ಸೆರೆ ಸಿಕ್ಕ ಮೂರನೇ ಚಿರತೆ ಇದಾಗಿದ್ದು, ಬನ್ನೂರು ಬಳಿ ಯುವಕನನ್ನು ಕೊಂದಿದ್ದ ಚಿರತೆ, ಕೀಳನಪುರದಲ್ಲಿ ಸೆರೆ ಸಿಕ್ಕಿದ ಚಿರತೆ ಹಾಗೂ ಮಾಧವಗೆರೆಯಲ್ಲಿ ಸೆರೆ ಸಿಕ್ಕ ಚಿರತೆ ಈ ಮೂರೂ ಗಂಡು ಚಿರತೆಯಾಗಿರುವುದು ವಿಶೇಷ.

ಡಿಸಿಎಫ್ ಕೆ.ಕಮಲಾ ಕರಿಕಾಳನ್ ನೇತೃತ್ವದಲ್ಲಿ ಆರ್‌ಎಫ್‌ಓ ಕೆ.ಸುರೇಂದ್ರ ಹಾಗೂ ಸಿಬ್ಬಂದಿ, ಹಿರಿಯ ಅಧಿಕಾರಿಗಳು ಸೂಚಿಸಿದ ಅರಣ್ಯ ಪ್ರದೇಶದಲ್ಲಿ ಚಿರತೆಯನ್ನು ಬಿಡುಗಡೆ ಮಾಡಿದರು.

ಸಿಪಿಕೆಗೆ ಡಾ.ದ.ರಾ.ಬೇಂದ್ರೆ ಕಾವ್ಯ ಪ್ರಶಸ್ತಿ

ಮೈಸೂರು, ಡಿ.29(ಎಂಕೆ)– ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಅವರಿಗೆ ಶಿವಮೊಗ್ಗ ಕರ್ನಾಟಕ ಸಂಘ(ಹಸೂಡಿ ವೆಂಕಟಶಾಸ್ತ್ರಿ ಸಾಹಿತ್ಯ ಭವನ) ನೀಡುವ 'ಡಾ.ದ.ರಾ.ಬೇಂದ್ರೆ ಕಾವ್ಯ ಪ್ರಶಸ್ತಿ' ಲಭಿಸಿದೆ.



ಕಾವ್ಯ, ವಿಮರ್ಶೆ, ವಿಚಾರ, ಭಾಷಾಂತರ, ಚಿಂತನಾ ಪ್ರಬಂಧ, ಗ್ರಂಥ ಸಂಪಾದನೆ, ಸಂಶೋಧನೆ, ಹಾಸ್ಯ, ಜೀವನಚಿತ್ರ, ಮಕ್ಕಳ ಸಾಹಿತ್ಯ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಮುನ್ನೂರಕ್ಕೂ ಹೆಚ್ಚು ಕೃತಿಗಳನ್ನು ಬರೆದಿರುವ ಸಿಪಿಕೆಯವರ ಸಾಹಿತ್ಯ ಸೇವೆ ಗುರ್ತಿಸಿ 'ಡಾ.ದ.ರಾ.ಬೇಂದ್ರೆ ಕಾವ್ಯ ಪ್ರಶಸ್ತಿ' ನೀಡಿ ಗೌರವಿಸಲಾಗುತ್ತಿದೆ.

ಡಿ.31ರಂದು ಶಿವಮೊಗ್ಗ ಕರ್ನಾಟಕದಲ್ಲಿ ಸಂಘದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ ಅಭಿನಂದನಾ ನುಡಿಗಳನ್ನಾಡಲಿದ್ದಾರೆ. ಕರ್ನಾಟಕ ಸಂಘದ ಅಧ್ಯಕ್ಷ ಎಂ.ಎನ್.ಸುಂದರರಾಜ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಹೊಸ ವರ್ಷದ ಸಂಭ್ರಮಾಚರಣೆ: ಮೈಸೂರು ಜಿಲ್ಲೆಯಲ್ಲಿ 25 ಕೋಟಿ ಮೌಲ್ಯದ ಮದ್ಯ ವಹಿವಾಟಿನ ನಿರೀಕ್ಷೆ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಡಿ.29– ಕೊರೊನಾ ಹಿನ್ನೆಲೆಯಲ್ಲಿ ಎರಡು ವರ್ಷ ಹೊಸ ವರ್ಷದ ಸಂಭ್ರಮಾಚರಣೆಯಿಂದ ದೂರವುಳಿದಿದ್ದ ಜನರು ಈ ಬಾರಿ ಸಂಭ್ರಮದಿಂದ ನೂತನ ವರ್ಷವನ್ನು ಬರಮಾಡಿಕೊಳ್ಳಲು ಬಯಸಿದ್ದು, ಮೈಸೂರು ಜಿಲ್ಲೆಯಲ್ಲಿ 25 ಕೋಟಿಗೂ ಅಧಿಕ ಮೌಲ್ಯದ ಮದ್ಯ ಮಾರಾಟವಾಗುವ ನಿರೀಕ್ಷೆ ವ್ಯಕ್ತವಾಗುತ್ತಿದೆ.



ಮೈಸೂರು ಜಿಲ್ಲೆಯಲ್ಲಿ ಸಿಎಲ್–2(ವೈನ್ ಸ್ಟೋರ್), ಸಿಎಲ್4(ಕ್ಲಬ್), ಸಿಎಲ್–7(ಬಾರ್‌ನೊಂದಿಗೆ ಊಟ, ವಸತಿ ಸೌಲಭ್ಯ), ಸಿಎಲ್–9(ಬಾರ್ ಅಂಡ್ ರೆಸ್ಟೋರೆಂಟ್) ಲೈಸನ್ಸ್ ಹೊಂದಿರುವ 375 ಮದ್ಯ ಮಾರಾಟ ಕೇಂದ್ರಗಳಿವೆ. ಅದರೊಂದಿಗೆ 50ಕ್ಕೂ ಹೆಚ್ಚು ಎಂಎಸ್‌ಐಎಲ್ ಕೇಂದ್ರಗಳಿವೆ. ಈ ಎಲ್ಲಾ ಕೇಂದ್ರಗಳಲ್ಲೂ ಡಿ.30ರಿಂದಲೇ ಮದ್ಯ ಮಾರಾಟ ಜೋರಾಗಿ ನಡೆಯಲಿದ್ದು, ಹೊಸ ವರ್ಷದ ಸಂಭ್ರಮಾಚರಣೆಗೆ ಡಿ.31ರಂದು 25 ಕೋಟಿ ರೂ. ಮೌಲ್ಯದ ಮದ್ಯ ಮಾರಾಟವಾಗುವುದು ಖಚಿತವಾಗಿದ್ದು, 24 ಗಂಟೆ ಮುನ್ನವೇ ಬೇಡಿಕೆಗೆ ಅನುಗುಣವಾಗಿ ಮದ್ಯ ಮಾರಾಟ ಮಳಿಗೆಗಳಲ್ಲಿ ಸ್ಟಾಕ್ ಇಟ್ಟುಕೊಳ್ಳಲು ಮದ್ಯ ಮಾರಾಟಗಾರರು ನಿರ್ಧರಿಸಿದ್ದಾರೆ.

ಮೈಸೂರಲ್ಲಿ 40 ಹೋಟೆಲ್‌ಗಳು ಹಾಗೂ 20 ಕ್ಲಬ್‌ಗಳಲ್ಲಿ ಹೊಸ ವರ್ಷದ ಸಂಭ್ರಮಾಚರಣೆಯ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಆಕರ್ಷಕ ಕಾರ್ಯಕ್ರಮಗಳ ಮೂಲಕ ಪಾರ್ಟಿಗಳಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗಿದ್ದು, ವ್ಯವಸ್ಥೆಗೆ ಅನುಗುಣವಾಗಿ ಪ್ರವೇಶ ಶುಲ್ಕ ನಿಗದಿ ಮಾಡಲಾಗಿದೆ. ಹೊಸ ವರ್ಷದ ಪಾರ್ಟಿಗಳಲ್ಲಿ ಪಾಲ್ಗೊಳ್ಳಲು ಟಿಕೆಟ್ ಕಾಯ್ದಿರಿಸುವ ಪ್ರಕ್ರಿಯೆಯೂ ಭರದಿಂದ ಸಾಗಿದೆ.

ನಗರದಲ್ಲೇ ಹೆಚ್ಚು: ಹೊಸ ವರ್ಷಾಚರಣೆ ಮೈಸೂರು ನಗರ ವ್ಯಾಪ್ತಿಯಲ್ಲಿ ಭರ್ಜರಿಯಾಗಿರಲಿದ್ದು, ಜಿಲ್ಲೆಯ ವಹಿವಾಟಿನಲ್ಲಿ ಶೇ.70ರಷ್ಟು ಮದ್ಯ ಮಾರಾಟ ನಗರ ಪ್ರದೇಶದಲ್ಲೇ ನಡೆದರೆ, ಶೇ.30ರಷ್ಟು ಮದ್ಯ ಮಾರಾಟ ಗ್ರಾಮೀಣ ಪ್ರದೇಶದಲ್ಲಿ ನಡೆಯಲಿದೆ. ಕೆಲವರು ನಗರ ಪ್ರದೇಶದಿಂದ ಪಾರ್ಸೆಲ್ ತೆಗೆದುಕೊಂಡು ಹೋಗಿ ಗ್ರಾಮೀಣ ಪ್ರದೇಶದಲ್ಲಿ ಪಾರ್ಟಿ ಮಾಡಲಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಮದ್ಯ ಮಾರಾಟಗಾರರ ಸಂಘದ ಅಧ್ಯಕ್ಷ ಎಸ್.ಗುರುಸ್ವಾಮಿ, ಎರಡು ವರ್ಷದ ನಂತರ ಹೊಸ ವರ್ಷದ ಸಂಭ್ರಮಾಚರಣೆ ಜೋರಾಗಿ ನಡೆಯಲಿದೆ. ಸಾಮಾನ್ಯ ದಿನಗಳಿಗಿಂತ ಶೇ.30ರಷ್ಟು ವಹಿವಾಟು ಹೆಚ್ಚಾಗಲಿದೆ. ಹೊಸ ವರ್ಷದ ಆಚರಣೆಗೆ ಸುಮಾರು 25 ಕೋಟಿಗೂ ಅಧಿಕ ಮೌಲ್ಯದ ಮದ್ಯ ಮಾರಾಟವಾಗಲಿದೆ. ಹೊಸ ವರ್ಷದ ಸಂಭ್ರಮಕ್ಕೆ ಮದ್ಯ ಸರಬರಾಜು ಮಾಡಲು ಒಂದು ದಿನ ಮೊದಲೇ ಇಂಡೆಂಟ್ ಹಾಕಿ ಆನ್‌ಲೈನ್‌ನಲ್ಲಿ ಹಣ ಕಟ್ಟುತ್ತೇವೆ. ಮೈಸೂರಿನ ಹೆಬ್ಬಾಳು ಮತ್ತು ಕೂರ್ಗಳ್ಳಿಯಲ್ಲಿರುವ ಕರ್ನಾಟಕ ರಾಜ್ಯ ಬ್ರಿವರೇಜ್ ಕಾರ್ಪೋರೇಷನ್ ಡಿಪೋಗಳಿಂದ ಮೈಸೂರಿನ ಮದ್ಯ ಮಾರಾಟ ಮಳಿಗೆಗಳಿಗೆ ಮದ್ಯ ಸರಬರಾಜಾಗುತ್ತದೆ. ಹುಣಸೂರಲ್ಲಿ ಮತ್ತೊಂದು ಡಿಪೋ ಇದ್ದು, ಅದರಿಂದ ಹುಣಸೂರು, ಕೊಡಗಿನ ಭಾಗಕ್ಕೂ ಸರಬರಾಜಾಗುತ್ತದೆ. ಒಟ್ಟಾರೆ ಹೊಸ ವರ್ಷದ ಸಂಭ್ರಮಕ್ಕೆ ಮದ್ಯಪ್ರಿಯರಿಗೆ ಅಗತ್ಯಕ್ಕೆ ಅನುಗುಣವಾಗಿ ಮದ್ಯ ಸರಬರಾಜು ಮಾಡಲು ನಾವು ಸಿದ್ಧತೆ ಮಾಡಿಕೊಂಡಿದ್ದೇವೆ.

ಡಾ. ಸಿ.ಶರತ್‌ಕುಮಾರ್ ಅಭಿನಂದನಾ ಗ್ರಂಥ ಹೊಂಬೆಳಕು ಬಿಡುಗಡೆ



ಮೈಸೂರು,ಡಿ.29(ಎಂಟಿವೈ)– ನಿಸ್ವಾರ್ಥ ಸಮಾಜಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡಿರುವವರಿಗೆ ಯಶಸ್ಸು ಲಭಿಸಲಿದೆ ಎನ್ನುವುದಕ್ಕೆ ಡಾ.ಸಿ.ಶರತ್‌ಕುಮಾರ್ ಉದಾಹರಣೆ ಎಂದು ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಶಿವಣ್ಣ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಗುರುವಾರ ಚುಟುಕು ಸಾಹಿತ್ಯ ಪರಿಷತ್ ಕೇಂದ್ರ ಸಮಿತಿ ಹಾಗೂ ವೈದ್ಯ ವಾರ್ತಾ ಪ್ರಕಾಶನದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಸಿಎಸ್‌ಕೆ ಅಭಿನಂದನಾ ಗ್ರಂಥ 'ಹೊಂಬೆಳಕು' ಬಿಡುಗಡೆ ಮಾಡಿ ಮಾತನಾಡಿದ ಅವರು, ವೈದ್ಯಕೀಯ ಕ್ಷೇತ್ರದಲ್ಲಿ ಡಾ.ಸಿ.ಶರತ್‌ಕುಮಾರ್ ಮಾಡಿರುವ ಸೇವೆ ಸಾಕಷ್ಟು, 80ಕ್ಕೂ ಹೆಚ್ಚು ಕನ್ನಡದಲ್ಲಿ ವೈದ್ಯಸಾಹಿತ್ಯ ರಚಿಸಿದ್ದಾರೆ. ತಮ್ಮ ಕ್ಷೇತ್ರದಲ್ಲಿ ಅಗಾಧವಾದ ಮಾಹಿತಿ ಹೊಂದಿದ್ದಾರೆ. ಇಂತಹವರ ಸಂಖ್ಯೆ ಇನ್ನಷ್ಟು ಹೆಚ್ಚಾಗಬೇಕು. ಹೊಂಬೆಳಕು ಅಭಿನಂದನಾ ಗ್ರಂಥ 480 ಪುಟಗಳಿದ್ದು, 98 ಮಂದಿ ಗಣ್ಯರು ಬರೆದಿರುವ ಲೇಖನ ಹೊಂದಿರುವುದು ವಿಶೇಷ. ಡಾ.ಶರತ್‌ಕುಮಾರ್ ಹಾಗೂ ಚುಟುಕು ಸಾಹಿತ್ಯ ಪರಿಷತ್‌ನ ಡಾ.ಎಂ.ಜಿ.ಆರ್.ಅರಸ್ ಅವರು 4 ದಶಕಗಳ ಸ್ನೇಹಿತರಾಗಿದ್ದು, ಅಭಿನಂದನಾ ಗ್ರಂಥ ಬಿಡುಗಡೆ ಮಾಡುವ ಮೂಲಕ ಸ್ನೇಹ ಇನ್ನಷ್ಟು ಗಟ್ಟಿಗೊಂಡಂತಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ವಿದ್ಯಾಪೀಠದ ಕಾರ್ಯದರ್ಶಿ ಶಿವಕುಮಾರ ಸ್ವಾಮಿ, ಜಯದೇವ ಹೃದ್ರೋಗ ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ, ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಡಾ.ಸಿ.ಶರತ್ ಕುಮಾರ್, ಡಾ.ಎಸ್.ರಾಜೇಶ್ವರಿ, ರಾಮಸ್ವಾಮಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ವಸತಿ ರಹಿತರ ಗುರುತಿಸುವ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ



ಮೈಸೂರು, ಡಿ.29(ಎಂಕೆ)– ಮೈಸೂರು ಮಹಾನಗರಪಾಲಿಕೆ ಡೇ–ನಲ್ಮ್(ದೀನ್ ದಯಾಳ್ ಅಂತ್ಯೋದಯ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ) ವಿಭಾಗದ ವತಿಯಿಂದ ಎನ್‌ಜಿಓ ಸಂಸ್ಥೆಗಳ ಸಹಕಾರದೊಂದಿಗೆ ಹಮ್ಮಿಕೊಂಡಿರುವ ವಸತಿ ರಹಿತರನ್ನು ಗುರುತಿಸುವ ಅಭಿಯಾನ ಹಾಗೂ 'ಲಿಂಗಸಮಾನತೆ' ಕುರಿತು ಜಾಗೃತಿ ಕಾರ್ಯಕ್ರಮಗಳಿಗೆ ಗುರುವಾರ ಚಾಲನೆ ದೊರೆಯಿತು.

ನಗರಪಾಲಿಕೆ ಎದುರು ಕ್ಯಾಂಡಲ್ ಲೈಟ್ ಬೆಳಗಿಸುವ ಮೂಲಕ ಮೇಯರ್ ಶಿವಕುಮಾರ್, ವಸತಿ ರಹಿತರ ಸಮೀಕ್ಷೆಗೆ ಹಾಗೂ 'ಲಿಂಗಸಮಾನತೆ' ಜಾಗೃತಿ ಜಾಥಾಗೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಪಾಲಿಕೆ ವತಿಯಿಂದ 'ಲಿಂಗಸಮಾನತೆ' ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಜಾಥಾಗೆ ಚಾಲನೆ ನೀಡಿದ್ದು, ಡಿ.31 ಕಾರ್ಯಾಗಾರವನ್ನು ಆಯೋಜಿಸಲಾಗಿದೆ ಎಂದರು.

ಇದರಿಂದ ಮಹಿಳೆಯರಿಗೆ ತಮ್ಮ ಹಕ್ಕುಗಳನ್ನು ಪಡೆಯಲು ಅನುಕೂಲವಾಗಲಿದೆ. ಹಾಗೆಯೇ ದೇವಸ್ಥಾನ, ರಸ್ತೆ ಬದಿ, ಬಸ್ ಮತ್ತು ರೈಲ್ವೆ ನಿಲ್ದಾಣಗಳಲ್ಲಿರುವವರನ್ನು ಎನ್‌ಜಿಓ ತಂಡಗಳ ಮೂಲಕ ಗುರ್ತಿಸಿ ಅವರಿಗೆ ಪುನರ್ವಸತಿ ಕಲ್ಪಿಸುವ ಕಾರ್ಯಕ್ಕೂ ಚಾಲನೆ ನೀಡಲಾಗಿದೆ. ರಾತ್ರಿ 11 ಗಂಟೆಯಿಂದ ಸಮೀಕ್ಷೆ ಆರಂಭವಾಗಿ ಬೆಳಗಿನ ಜಾವ 4 ಗಂಟೆಯವರೆಗೆ ನಡೆಯಲಿದೆ. ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಹಕಾರದೊಂದಿಗೆ ನಿರಾಶ್ರಿತರಿಗೆ ಆಶ್ರಯ ಕಲ್ಪಿಸಲಾಗುವುದು ಎಂದು ಹೇಳಿದರು. ಉಪ ಮೇಯರ್ ಡಾ.ರೂಪ, ಪಾಲಿಕೆ ಸದಸ್ಯ ಮಾ.ವಿ.ರಾಮ್ ಪ್ರಸಾದ್, ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ್ ರೆಡ್ಡಿ, ಹೆಚ್ಚುವರಿ ಆಯುಕ್ತೆ ರೂಪ, ಉಪ ಆಯುಕ್ತೆ(ಆಡಳಿತ) ಸವಿತಾ, ಲೆಕ್ಕಾಧಿಕಾರಿ ಕವಿತಾ, ಅಭಿಯಾನದ ವ್ಯವಸ್ಥಾಪಕ ಡಾ.ಜಿ.ಎಸ್.ಭೈರಲಿಂಗಯ್ಯ, ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

'ಲಿಂಗಸಮಾನತೆ' ಜಾಗೃತಿ ಜಾಥಾ...

'ಲಿಂಗಸಮಾನತೆ' ಕುರಿತು 'ಹೊಸ ಚೇತನ: ಬದಲಾವಣೆಯ ಪ್ರವರ್ತನ' ಶೀರ್ಷಿಕೆಯಡಿ ಜಾಥಾ ನಡೆಸಲಾಯಿತು. ಪಾಲಿಕೆ ಕೇಂದ್ರ ಕಚೇರಿಯಿಂದ ಆರಂಭವಾದ ಜಾಥಾ ಅರಮನೆ ಉತ್ತರ ದ್ವಾರದಲ್ಲಿರುವ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದವರೆಗೆ ಸಾಗಿತು.

'ಮಹಿಳೆಯರು ಸಮಾಜದ ನಿಜವಾದ ವಾಸ್ತುಶಿಲ್ಪಿಗಳು', 'ವೃತ್ತಿಗೆ ಯಾವುದೇ ಭೇದವಿಲ್ಲ', 'ಹೆಣ್ಣನ್ನು ಅಗೌರವಿಸುವ ಹೇಳಿಕೆಗಳನ್ನು ಗೌರವಿಸಬಾರದು' ಎಂಬಿತ್ಯಾದಿ ನಾಮಫಲಕಗಳನ್ನು ಹಾಗೂ ಕ್ಯಾಂಡಲ್ ಲೈಟ್ ಹಿಡಿದ ಸ್ವ–ಸಹಾಯ ಸಂಘದ ನೂರಾರು ಮಂದಿ ಮಹಿಳೆಯರು 'ಲಿಂಗಸಮಾನತೆ' ಕುರಿತು ಅರಿವು ಮೂಡಿಸಿದರು. ಹೆಣ್ಣು ಪುರುಷರಷ್ಟೇ ಸಮಾನಳು ಎಂಬುದನ್ನು ತಿಳಿಸಿಕೊಟ್ಟರು.



ವಿಶ್ವಮಾನವ ಮೈಸೂರು ವಿವಿ ನೌಕರರ ವೇದಿಕೆ ವತಿಯಿಂದ ಮೈಸೂರಿನ ಮಾನಸಗಂಗೋತ್ರಿ ಪ್ರವೇಶ ದ್ವಾರದಲ್ಲಿರುವ ಕುವೆಂಪು ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಕುವೆಂಪು ಜಯಂತಿ ಆಚರಿಸಲಾಯಿತು. ಚಿತ್ರದಲ್ಲಿ ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಕಾಂಗ್ರೆಸ್ ಮುಖಂಡ ಕೆ.ಹರೀಶ್ ಗೌಡ, ಎಸಿಪಿ ಗಂಗಾಧರ್, ಡಾ.ಶ್ರೀಕಂಠಸ್ವಾಮಿ, ಡಾ. ನಿಂಗರಾಜುಗೌಡ, ಡಾ.ಎಂ.ಬಿ.ಸುರೇಶ್, ಗಿರೀಶ್, ವೇದಿಕೆ ಅಧ್ಯಕ್ಷ ವಾಸುದೇವ್ ಇನ್ನಿತರರನ್ನು ಕಾಣಬಹುದು

ವಾಹನ ವಿತರಕ ಕಂಪನಿಯಿಂದ ನಷ್ಟ ; ಆರೋಪ

ಮೈಸೂರು,ಡಿ.29(ಪಿಎಂ)– ವಾಹನ ವಿತರಕ ಕಂಪನಿಯೊಂದು ಮಾತುಕತೆಯಂತೆ ನಿಗದಿತ ಸಮಯಕ್ಕೆ 2 ಟ್ರಕ್‌ಗಳನ್ನು ನೀಡದೇ ತಮಗೆ ವಂಚಿಸಿದ ಹಿನ್ನೆಲೆಯಲ್ಲಿ ತಮ್ಮ ವಹಿವಾಟಿನಲ್ಲಿ ನಷ್ಟ ಉಂಟಾಗಿದೆ ಎಂದು ಡಿಎಂಜಿ ಹಳ್ಳಿ ನಿವಾಸಿ ಪಿ.ಎನ್.ಶರತ್ ಹಾಗೂ ಮರಟಿಕ್ಯಾತನಹಳ್ಳಿ ಡಿ.ಶ್ರೀನಿವಾಸ್ ಆರೋಪಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಯಾಬಿನ್, ಚಾಸಿಸ್ ಮಾತ್ರವಲ್ಲದೆ, ಬಾಡಿ ಒಳಗೊಂಡಂತೆ 10 ದಿನಗಳ ಒಳಗೆ 6 ಚಕ್ರದ 2 ಟ್ರಕ್‌ಗಳನ್ನು ನೀಡಬೇಕೆಂದು ವ್ಯವಹಾರ ನಡೆಸಿದ್ದೆವು. ಆದರೆ ಮಾತಿಗೆ ತಪ್ಪಿ ಇಂಜಿನಿಯರ್ ವರ್ಕ್ಸ್‌ವೊಂದರಲ್ಲಿ ಬಾಡಿ ಮಾಡಿಸಿಕೊಳ್ಳಲು ತಿಳಿಸಿದರು. ಕೊನೆಗೆ ತಡವಾಗಿ ಗುತ್ತಿಗೆಯಡಿ ಕಾರ್ಖಾನೆಯೊಂದಕ್ಕೆ ಸದರಿ ವಾಹನಗಳನ್ನು ನೀಡಬೇಕಿದ್ದ ವ್ಯವಹಾರ ಕೈತಪ್ಪಿದೆ. ಹಾಗಾಗಿ ಪಾವತಿಸಿದ್ದ ಹಣವನ್ನು ವಾಪಸ್ಸು ನೀಡಬೇಕು. ಅಲ್ಲದೆ, ನಮಗೆ ಉಂಟಾಗಿರುವ ನಷ್ಟ ಭರಿಸಬೇಕೆಂದು ಒತ್ತಾಯಿಸಿ ಡಿ.30ರಂದು ಮಧ್ಯಾಹ್ನ 12ಕ್ಕೆ ನಗರದ ಲ್ಲಿರುವ ಸದರಿ ವಾಹನ ವಿತರಕ ಕಂಪನಿ ಎದುರು ಪ್ರತಿಭಟನೆ ನಡಸುವುದಾಗಿ ಹೇಳಿದರು. ಮುಖಂಡರಾದ ಸಂತೋಷ್, ದೀಪು ಗೋಷ್ಠಿಯಲ್ಲಿದ್ದರು.

ಕೋವಿಡ್ ಉಪತಳಿ ನಿಯಂತ್ರಣಕ್ಕೆ ಶೀಘ್ರ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಿ

ಅವೈಜ್ಞಾನಿಕ ಲಾಕ್‌ಡೌನ್ ವಿಧಿಸಬೇಡಿ ; ಉದ್ಯಮಿ ಡಾ.ಶ್ವೇತಾ ಮಡಪ್ಪಾಡಿ ಆಗ್ರಹ

ಮೈಸೂರು,ಡಿ.29(ಪಿಎಂ)– ಓಮಿಕ್ರಾನ್ ಬಿಎಫ್.7 ಕೋವಿಡ್ ಉಪತಳಿ ನಿಯಂತ್ರಣಕ್ಕೆ ಸರ್ಕಾರ ವಿಳಂಬ ಮಾಡದೇ ಕಟ್ಟುನಿಟ್ಟಿನ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಮತ್ತೊಮ್ಮೆ ಲಾಕ್‌ಡೌನ್ ಜಾರಿಗೊಳಿಸುವ ಹಂತದವರೆಗೆ ಪರಿಸ್ಥಿತಿ ಕೈಮೀರಲು ಅವಕಾಶ ನೀಡಬಾರದು ಎಂದು ಹೋಟೆಲ್ ಉದ್ಯಮಿ ಡಾ.ಶ್ವೇತಾ ಮಡಪ್ಪಾಡಿ ಆಗ್ರಹಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಕೋವಿಡ್ ಉಪತಳಿ ಆತಂಕ ಶುರುವಾಗಿದೆ. ವಿಮಾನ ನಿಲ್ದಾಣಗಳಲ್ಲಿ ಆರ್‌ಟಿಪಿಸಿಆರ್ ನೆಗೆಟಿವ್ ವರದಿ ಕಡ್ಡಾಯ ಎಂಬ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಶೀಘ್ರ ಕ್ರಮಗಳ ಮೂಲಕ ಸೋಂಕು ಹರಡದಂತೆ ತಡೆಗಟ್ಟಬೇಕು. ಇದರ ಹೊರತಾಗಿ ಲಾಕ್‌ಡೌನ್‌ನಂತಹ ಅವೈಜ್ಞಾನಿಕ ಕ್ರಮ ವಿಧಿಸಬಾರದು. ಈ ಹಿಂದಿನ ಲಾಕ್‌ಡೌನ್‌ನಿಂದ ಈಗಷ್ಟೇ ದುಡಿಯುವ ವರ್ಗ ಚೇತರಿಸಿಕೊಳ್ಳುತ್ತಿದೆ. ಮತ್ತೆ ಲಾಕ್‌ಡೌನ್ ವಿಧಿಸಿದರೆ ಜನಜೀವನಕ್ಕೆ ಮಾತ್ರವಲ್ಲದೆ, ದೇಶ ಆರ್ಥಿಕತೆ ಮೇಲೂ ದುಷ್ಪರಿಣಾಮ ಉಂಟಾಗಿದೆ ಎಂದು ಹೇಳಿದರು.

ಕವಿಗಳ ಸ್ವಾತಂತ್ರ್ಯಕ್ಕೆ ಅಂಕುಶ ಹಾಕುವುದು ಕಸಾಪ ಲಕ್ಷಣವಲ್ಲ

ಹಾವೇರಿ ಸಾಹಿತ್ಯ ಸಮ್ಮೇಳನದಲ್ಲಿ ಕೇವಲ ಕವಿತೆ ವಾಚನ ಮಾಡಬೇಕು; ಹಾಡುವಂತಿಲ್ಲ ಎಂಬ ಪರಿಷತ್ತಿನ ಹೇಳಿಕೆಗೆ ಸಾಹಿತಿ ಅರವಿಂದ ಮಾಲಗತ್ತಿ ಆಕ್ಷೇಪ

ಮೈಸೂರು, ಡಿ.29(ಆರ್‌ಕೆಬಿ)– ಕವಿಗಳಿಗೆ ಇರಬೇಕಾದ ಸ್ವಾತಂತ್ರ್ಯಕ್ಕೆ ಅಂಕುಶ ಹಾಕುವುದು ಸಾಹಿತ್ಯ ಪರಿಷತ್ತಿನ ಲಕ್ಷಣ ಅಲ್ಲ ಎಂದು ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಇಂದಿಲ್ಲಿ ಆಕ್ಷೇಪ ವ್ಯಕ್ತಪಡಿಸಿದರು.

ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿಎಂಶ್ರೀ ಸಭಾಂಗಣದಲ್ಲಿ ಕುವೆಂಪು ಜನ್ಮ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ 'ಕುವೆಂಪು ಸಾಹಿತ್ಯ ಬಹುಮುಖ ಚಿಂತನೆ' ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಹಾವೇರಿ ಸಾಹಿತ್ಯ ಸಮ್ಮೇಳನದಲ್ಲಿ ಕೇವಲ ಕವಿತೆ ವಾಚನ ಮಾಡಬೇಕು, ಹಾಡುವಂತಿಲ್ಲ ಎಂಬ ಸಾಹಿತ್ಯ ಪರಿಷತ್ತಿನ ಹೇಳಿಕೆ ಪ್ರಸ್ತಾಪಿಸಿದ ಅವರು, ಈ ಮೂಲಕ ಕವಿಗಳಿಗೆ ಇರಬೇಕಾದ ಸ್ವಾತಂತ್ರ್ಯಕ್ಕೆ ಅಂಕುಶ ಹಾಕಲಾಗುತ್ತಿದೆ. ಇದು ಸಾಹಿತ್ಯ ಪರಿಷತ್ತಿನ ಲಕ್ಷಣ ಅಲ್ಲ. ಕುವೆಂಪು ಅವರು ಎಂದಿಗೂ ಪ್ರಭುತ್ವದ ಪರ ನಿಂತವರಲ್ಲ. ತಮ್ಮ ಸಾಹಿತ್ಯದ ಮೂಲಕ ಯಾರ ಅಂಕುಶಕ್ಕೂ ಒಳಗಾಗದೇ ನಿರಂಕುಶಮತಿಗಳಾಗಿ ಎಂದು ಜನರನ್ನು ಜಾಗೃತಗೊಳಿಸಿದರು. ಕವಿಗಳಿಗಿರುವ ಹಾಡುವ ಮತ್ತು ಬರೆಯುವ ಸ್ವಾತಂತ್ರ್ಯವನ್ನು ಕಸಿಯಲು ಸಾಧ್ಯವಿಲ್ಲ ಎಂದರು.

ಕುವೆಂಪು ಅವರು ಯಾವುದೇ ಸಿದ್ಧಾಂತ ಪ್ರತಿಪಾದಿಸಿದರೂ ಅದರ ವಿಮರ್ಶೆ ಮಾಡಿದ್ದಾರೆ. ಅವರಲ್ಲಿ ಹರಿತವಾದ ಚಿಂತನೆ ಇದ್ದರಿಂದಲೇ ಅವರು ಸಾರ್ವಕಾಲಿಕ ಕವಿಯಾದರು. ಕುವೆಂಪು ವಸಾಹತುಶಾಹಿ ವ್ಯವಸ್ಥೆಯೊಂದಿಗೆ ಹೊಡೆದಾಡಿದ್ದಾರೆ. ಧಾರ್ಮಿಕ ವಿಚಾರಗಳೊಂದಿಗೆ ಗುದ್ದಾಡಿದ್ದಾರೆ. ಆದ್ದರಿಂದಲೇ ಅವರು ಸಾರ್ವಕಾಲಿಕ ವಿಚಾರಗಳನ್ನು ಕೊಡಲು ಸಾಧ್ಯವಾಗಿದೆ. ಅವರ ವಿಚಾರಗಳು ಕೇವಲ ತುಟಿ ಮಾತಾಗದೇ ನಮ್ಮ ಬದುಕಿನ ಅಡಿಪಾಯವಾಗಬೇಕು ಎಂದು ಹೇಳಿದರು.



ವಿಶ್ವವಿದ್ಯಾನಿಲಯ ಪ್ರಭಾರ ಕುಲಪತಿ ರಾಜಶೇಖರ್, ಸಾಹಿತಿ ಡಾ.ಪಿ.ಕೆ.ರಾಜೇಂದ್ರ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮುಖ್ಯಸ್ಥೆ ವಿಜಯಕುಮಾರಿ ಉಪಸ್ಥಿತರಿದ್ದರು.

ಶಸ್ತ್ರಚಿಕಿತ್ಸಕ ಡಾ.ಬೋಗಾದಿ ಪ್ರಶಾಂತ್ ಎಎಒಎಸ್‌ಗೆ ನೇಮಕ

ಮೈಸೂರು, ಡಿ.29– ಮೈಸೂರಿನ ಮಣಿಪಾಲ್ ಆಸ್ಪತ್ರೆಯ ಶಸ್ತ್ರಚಿಕಿತ್ಸಕ ಡಾ.ಬೋಗಾದಿ ಪ್ರಶಾಂತ್ ಅವರು ಅಮೇರಿಕನ್ ಅಕಾಡೆಮಿ ಆಫ್ ಆರ್ಥೋಪೆಡಿಕ್ ಸರ್ಜನ್ಸ್(ಎಎಒಎಸ್)ಗೆ ನೇಮಕಗೊಂಡಿದ್ದಾರೆ. ಮಣಿಪಾಲ್ ಆಸ್ಪತ್ರೆಯೊಂದಿಗೆ 2023 ರಿಂದ 2026ರವರೆಗಿನ ಮೂರು ವರ್ಷಗಳ ವಯಸ್ಕರ ಮೊಣಕಾಲು ಬದಲಿ ಕಾರ್ಯಕ್ರಮ ಸಮಿತಿಯಲ್ಲಿರುವ ಅಮೇರಿಕಾ ಶಸ್ತ್ರಚಿಕಿತ್ಸಕರೊಂದಿಗೆ ಡಾ.ಬೋಗಾದಿ ಪ್ರಶಾಂತ್ ಕಾರ್ಯನಿರ್ವಹಿಸಲಿದ್ದಾರೆ ಎಂದು ಎಎಒಎಸ್ ಉಪಾಧ್ಯಕ್ಷ ಡಾ ಕೆವಿನ್ ಬೋಜಿಕ್ ಹೇಳಿದ್ದಾರೆ.



ಸಮಿತಿಯು ಇತ್ತೀಚಿನ ರೊಬೊಟಿಕ್ ಶಸ್ತ್ರಚಿಕಿತ್ಸೆಯೊಂದಿಗೆ ಮೊಣಕಾಲು ಬದಲು, ಅರ್ಧ ಮೊಣಕಾಲು ಬದಲು ಹಾಗೂ ಪರಿಷ್ಕರಣೆ ಶಸ್ತ್ರಚಿಕಿತ್ಸೆಯನ್ನು ನೀಡಲಿದೆ. ಡಾ.ಪ್ರಶಾಂತ್, ಅಮೇರಿಕಾ ಶಸ್ತ್ರಚಿಕಿತ್ಸಕರಾದ ಡಾ.ಸುಮನ್ ನಂದಿ, ಡಾ.ಆಂಡ್ರ್ಯೂಸ್ಟಾರ್, ಡಾ.ಸೌರಭ್ ಕಕಾರಿಯಾ ಇನ್ನಿತರರೊಂದಿಗೆ ಸೇವೆ ಸಲ್ಲಿಸಲಿದ್ದಾರೆ.

ರಾಷ್ಟ್ರೀಯ ಗಣಿತ ದಿನ ಆಚರಣೆ

ಮೈಸೂರು, ಡಿ.29(ಎಸ್‌ಬಿಡಿ)– ಸಾರ್ವಜನಿಕ ಶಿಕ್ಷಣ ಇಲಾಖೆ, ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ವತಿಯಿಂದ ಮೈಸೂರಿನಲ್ಲಿ 'ರಾಷ್ಟ್ರೀಯ ಗಣಿತ ದಿನ' ಆಚರಿಸಲಾಯಿತು.



ಇಲ್ಲಿನ ನಾರಾಯಣ ಶಾಸ್ತ್ರಿ ರಸ್ತೆಯ ಮಹಾರಾಣಿ ಮಹಿಳಾ ಪ್ರಶಿಕ್ಷಣಾ ಸಂಸ್ಥೆ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯ್ತಿ ಮುಖ್ಯ ಯೋಜನಾಧಿಕಾರಿ ಎಸ್.ಧನುಷ್ ಉದ್ಘಾಟಿಸಿ, ಗಣಿತದ ಅಧ್ಯಯನದ ಮಹತ್ವವನ್ನು ತಿಳಿಸಿಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್ ಮಾತನಾಡಿ, ಗಣಿತವನ್ನು ಕಬ್ಬಿಣದ ಕಡಲೆ ಎಂಬುದು ಬಹುತೇಕರ ಭಾವನೆಯಾಗಿದೆ. ಆದರೆ ನಿಯಮಬದ್ಧವಾಗಿ ಕಲಿತರೆ ಗಣಿತ ಜೀವನದ ದಿಕ್ಕನ್ನೇ ಬದಲಿಸುತ್ತದೆ ಎಂದು ಗಣಿತವನ್ನು ಅರ್ಥೈಸಿಕೊಳ್ಳುವ ಬಗ್ಗೆ ಸಲಹೆ ನೀಡಿದರು.

ಶಿಕ್ಷಣ ಇಲಾಖೆಯ ವಿಷಯ ಪರಿವೀಕ್ಷಕ ಎಸ್.ಕೆ.ಕೆಂಪರಾಜು ಮಾತನಾಡಿ, ಜೀವನದಲ್ಲಿ ಗಣಿತ ಅತ್ಯಂತ ಉಪಯುಕ್ತ. ಚೆನ್ನಾಗಿ ಕಲಿತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲವಾಗುತ್ತದೆ. ಹಾಗಾಗಿ ಗಣಿತ ಕಷ್ಟ ಎಂದು ನಿರ್ಲಕ್ಷ್ಯ ವಹಿಸದೆ ಆರಂಭದಿಂದಲೇ ಆಸಕ್ತಿಯಿಂದ ಕಲಿಯಬೇಕೆಂದು ಹೇಳಿದರು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಮೈಸೂರು ಘಟಕದ ಸಂಚಾಲಕ ಆರ್.ಅನಂತರಾಮು ಅವರು, ಭಾರತದ ಶ್ರೇಷ್ಠ ಗಣಿತಜ್ಞ ಶ್ರೀನಿವಾಸ ರಾಮಾನುಜನ್‌ರವರ ಜೀವನ ಮತ್ತು ಸಾಧನೆ ಕುರಿತು ಉಪನ್ಯಾಸ ನೀಡಿದರು. ಇದೇ ವೇಳೆ ಗಣಿತ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ರಸಪ್ರಶ್ನೆ, ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಜಿಪಂನ ಎನ್‌ಆರ್ ಡಿಎಂಎಸ್ ಅಧಿಕಾರಿ ಎಂ.ವಿನೋದ್ ಬಹುಮಾನ ವಿತರಿಸಿದರು. ಇಲಾಖೆ ವಿಷಯ ಪರಿವೀಕ್ಷಕಿ ಪುಷ್ಪಾ ಮತ್ತಿತರರು ಉಪಸ್ಥಿತರಿದ್ದರು.



ಮೂರನೇ ಪುಟದಿಂದ

ಸಕ್ಕರೆ ನಾಡು ಸಂಪೂರ್ಣ ಕೇಸರಿಮಯ

ಬೆಳಗ್ಗೆ 9 ಗಂಟೆಗೆ ಬೆಂಗಳೂರಿನ ತಾಜ್ ವೆಸ್ಟೆಂಡ್ ಹೋಟೆಲ್‌ನಿಂದ ಹೊರಡಲಿರುವ ಅಮಿತ್ ಶಾ, ಯಲಹಂಕ ವಾಯುನೆಲೆಯಿಂದ ವಿಶೇಷ ಹೆಲಿಕಾಪ್ಟರ್ ನಲ್ಲಿ ಮದ್ದೂರು ತಾಲೂಕಿನ ಬೋರಾಪುರ ಬಳಿಯ ಹೆಲಿಪ್ಯಾಡ್‌ಗೆ ಆಗಮಿಸಲಿದ್ದಾರೆ. ಅಲ್ಲಿಂದ ನೇರವಾಗಿ ಗೆಜ್ಜಲಗೆರೆ ಮನ್‌ಮುಲ್‌ಗೆ ತೆರಳಿ ಬೆಳಗ್ಗೆ 10.30ಕ್ಕೆ ಮೆಗಾಡೈರಿ ಉದ್ಘಾಟಿಸಿದ ನಂತರ ಹಾಲು ಉತ್ಪಾದಕರನ್ನುದ್ದೇಶಿಸಿ ಮಾತನಾಡಲಿದ್ದಾರೆ.

ಕಾರ್ಯಕ್ರಮ ಮುಗಿದ ಬಳಿಕ ಮತ್ತೆ ಬೋರಾಪುರ ಹೆಲಿಪ್ಯಾಡ್‌ಗೆ ತೆರಳಿ ಮಂಡ್ಯ ನಗರದ ಪಿಇಎಸ್ ಕಾಲೇಜಿನ ಆವರಣದಲ್ಲಿರುವ ಕೆಎಸ್‌ಸಿಎ ಕ್ರಿಕೆಟ್ ಮೈದಾನಕ್ಕೆ ಹೆಲಿಕಾಪ್ಟರ್‌ನಲ್ಲಿ ಆಗಮಿಸಿ, ಅಲ್ಲಿಂದ ಬಾಯ್ಸ್ ಕಾಲೇಜು ಆವರಣಕ್ಕೆ ಬಂದು ಮಧ್ಯಾಹ್ನ 12.30ಕ್ಕೆ ಬಿಜೆಪಿ ಜನಸಂಕಲ್ಪ ಸಮಾವೇಶದಲ್ಲಿ ಭಾಗವಹಿಸಿದ ನಂತರ ಮಧ್ಯಾಹ್ನ ಊಟ ಮುಗಿಸಿ, ಪಿಇಟಿ ಹೆಲಿಪ್ಯಾಡ್‌ನಿಂದ ಬೆಂಗಳೂರಿಗೆ ತೆರಳಲಿದ್ದಾರೆ.

ಬಾಯ್ಸ್ ಕಾಲೇಜಿನ ಆವರಣದಲ್ಲಿ ಸಮಾವೇಶಕ್ಕಾಗಿ 280 ಅಡಿ ಅಗಲ ಹಾಗೂ 780 ಅಡಿ ಉದ್ದದ ಬೃಹತ್ ಶಾಮಿಯಾನ ಹಾಕಿದ್ದು, ಈ ಪೈಕಿ 28*78 ನಷ್ಟು ಬೃಹತ್ ವೇದಿಕೆ ನಿರ್ಮಾಣ ಮಾಡಲಾಗಿದೆ. 40 ಮಂದಿ ಪ್ರಮುಖರಿಗೆ ವೇದಿಕೆಯಲ್ಲಿ ಆಸನ ವ್ಯವಸ್ಥೆ ಮಾಡಲಾಗಿದ್ದು, ಕಾರ್ಯಕರ್ತರಿಗೆ 50 ಸಾವಿರ ಆಸನದ ವ್ಯವಸ್ಥೆ ಮಾಡಲಾಗಿದೆ. ಅಲ್ಲದೇ ಎಲ್‌ಇಡಿ ಪರದೆ ಮೂಲಕ 50 ಸಾವಿರ ಜನ ಕಾರ್ಯಕ್ರಮ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ. ಜೊತೆಗೆ 1 ಲಕ್ಷ ಮಂದಿಗೆ ಊಟದ ವ್ಯವಸ್ಥೆ ಮಾಡಲಾಗಿದೆ ಎಂದು ರಾಜ್ಯ ಬಿಜೆಪಿ ವಕ್ತಾರ ಮಹೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಅಮಿತ್ ಷಾ ಜೊತೆಗೆ ಸಿಎಂ ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಪಕ್ಷದ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲು, ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಸೇರಿದಂತೆ ಸಚಿವರು, ಶಾಸಕರು, ಸಂಸದರು ಹಾಗೂ ಪಕ್ಷದ ಪ್ರಮುಖ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದ ಹಿನ್ನೆಲೆಯಲ್ಲಿ ಮಂಡ್ಯ ನಗರದಾದ್ಯಂತ ಖಾಕಿ ಕೋಟೆ ನಿರ್ಮಿಸಿದ್ದು, ಬಾಯ್ಸ್ ಕಾಲೇಜು, ಪಿಇಎಸ್ ಕಾಲೇಜು ಹಾಗೂ ಮನ್‌ಮುಲ್ ಡೈರಿ ಈಗಾಗಲೇ ಪೊಲೀಸ್ ಭದ್ರತೆಯಲ್ಲಿದೆ. ಪೊಲೀಸ್ ಭದ್ರತೆಯ ಸಂಪೂರ್ಣ ಹೊಣೆಯನ್ನು ದಕ್ಷಿಣ ವಲಯ ಐಜಿಪಿ ಪ್ರವೀಣ್ ಮಧುಕರ್ ಪವಾರ್ ವಹಿಸಿದ್ದು, ಇವರ ಮಾರ್ಗದರ್ಶನದಲ್ಲಿ ಎಸ್ಪಿ ಯತೀಶ್, ಎಎಸ್ಪಿ ವೇಣುಗೋಪಾಲ್ ನೇತೃತ್ವದಲ್ಲಿ ಮಂಡ್ಯ ಜಿಲ್ಲೆಯ ಪೊಲೀಸರ ಜೊತೆಗೆ ಮೈಸೂರು, ಹಾಸನ, ರಾಮನಗರ, ತುಮಕೂರಿನ ಜಿಲ್ಲೆಗಳ ಪೊಲೀಸರನ್ನು ನಿಯೋಜಿಸಲಾಗಿದೆ. ಶಾ ಆಗಮನದ ಹಿನ್ನಲೆಯಲ್ಲಿ ಬೆಂಗಳೂರು- ಮೈಸೂರು ಹಳೇ ಹೆದ್ದಾರಿ, ಪಿಇಎಸ್ ಕಾಲೇಜು ರಸ್ತೆಗೆ ಸಂಪೂರ್ಣ ಡಾಂಬರೀಕರಣ ಮಾಡಲಾಗಿದ್ದು, ಮನ್‌ಮುಲ್ ಡೈರಿಗೆ ಬಣ್ಣ ಬಳಿಯಲಾಗಿದೆ. ಸ್ವಚ್ಛತಾ ಕಾರ್ಯ ಭರದಿಂದ ಸಾಗಿದೆ.

ಮಂಡ್ಯ ವಿವಿ ವಿದ್ಯಾರ್ಥಿಗಳಿಗೆ 2 ದಿನ ರಜೆ: ಅಮಿತ್ ಶಾ ಕಾರ್ಯಕ್ರಮದ ಹಿನ್ನಲೆಯಲ್ಲಿ ಗುರುವಾರ ಹಾಗೂ ಶುಕ್ರವಾರ ಮಂಡ್ಯ ವಿಶ್ವವಿದ್ಯಾನಿಲಯಕ್ಕೆ (ಬಾಯ್ಸ್ ಕಾಲೇಜು) ರಜೆ ಘೋಷಿಸಲಾಗಿದೆ. ಭದ್ರತೆ ಹಾಗೂ ವಿದ್ಯಾರ್ಥಿಗಳು ಓಡಾಡಲು ಸಾಧ್ಯವಾಗದ ಕಾರಣ ರಜೆ ಘೋಷಿಸಲಾಗಿದೆ ಎಂದು ಜಿಲ್ಲಾಧಿಕಾರಿ ಗೋಪಾಲಕೃಷ್ಣ ತಿಳಿಸಿದ್ದಾರೆ. ಕಾಲೇಜು ಆವರಣ ಹೊರತುಪಡಿಸಿ, ಕಾಲೇಜಿನ ಒಳಾಂಗಣ ಗುರುವಾರ ಬೆಳಗ್ಗೆಯೇ ಸಂಪೂರ್ಣ ಬಂದ್ ಆಗಿದೆ.

ಬೆಂಗಳೂರು-ಮೈಸೂರು ಸಂಚಾರಕ್ಕೆ ಬದಲಿ ಮಾರ್ಗ: ಅಮಿತ್ ಶಾ ಭೇಟಿ ಹಿನ್ನಲೆಯಲ್ಲಿ ಮಂಡ್ಯ ನಗರದಲ್ಲಿ ಟ್ರಾಫಿಕ್ ಜಾಮ್ ತಡೆಗಟ್ಟುವ ಸಲುವಾಗಿ ಬೆಂಗಳೂರು- ಮೈಸೂರು ಸಂಚಾರಕ್ಕೆ ಹೊರವಲಯದ ದಶಪಥ ರಸ್ತೆ ಮುಕ್ತಗೊಳಿಸಲಾಗಿದ್ದು, ಅಲ್ಲಿ ಸಂಚರಿಸಬೇಕಾಗಿದೆ. ಬೆಂಗಳೂರು ಕಡೆಗೆ ತೆರಳುವವರಿಗೆ ವಿ.ಸಿ.ಫಾರಂ ಗೇಟ್ ಬಳಿ ಹೊಸ ರಸ್ತೆಗೆ ಸಂಪರ್ಕ ಕಲ್ಪಿಸಿದ್ದರೆ, ಅತ್ತ ಮೈಸೂರಿನ ಕಡೆಗೆ ತೆರಳುವವರಿಗೆ ಉಮ್ಮಡಹಳ್ಳಿ ಗೇಟ್ ಬಳಿ ಹೊಸ ರಸ್ತೆಯನ್ನು ತೆರೆಯಲಾಗಿದೆ. ಅಗತ್ಯ ಬಿದ್ದವರು ಮತ್ತು ಮಂಡ್ಯ ನಗರ ನಿವಾಸಿಗಳಿಗಷ್ಟೇ ಹಳೇ ರಸ್ತೆಯಲ್ಲಿ ಸಂಚರಿಸಲು ಅವಕಾಶವಿದ್ದು, ಒಂದು ವೇಳೆ ಹಳೇ ಬೆಂಗಳೂರು- ಮೈಸೂರು ರಸ್ತೆಯ ಮೂಲಕ ಮಂಡ್ಯ ನಗರ ಪ್ರವೇಶಿಸಿದರೆ ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಬೇಕಾಗುತ್ತದೆ. ಆದ್ದರಿಂದ ಪೊಲೀಸರು ಬೆಂಗಳೂರು- ಮೈಸೂರು ಹೊಸ ರಸ್ತೆಯ ಮೂಲಕ ಸಂಚರಿಸಲು ಅನುವು ಮಾಡಿಕೊಟ್ಟಿದ್ದು, ಅಮಿತ್ ಶಾ ಬಂದು, ಹೋಗುವವರೆಗೂ ಇಲ್ಲಿಯೇ ಸಂಚರಿಸಬೇಕಿದೆ.

ಕಣಕ್ಕಿಳಿಸಲು ಸಿದ್ದರಾಮಯ್ಯ ತಂತ್ರಗಾರಿಕೆ

ಜೆಡಿಎಸ್ ತೊರೆದು, ಕಾಂಗ್ರೆಸ್ ಸೇರಲು ಮುಂದಾಗಿ ಕೊನೆ ಹಂತದಲ್ಲಿ ಹಿಂದೆ ಸರಿದ ಜಿ.ಟಿ.ದೇವೇಗೌಡರನ್ನು ಚುನಾವಣೆಯಲ್ಲಿ ಪರಾಭವಗೊಳಿಸಿ, ತಮ್ಮ ಸೇಡನ್ನು ತೀರಿಸಿಕೊಳ್ಳಲು ಸಿದ್ದರಾಮಯ್ಯ ಮುಂದಾಗಿದ್ದಾರೆ. ಚುನಾವಣೆಯಲ್ಲಿ ಗೌಡರನ್ನು ಸೋಲಿಸಲು ಈ ಮೊದಲು ನಾಯಕ ಸಮುದಾಯಕ್ಕೆ ಸೇರಿದ ಚಿತ್ರನಟ ಶಶಿಕುಮಾರ್ ಅವರ ಜೊತೆ ಸಿದ್ದರಾಮಯ್ಯ ಮಾತುಕತೆ ನಡೆಸಿದ್ದರು. ಆದರೆ ಅವರು ಬಿಜೆಪಿ ಸೇರ್ಪಡೆಗೊಂಡರು. ಇದಾದ ನಂತರ ಅಭಿಷೇಕ್ ಅವರನ್ನು ಕಣಕ್ಕಿಳಿಸಿದರೆ ಒಕ್ಕಲಿಗ ಮತಗಳನ್ನು ವಿಭಜಿಸಿ, ಹಿಂದುಳಿದ ವರ್ಗದ ಮತಗಳ ಸಹಕಾರದಿಂದ ಜಿ.ಟಿ.ದೇವೇಗೌಡರನ್ನು ಮಣಿಸಬಹುದೆಂಬುದು ಸಿದ್ದು ಲೆಕ್ಕಾಚಾರವಾಗಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಸುಮಲತಾ ಅವರು ಮಂಡ್ಯ ಕ್ಷೇತ್ರದಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ್ದು,ಅವರ ಗೆಲುವಿನಲ್ಲಿ ಕಾಂಗ್ರೆಸ್ ಪಕ್ಷದ ಪಾತ್ರ ಗಣನೀಯವಾಗಿರುವುದು ರಹಸ್ಯವಲ್ಲ. ಸುಮಲತಾ ಅವರು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಜೆಡಿಎಸ್ ಪಕ್ಷದ ನಿಖಿಲ್ ಕುಮಾರಸ್ವಾಮಿ ಅವರನ್ನು ಪರಾಭವಗೊಳಿಸಲು ಕಾಂಗ್ರೆಸ್ ಮತ್ತು ಬಿಜೆಪಿ ತೆರೆಯ ಹಿಂದೆ ಸಹಕಾರ ನೀಡಿದ್ದವಾದರೂ ಇದರಲ್ಲಿ ಕಾಂಗ್ರೆಸ್ ಪಾಲು ದೊಡ್ಡದು. ಈ ಹಿನ್ನೆಲೆಯಲ್ಲಿಯೇ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಣಕ್ಕೆ ಅಭಿಷೇಕ್‌ಗೌಡರನ್ನು ಕಣಕ್ಕಿಳಿಸಿದರೆ ಹಲವು ದೃಷ್ಟಿಗಳಿಂದ ಅನುಕೂಲವಾಗುತ್ತದೆ ಎಂಬುದು ಕಾಂಗ್ರೆಸ್ ಲೆಕ್ಕಾಚಾರ.

ಹೊಸ ಪ್ರವರ್ಗ ಸೃಷ್ಟಿ: ಸಂಪುಟ ನಿರ್ಧಾರ

ಮೀಸಲಾತಿ ಪಡೆಯುತ್ತಿತ್ತು. ಆದರೆ ಈಗ ಹೊಸದಾಗಿ ಸೃಷ್ಟಿಯಾಗಿರುವ ಪ್ರವರ್ಗಗಳಲ್ಲಿ ಈ ಸಮುದಾಯಗಳಿಗೆ ಶೇಕಡಾ ಎಷ್ಟು ಮೀಸಲಾತಿ ದೊರೆಯುತ್ತದೆ ಎಂಬುದರ ಬಗ್ಗೆ ಇನ್ನೂ ನಿರ್ಧಾರವಾಗಿಲ್ಲ. ಸಂಪುಟ ಸಭೆಯ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಮಾಧುಸ್ವಾಮಿ ಅವರು, ಹಿಂದುಳಿದ ವರ್ಗಗಳ ಆಯೋಗ ಸರ್ಕಾರಕ್ಕೆ ನೀಡಿದೆ. 2-ಎ ಪ್ರವರ್ಗದವರ ಮೀಸಲಾತಿಗೆ ಧಕ್ಕೆ ಬರಬಾರದು ಎಂದು ವರದಿಯಲ್ಲಿ ಹೇಳಲಾಗಿದೆ. ಈ ವರದಿಯನ್ನಾಧರಿಸಿ ಹೊಸದಾಗಿ 2-ಸಿ ಮತ್ತು 2-ಡಿ ಪ್ರವರ್ಗಗಳನ್ನು ರಚನೆ ಮಾಡಿದ್ದೇವೆ. ಆದರೆ ಈ ಪ್ರವರ್ಗಗಳಿಗೆ ಉದ್ಯೋಗ ಮತ್ತು ಶಿಕ್ಷಣಕ್ಕೆ ಮಾತ್ರ ಮೀಸಲಾತಿ ನೀಡಲು ನಿರ್ಧರಿಸಲಾಗಿದೆ ಎಂದರು.

ಹೊಸದಾಗಿ ಯಾವುದೇ ಸಮುದಾಯದವರಿಗೂ 2-ಎ ಪ್ರವರ್ಗವನ್ನು ಕೊಡುತ್ತಿಲ್ಲ. 2-ಎ ಪ್ರವರ್ಗದಲ್ಲಿರುವ ಸಮುದಾಯಗಳ ಮೀಸಲಾತಿಯನ್ನು ಟಚ್ ಮಾಡಬಾರದು ಎಂದು ತೀರ್ಮಾನಿಸಿದ್ದೇವೆ. ಹಾಲಿ 3-ಬಿ ಪ್ರವರ್ಗದಲ್ಲಿರುವ ಲಿಂಗಾಯತರಿಗೆ 2-ಡಿ ಪ್ರವರ್ಗ ಹಾಗೂ 3-ಬಿ ಪ್ರವರ್ಗದಲ್ಲಿರುವ ಒಕ್ಕಲಿಗರಿಗೆ 2-ಸಿ ಪ್ರವರ್ಗ ರಚಿಸಲು ಸಂಪುಟದಲ್ಲಿ ನಿರ್ಣಯ ಕೈಗೊಳ್ಳಲಾಗಿದೆ ಎಂದರು.

ಆದರೆ ಹೊಸದಾಗಿ ರಚಿಸಲ್ಪಡುವ ಪ್ರವರ್ಗಗಳಿಗೆ ಮೀಸಲಾತಿ ಪ್ರಮಾಣವನ್ನು ನಾವು ನಿರ್ಣಯ ಮಾಡಿಲ್ಲ. ಹಿಂದುಳಿದ ವರ್ಗಗಳ ಆಯೋಗ ಸಂಪೂರ್ಣ ವರದಿಯನ್ನು ಸಲ್ಲಿಸಿದ ನಂತರ ಲಭ್ಯವಾಗುವ ಅಂಕಿ-ಅಂಶಗಳನ್ನಾಧರಿಸಿ ಮೀಸಲಾತಿಯನ್ನು ನಿರ್ಧರಿಸುತ್ತೇವೆ ಎಂದರು. ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ (EWS) ನೀಡಿರುವ ಶೇ.10ರಷ್ಟು ಮೀಸಲಾತಿಯಲ್ಲಿ ಎಷ್ಟು ಉಳಿಯುತ್ತದೋ ಅದನ್ನು 2-ಡಿ ಮತ್ತು 2-ಸಿಗೆ ವರ್ಗಾಯಿಸಿಕೊಳ್ಳುತ್ತೇವೆ ಎಂದು ಸಚಿವರು ಇದೇ ವೇಳೆ ಹೇಳಿದರು.

ಸದ್ಯಕ್ಕೆ ಸ್ವಾಗತಿಸುವ, ವಿರೋಧಿಸುವ ಗೋಜು ಬೇಡ: ಜಯ ಮೃತ್ಯುಂಜಯ ಸ್ವಾಮಿ ಸಲಹೆ

ಲಿಂಗಾಯತ ಸಮುದಾಯಕ್ಕೆ ಹೊಸದಾಗಿ 2-ಡಿ ಪ್ರವರ್ಗ ರಚಿಸಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಸ್ವಾಗತಿಸುವ ಅಥವಾ ವಿರೋಧಿಸುವ ಕೆಲಸ ಮಾಡಬೇಡಿ ಎಂದು ಪಂಚಮಸಾಲಿ ಸಮುದಾಯಕ್ಕೆ 2-ಎ ಮೀಸಲಾತಿಗಾಗಿ ಹೋರಾಟ ನಡೆಸುತ್ತಿರುವ ಜಯ ಮೃತ್ಯುಂಜಯ ಸ್ವಾಮೀಜಿ ತಮ್ಮ ಸಮುದಾಯದವರಿಗೆ ತಿಳಿಸಿದ್ದಾರೆ. ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, 2-ಎ ಮೀಸಲಾತಿ ಬೇಕು ಎಂಬುದು ನಮ್ಮ ಹೋರಾಟವಾಗಿದೆ. ಸರ್ಕಾರ ಕೂಡ ಮೀಸಲಾತಿ ನೀಡುವ ಬಗ್ಗೆ ಭರವಸೆ ನೀಡಿತ್ತು. ಆದರೆ ಇದೀಗ 2-ಎ ಮೀಸಲಾತಿ ಬದಲು ಬೇರೆ ವರ್ಗದ ಅಡಿಯಲ್ಲಿ ಮೀಸಲಾತಿ ನೀಡಲಾಗಿದೆ ಎನ್ನುವ ಮಾಹಿತಿಯನ್ನು ಮಾಧ್ಯಮಗಳಿಂದ ಪಡೆದಿದ್ದೇನೆ. ಕೊನೆಗೆ ಪ್ರತ್ಯೇಕ ಮೀಸಲಾತಿ ನೀಡುತ್ತಾರೆ ಎಂಬ ವಿಶ್ವಾಸವಿತ್ತು ಎಂದ ಅವರು, ಸಂಪುಟ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯಗಳ ಸಂಪೂರ್ಣ ಮಾಹಿತಿ ಪಡೆದ ನಂತರ ಅದರ ಬಗ್ಗೆ ಸಮುದಾಯದವರಿಗೆ ವಿವರಿಸುತ್ತೇನೆ.

ಹೀಗಾಗಿ ಈಗಲೇ ಯಾವುದೇ ವಿಜಯೋತ್ಸವ ಆಚರಿಸುವುದು ಸರಿಯಾದ ನಿರ್ಧಾರವಲ್ಲ. ಸದ್ಯ ಸರ್ಕಾರದ ನಿರ್ಧಾರವನ್ನು ಸ್ವಾಗತಿಸುವ ಅಥವಾ ವಿರೋಧಿಸುವ ಕೆಲಸ ಮಾಡಬೇಡಿ ಎಂದು ತಮ್ಮ ಸಮುದಾಯದವರಿಗೆ ತಿಳಿಸುವುದಾಗಿ ಅವರು ಹೇಳಿದರು. ಸರ್ಕಾರದ ಈ ನಿರ್ಧಾರ ಕುರಿತು ತಾವು ಈರಣ್ಣ ಕಡಾಡಿ ಮತ್ತು ಬಸನಗೌಡ ಪಾಟೀಲ್ ಯತ್ನಾಳ್ ಅವರೊಂದಿಗೆ ಮಾತನಾಡಿದ್ದೇನೆ. ಅವರೊಂದಿಗೆ ಮತ್ತೊಮ್ಮೆ ಚರ್ಚಿಸಿ ನಿರ್ಧಾರ ತಿಳಿಸುತ್ತೇನೆ ಹಾಗೂ ಸಚಿವರು ಮತ್ತು ತಜ್ಞರಿಂದ ಮಾಹಿತಿ ಪಡೆದು ಬಳಿಕ ಬೆಳಗಾವಿಯ ಗಾಂಧಿ ಭವನದಲ್ಲಿ ಸುದ್ದಿಗೋಷ್ಠಿ ನಡೆಸುತ್ತೇನೆ ಎಂದು ಸ್ವಾಮೀಜಿ ತಿಳಿಸಿದ್ದಾರೆ.

ಮೈಸೂರು ವಿವಿ ಪ್ರಸಾರಾಂಗದಲ್ಲಿ ಕುವೆಂಪು ಜನ್ಮ ದಿನಾಚರಣೆಗೆ ಚಾಲನೆ

ಕುವೆಂಪು ಸಂದೇಶಗಳು ಅನುಷ್ಠಾನಗೊಳ್ಳಲಿ: ಸಾಹಿತಿ ಸಿಪಿಕೆ ಆಶಯ

ಮೈಸೂರು, ಡಿ.29 (ಆರ್‌ಕೆಬಿ)- ವಿಶ್ವ ಮಾನವತೆಯನ್ನು ಸಾರಿದ ಯುಗದ ಕವಿ, ಜಗದ ಕವಿ, ರಾಷ್ಟ್ರಕವಿ ಕುವೆಂಪು ಅವರ ಸಂದೇಶಗಳು ಅನುಷ್ಠಾನಗೊಳ್ಳಬೇಕು ಎಂದು ಹಿರಿಯ ಸಾಹಿತಿ ಪ್ರೊ.ಸಿ.ಪಿ.ಕೃಷ್ಣಕುಮಾರ್ ಆಶಯ ವ್ಯಕ್ತಪಡಿಸಿದರು.

ಮೈಸೂರು ವಿಶ್ವ ವಿದ್ಯಾನಿಲಯದ ಮಾನಸಗಂಗೋತ್ರಿ ಆವರಣದಲ್ಲಿರುವ ಪ್ರಸಾರಾಂಗ ಸಭಾಂಗಣದಲ್ಲಿ ಪ್ರಸಾರಾಂಗ ಆಯೋಜಿಸಿದ್ದ ರಾಷ್ಟ್ರಕವಿ ಕುವೆಂಪು ಜನ್ಮ ದಿನಾಚರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಕನ್ನಡದ ಬಗ್ಗೆ ಕುವೆಂಪು ಅವರಷ್ಟು ಬರೆದವರು ಯಾರೂ ಇಲ್ಲ. ಗದ್ಯ-ಪದ್ಯ ಎರಡರಲ್ಲೂ ಕನ್ನಡವನ್ನು ಉತ್ತುಂಗಕ್ಕೇರಿಸಿದ ಮಹಾನ್ ಕನ್ನಡ ಪ್ರೇಮಿ. ಬರವಣಿಗೆ ಮೂಲಕವೇ ಕನ್ನಡದ ಹೋರಾಟ ಮಾಡಿದ ಕನ್ನಡ ಒಡೆಯರು ಎಂದು ಕರೆದರೆ ತಪ್ಪಾಗಲಾರದು ಎಂದರು.

ಕರ್ನಾಟಕ ರಾಜ್ಯೋದಯವಾಗಿ 67 ವರ್ಷಗಳಾದರೂ ಇನ್ನೂ ಸರ್ವೋದಯ ಕಾಣಲಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದ ಅವರು, ಜ್ಞಾನಕ್ಕಿಂತ ಪವಿತ್ರವಾದದ್ದು ಯಾವುದೂ ಇಲ್ಲ. ಅಂತಹ ಜ್ಞಾನಕೇಂದ್ರವಾದ ಪ್ರಸಾರಾಂಗ ಕುವೆಂಪು ಅವರ ಕನಸಿನ ಕೂಸು. ಅವರನ್ನು ಯಾವ ವಿಶೇಷಣಗಳಿಂದ ಕರೆದರೂ ಸಾಲದು ಎಂದು ಹೇಳಿದರು.



ವಿಶ್ವಮಾನವತೆ ತಕ್ಷಣ ಸಾಧ್ಯವಾಗದಿದ್ದರೂ 500 ವರ್ಷಗಳಾದರೂ ಸರಿ ಅದು ಅನುಷ್ಠಾನಗೊಳ್ಳಬೇಕು ಎಂಬುದು ಕುವೆಂಪು ಅವರ ಆಶಯವಾಗಿತ್ತು. ಕುವೆಂಪು ವ್ಯಕ್ತಿತ್ವದಲ್ಲಿ ಅಧ್ಯಾಪನ, ವೈಚಾರಿಕತೆ, ಕನ್ನಡ ನಾಡು ನುಡಿ ಸಾಹಿತ್ಯ ಸೇವೆ, ವಿಶ್ವಮಾನವ ಸಂದೇಶ ಎಂಬ ನಾಲ್ಕು ಅಂಗಗಳಿವೆ. ಕುವೆಂಪು ಅವರನ್ನು ನೀವು ಬ್ರಾಹ್ಮಣ ವಿರೋಧಿಯಂತೆ ಎನ್ನುತ್ತಾರಲ್ಲ ಎಂಬ ಪ್ರಶ್ನೆಗೆ ಕುವೆಂಪು ಅವರು ನನ್ನನ್ನು ಬ್ರಾಹ್ಮಣರ ಪರ ಎಂದೂ ಕರೆಯುತ್ತಾರಲ್ಲ ಎಂದು ಮರು ಉತ್ತರ ನೀಡಿದರಂತೆ. ಅಂದರೆ ಕುವೆಂಪು ಅವರು ಬ್ರಾಹ್ಮಣರ ಪರವೂ ಹೌದು, ಬ್ರಾಹ್ಮಣರ ವಿರುದ್ಧವೂ ಹೌದು ಎಂದು ಸಿಪಿಕೆ ಅಭಿಪ್ರಾಯಪಟ್ಟರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರಸಾರಾಂಗ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು ಪ್ರಸಾರಾಂಗ 2800ಕ್ಕೂ ಅಧಿಕ ಕೃತಿಗಳನ್ನು ಪ್ರಕಟಿಸಿದ್ದು, ನಾಡಿನ ಮೂಲೆ ಮೂಲೆಗೂ ಮಾರಾಟ ಮಾಡುತ್ತಾ ಬಂದಿದೆ. ಪ್ರಸಾರಾಂಗ ಪ್ರಕಟಿಸಿದ ಕನ್ನಡ-ಇಂಗ್ಲಿಷ್ ನಿಘಂಟು ರೀತಿಯಲ್ಲಿ ಯಾವುದೇ ಭಾರತೀಯ ಭಾಷೆಯಲ್ಲಿ ಬಂದಿಲ್ಲ ಎಂದು ಹೇಳಿದರು.

ಮೈಸೂರು ವಿವಿ ಕುಲಸಚಿವರಾದ ವಿ.ಆರ್.ಶೈಲಜಾ ಅಧ್ಯಕ್ಷತೆ ವಹಿಸಿದ್ದರು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ ಮುಖ್ಯ ಅತಿಥಿಯಾಗಿದ್ದರು. ಉಪನಿರ್ದೇಶಕಿ ಕೆ.ಪಿ.ಲಲಿತಾ, ಅಧೀಕ್ಷಕ ಚನ್ನಬಸಪ್ಪ, ಮುದ್ರಣಾಲಯ ವಿಭಾಗದ ನಿರ್ದೇಶಕ ಎಸ್.ಸತೀಶ್ ಇನ್ನಿತರರು ಉಪಸ್ಥಿತರಿದ್ದರು.

> ಮೈಸೂರು ವಿವಿಯ ಹೃದಯ ಎಂದು ಕುವೆಂಪು ಅವರು ಕರೆದಿದ್ದ ಪ್ರಸಾರಾಂಗ ಇನ್ನಷ್ಟು ಪುನಶ್ಚೇತನಗೊಳ್ಳುವ ಅಗತ್ಯವಿದೆ. ಎರಡು ಕಡೆ ಡಿಜಿಟಲ್ ಫಲಕ ನಿರ್ಮಿಸಬೇಕಿದೆ. ಪ್ರಕಟಣೆಗಳನ್ನು ಬೇರೆ ಬೇರೆ ತಾಲೂಕು, ಜಿಲ್ಲೆಗಳಿಗೂ ಕೊಂಡೊಯ್ದು ಮಾರಾಟ ಮಾಡಲು ವಾಹನದ ಅಗತ್ಯವಿದೆ. ಅಲ್ಲದೆ ಪುಸ್ತಕಗಳ ಮಾರಾಟ ವ್ಯವಸ್ಥೆಗೆ ಖಾಯಂ ಸಿಬ್ಬಂದಿಯೂ ಅಗತ್ಯವಿದೆ. ಮೈಸೂರು ವಿವಿಗೆ ವರಮಾನ ತಂದುಕೊಡುವ ಏಕೈಕ ಸಂಸ್ಥೆಯಾಗಿರುವ ಪ್ರಸಾರಾಂಗದ ಬಗ್ಗೆ ಹೆಚ್ಚು ಗಮನಹರಿಸಬೇಕಾಗಿದೆ.
> - ಪ್ರೊ.ನಂಜಯ್ಯ ಹೊಂಗನೂರು,
> ನಿರ್ದೇಶಕ, ಪ್ರಸಾರಾಂಗ

ಮೈಸೂರಲ್ಲಿ ಜಿಲ್ಲಾಡಳಿತದಿಂದ ವಿಶ್ವ ಮಾನವ ದಿನಾಚರಣೆ ಉದ್ಘಾಟಿಸಿದ ಮೇಯರ್ ಶಿವಕುಮಾರ್

ವಿಶ್ವ ಮಾನವ ಸಂದೇಶ ಸಾರಿದ ಕುವೆಂಪು



ಮೈಸೂರು, ಡಿ.29 (ಆರ್‌ಕೆಬಿ)- ವಿಶ್ವ ಕವಿ ಕುವೆಂಪು ಅವರು ಜಾತಿ, ಮತ, ಪಂಥಗಳನ್ನು ಮೀರಿ ವಿಶ್ವ ಮಾನವರಾಗಬೇಕು ಎಂಬ ಸಂದೇಶ ಸಾರಿದರು. ತಾರತಮ್ಯ, ಅಸಮಾನತೆ ವಿರುದ್ಧ ಹೋರಾಡಿ, ಸಮಾನತೆ ಎತ್ತಿ ಹಿಡಿಯುವ ಕೆಲಸ ಮಾಡಿದರು ಎಂದು ಮೇಯರ್ ಶಿವಕುಮಾರ್ ತಿಳಿಸಿದರು.

ಮೈಸೂರು ಕಲಾಮಂದಿರದಲ್ಲಿ ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗುರುವಾರ ಕುವೆಂಪು ಜನ್ಮದಿನದ ಅಂಗವಾಗಿ ಮೈಸೂರು ಜಿಲ್ಲಾಡಳಿತ ಆಯೋಜಿಸಿದ್ದ ವಿಶ್ವ ಮಾನವ ದಿನಾಚರಣೆಯಲ್ಲಿ ಕುವೆಂಪು ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಮಾತನಾಡಿದರು.

ಇಂದಿಗೂ ಜಾತೀಯತೆ, ಮೌಢ್ಯತೆ ಗಟ್ಟಿಯಾಗಿ ಬೇರೂರಿದೆ. ನಾವು ಅದರಿಂದಾಚೆ ಬಂದರೆ ಮಾತ್ರ ಮೌಢ್ಯ ಮತ್ತು ಜಾತೀಯತೆಯನ್ನು ನಾಶ ಮಾಡಲು ಸಾಧ್ಯ ಎಂದು ಹೇಳಿದರು.

ಕನ್ನಡ ಪ್ರಾಧ್ಯಾಪಕ ಸತ್ಯನಾರಾಯಣ ಗೌಡ ಮುಖ್ಯ ಭಾಷಣ ಮಾಡಿ ಕುವೆಂಪು ಅವರ ಜೀವನ, ಆದರ್ಶಗಳ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು. ಕಾರ್ಯಕ್ರಮದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಮೈಸೂರು ಜಿಲ್ಲಾ ಪಂಚಾಯತ್ ಸಿಇಓ ಬಿ.ಆರ್.ಪೂರ್ಣಿಮಾ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ಉಪಮೇಯರ್ ಡಾ.ರೂಪಾ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ, ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಕನ್ನಡ ಚಳವಳಿಯ ತಾಯೂರು ವಿಠಲಮೂರ್ತಿ, ಬಿ.ಎ.ಶಿವಶಂಕರ್ ಇನ್ನಿತರರು ಉಪಸ್ಥಿತರಿದ್ದರು.

ಸಮಾಜಮುಖಿ ಮಹಾನ್ ಚಿಂತಕರಾಗಿದ್ದ ಕುವೆಂಪು

ಮೈಸೂರು, ಡಿ.29(ಆರ್‌ಕೆಬಿ)- ಯುಗದ ಕವಿ ಕುವೆಂಪು ತಮ್ಮ ಸಾಹಿತ್ಯ ಮತ್ತು ಸಾಮಾಜಿಕ ಚಿಂತನೆಗಳೆರಡರಲ್ಲೂ ಸಮಾಜ ಮುಖಿಯಾಗಿದ್ದರು. ಅವರ ಬದುಕು ಮತ್ತು ಬರಹದುದ್ದಕ್ಕೂ ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ಕುರಿತು ನಿರಂತರವಾಗಿ ಚಿಂತಿಸಿದರು. ಸಾಮಾನ್ಯನನ್ನು ಶ್ರೀ ಸಾಮಾನ್ಯನನ್ನಾಗಿಸಿದರು. ಹಾಗಾಗಿಯೇ ಅವರು ಪ್ರಾಧ್ಯಾಪಕ, ಕುಲಪತಿ, ಸಾಹಿತಿ ಅಷ್ಟೇ ಆಗದೆ ನಾಡಿನ ಸಾಂಸ್ಕೃತಿಕ ನಾಯಕರಾಗಿ, ನಾಡಿನ ಸಾಕ್ಷಿಪ್ರಜ್ಞೆಯಾಗಿ ಬೆಳೆದು ನಿಂತರು ಎಂದು ಲೇಖಕ, ಉಪನ್ಯಾಸಕ ಡಾ.ನೀ.ಗೂ.ರಮೇಶ್ ಅಭಿಪ್ರಾಯಪಟ್ಟರು.



ಮೈಸೂರು ಬಿಜೆಪಿ ಕಚೇರಿಯಲ್ಲಿ ಕುವೆಂಪು ಜಯಂತಿ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದರು. ಕುವೆಂಪು ನಾಡು-ನುಡಿ ಮತ್ತು ದೇಶಭಕ್ತಿಯ ಮಹಾನ್ ಪ್ರತಿಪಾದಕರು. ಪರಭಾಷಿಗರು ಎಂದಿಗೂ ನಮ್ಮ ಅತಿಥಿಗಳೇ ಹೊರತು ಯಜಮಾನರಲ್ಲ ಎಂಬುದನ್ನು ಪ್ರಬಲವಾಗಿ ಪ್ರತಿಪಾದಿಸಿದವರು ಕುವೆಂಪು. ನಾಡಿನ ಏಕೀಕರಣ ಸಂದರ್ಭದಲ್ಲಿ ತೀಕ್ಷ್ಣವಾಗಿ ತಮ್ಮ ಪ್ರತಿಕ್ರಿಯೆಗಳನ್ನು ದಾಖಲಿಸಿದವರು. ಅವರ ಅಖಂಡ ಕರ್ನಾಟಕದ ಪರಿಕಲ್ಪನೆಯೇ ಇಂದಿನ ಗಡಿ ಸಮಸ್ಯೆಗೂ ಪರಿಹಾರವಾಗಲಿದೆ. ಸಮಾಜದ ವಿವಿಧ ವರ್ಗದ ನಾಯಕರ ವೈಯಕ್ತಿಕ ಲಾಭದ ಚಿಂತನೆಯೇ ಇದುವರೆಗೂ ನಮ್ಮ ರಾಜ್ಯದ ಗಡಿ ತಂಟೆಗಳು ಜೀವಂತವಾಗಿರಲು ಕಾರಣ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ಎಚ್.ಎಸ್.ವಿಜಯಶಂಕರ್, ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ ಗೌಡ, ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್ ಮಹಿಳಾ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಮುಡಾ ಸದಸ್ಯೆ ಎಂ.ಲಕ್ಷ್ಮಿದೇವಿ. ಹೇಮಾ, ಜಯಪ್ರಕಾಶ್, ರಾಜ್‌ಕುಮಾರ್, ಚಾಮರಾಜ ಕ್ಷೇತ್ರ ಉಪಾಧ್ಯಕ್ಷ ಕುಮಾರ್‌ಗೌಡ, ದೇವರಾಜ್, ನಾಣಿ, ರವಿ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಸರ್ಪಸಂಸ್ಕಾರ, ನಾಡಿದ್ದು ಆಶ್ಲೇಷಾ ಬಲಿ

ಮೈಸೂರು, ಡಿ.29- ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಡಿ.31ರಂದು ಶನಿವಾರ ಬೆಳಗ್ಗೆ 7.30ಕ್ಕೆ ಸರ್ಪಸಂಸ್ಕಾರ ಮತ್ತು ಜ.1ರಂದು ಭಾನುವಾರ ಬೆಳಗ್ಗೆ 7.30ಕ್ಕೆ ಸರ್ಪಸಂಸ್ಕಾರಾಂಗ ಹೋಮ ಏರ್ಪಡಿಸಲಾಗಿದೆ. ಇದಲ್ಲದೆ ವಿದ್ಯಾರ್ಥಿಗಳಿಗಾಗಿ ಬೆಳಗ್ಗೆ 10.30ಕ್ಕೆ ವಿದ್ಯಾಪ್ರದ ಶ್ರೀ ದಕ್ಷಿಣಾಮೂರ್ತಿ ಮಹಾಯಾಗ ಏರ್ಪಡಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಮೈ ಕುಮಾರ್ (ಜಾತಕ ವಿಮರ್ಶಕ)ರನ್ನು ಮೊ.9845183392, 9845183399 ಸಂಪರ್ಕಿಸಬಹುದು.

ಜಗತ್ತಿನಲ್ಲಿ ಪಾತಕಿಗಳೆಂದರೆ ರಾಜರು, ಪುರೋಹಿತರು...!



ಮೈಸೂರು,ಡಿ.29(ಜಿಎ)-ಜಗತ್ತಿನಲ್ಲಿರುವ ಪಾತಕಿಗಳೆಂದರೆ ರಾಜರು ಮತ್ತು ಪುರೋಹಿತರು. ರಾಜರು ಯಾರೋ ದುಡಿದದ್ದನ್ನು ತಿನ್ನುತ್ತಾರೆ. ಉಂಡಲ್ಲಿ ಎರಡು ಬಗೆಯುವುದು ಈ ಕ್ಷತ್ರೀಯ ಪಿಂಡ. ಇವರಲ್ಲಿ ಮನುಷ್ಯತ್ವವೇ ಇಲ್ಲವೆಂದು ವಿಶ್ವದ ಎಲ್ಲಾ ತಜ್ಞರು ಹೇಳಿದ್ದಾರೆ ಎಂದು ಚಿಂತಕ ಪ್ರೊ.ಕಾಳೇಗೌಡ ನಾಗವಾರ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರದ ಕಿರುರಂಗಮಂದಿರದಲ್ಲಿ ದೇಸಿರಂಗ ಸಾಂಸ್ಕೃತಿಕ ಸಂಸ್ಥೆ ಆಯೋಜಿಸಿದ್ದ ರಂಗ ಮತ್ತು ನೃತ್ಯೋತ್ಸವದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಯಾರ್‍ಯಾರೋ ಅಡಕಸುಬಿಗಳು ನಮಗೆ ಮುಖ್ಯಮಂತ್ರಿಗಳಲ್ಲ. ಪಂಪನೇ ಮುಖ್ಯಮಂತ್ರಿ ಎಂದು ಕುವೆಂಪು ಅವರು ಹೇಳುತ್ತಾರೆ. ನಮಗೆ ವಿವೇಕ ಹೇಳಿಕೊಟ್ಟವರೇ ಮುಖ್ಯಮಂತ್ರಿಗಳು. ಬಂದು ಸತ್ತು ಹೋಗುವ ಪಾಪಿಗೇಡಿಗಳನ್ನು ಮಂತ್ರಿಗಳು ಎಂದು ಕರೆಯುವುದಿಲ್ಲ ಎಂದಿದ್ದರು. ಈ ಧೈರ್ಯ ಅನೇಕರಿಗಿಲ್ಲ ಎಂದರು.

ಅರಮನೆ ಕಟ್ಟುವವರು ಬಡವರು, ಶ್ರಮ ಜೀವಿಗಳ ಬೆವರಿನಲ್ಲಿರುವವರು. ರಾಷ್ಟ್ರಪತಿ, ಪ್ರಧಾನಿ, ಮುಖ್ಯಮಂತ್ರಿ ಮತ್ತು ಶಾಸಕರಿಗೆ ಶ್ರಮಜೀವಿಗಳು ದುಡಿದು ಹಣ ನೀಡುತ್ತಿದ್ದಾರೆ. ಕೊರೊನಾ ಸಂದರ್ಭದಲ್ಲಿ ಸತ್ತರೆ ನಮ್ಮ ಊರಿನಲ್ಲಿ ಸಾಯೋಣ ಎಂದು ತಮ್ಮ ಊರಿನತ್ತ ತೆರಳಿದರು. ಆದರೆ ದಾರಿಯಲ್ಲೇ ಅನೇಕರು ಸತ್ತರು. ಅವರಿಗೆಲ್ಲ ನಾವು ಕನಿಷ್ಟ ವ್ಯವಸ್ಥೆಯನ್ನು ಮಾಡಲು ಆಗಲಿಲ್ಲ. ಅಮೇರಿಕ ಅಧ್ಯಕ್ಷರನ್ನು ಭಾರತಕ್ಕೆ ಕರೆಸಿದ್ದ ನಮ್ಮ ಪ್ರಧಾನಮಂತ್ರಿಗಳು, ಸ್ಲಂ ಕಾಣಬಾರದೆಂದು ಗೋಡೆಯನ್ನು ಕಟ್ಟಿಸಿದ್ದರು. ಪರಮ ಪಾಪಿಗಳು ಮಾತ್ರ ಈ ರೀತಿ ಮಾಡುವುದು. ಈಗ ಪ್ರತಿ ಸೆಕೆಂಡ್‌ನಲ್ಲಿ ಎಲ್ಲವೂ ಕಾಣುತ್ತದೆ. ವೈಜ್ಞಾನಿಕವಾಗಿ ಬೆಳೆದಿರುವ ಅಮೇರಿಕದ ಅಧ್ಯಕ್ಷನಿಗೆ ಇಲ್ಲಿ ಸ್ಲಂ ಇರುವುದು ತಿಳಿಯುವುದಿಲ್ಲವೇ? ಎಂದು ಪ್ರಶ್ನಿಸಿದರು.

ಬುದ್ದ ಆಸೆ ಇರಲ್ಲಿ ದುರಾಸೆ ಬೇಡ ಎಂದರೆ, ಬಸವಣ್ಣ ನಾನು ಹುಟ್ಟಿನಿಂದ ಬ್ರಾಹ್ಮಣ ಇರಬಹುದು ಆದರೆ, ದಲಿತರ ಮನೆ ಮಗ ಎಂದು ಹೇಳಿದ್ದಾರೆ. ಬಸವಣ್ಣನ ಬಗ್ಗೆ ಮಾತನಾಡುತ್ತಿದ್ದ ಒಬ್ಬ ಹೆಣ್ಣು ಮಕ್ಕಳ ಮುಟ್ಟಿ ಈಗ ಜೈಲಿನಲ್ಲಿದ್ದಾನೆ. ಕೋಟಿಗಟ್ಟಲೇ ಹಣ ತೆಗೆದುಕೊಂಡಿದ್ದಾನೆ ಎಂದು ಬೇಸರ ವ್ಯಕ್ತಪಡಿಸಿದರು.

ನಾವು ಕೃಷ್ಣ, ರಾಮ, ಸೀತೆ, ಶಿವನ ಬಗ್ಗೆ ಮಾತನಾಡುತ್ತೇವೆ. ಇವರ್‍ಯಾರು ಇತಿಹಾಸದ ವ್ಯಕ್ತಿಗಳಲ್ಲ. ಇತಿಹಾಸದಲ್ಲಿ ಅಕ್ಕಮಹಾದೇವಿ ಅವರು ಬದುಕಿದ್ದರು. ಭಾರತಕ್ಕೆ ಶ್ರೀಮಂತವಾದ ಭೌದಿಕತೆ ಇದೆ. ಇದು ನಮ್ಮೊಳಗೆ ಸೇರಿಕೊಂಡಿದೆ. ದೇಶ ಇಬ್ಭಾಗವಾಗುವಾಗ, ದೇಶ ಇಬ್ಭಾಗವಾಗುವುದಾದರೆ ನನ್ನ ಹೆಣದ ಮೇಲಾಗಲಿ ಎಂದು ಗಾಂಧೀಜಿ ಹೇಳಿದ್ದರು. ನಂತರ ಅವರೇ ಇಬ್ಭಾಗ ಮಾಡಿದರು ಎಂದು ಅವರನ್ನು ಕೊಂದೇ ಬಿಟ್ಟರು. ಎಲ್ಲಾ ಜಾತಿ-ಧರ್ಮದವರು ಒಟ್ಟಿಗೆ ಇರೋಣ ಎಂದು ಗಾಂಧೀಜಿ ಅವರು ಬಯಸಿದ್ದರು. ಜ್ಯಾತ್ಯಾತೀತವಾದಿಯಾಗಿದ್ದ ಜಿನ್ನಾ ಪಾಕಿಸ್ತಾನಕ್ಕೆ ಹೋದರು. ಇಡೀ ವಿಶ್ವದಲ್ಲಿ ಅನೇಕ ಯುದ್ಧಗಳು ನಡೆದಿವೆ. ಈ ಎಲ್ಲಾ ಯುದ್ಧಗಳ ಸಂದರ್ಭದಲ್ಲಿ ಆದ ಸಾವು ನೋವುಗಳಿಗಿಂತ ಭಾರತ-ಪಾಕಿಸ್ತಾನ ಇಬ್ಭಾಗವಾದಾಗ ಹೆಚ್ಚು ಸಾವು ನೋವು ಸಂಭವಿಸಿದ್ದವು. ಅದು ದಕ್ಷಿಣ ಭಾಗದಲ್ಲಿರುವವರಿಗೆ ಗೊತ್ತಿಲ್ಲ ಎಂದು ಹೇಳಿದರು.

ಹೊಸ ವರ್ಷದಂದು ಮೈಸೂರು ಯೋಗ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಭಕ್ತರಿಗೆ 2 ಲಕ್ಷ ಲಾಡು ವಿತರಣೆ



- 1994ರಿಂದ ನಿರಂತರವಾಗಿ ನಡೆಯುತ್ತಿರುವ ಪುಣ್ಯಕಾಯಕ
- ಇದೇ ವೇಳೆ ಶ್ರೀಸ್ವಾಮಿಗೆ ವಿಶೇಷ ಅಲಂಕಾರದ ದರ್ಶನ ಲಭ್ಯ

ಮೈಸೂರು,ಡಿ.29(ಎಂಟಿವೈ)- ಹೊಸ ವರ್ಷ ಸಂಭ್ರಮದ ಸ್ವಾಗತ ಸಂದರ್ಭದಲ್ಲಿ ಮೈಸೂರಿನ ವಿಜಯನಗರದ ಶ್ರೀ ಯೋಗ ನರಸಿಂಹಸ್ವಾಮಿ ದೇವಾಲಯದಲ್ಲಿ ಈ ವರ್ಷ ಭಕ್ತರಿಗೆ 2 ಲಕ್ಷ ಲಡ್ಡು ವಿತರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ದೇವಾಲಯದ ಸಂಸ್ಥಾಪಕ ಪ್ರೊ.ಭಾಷ್ಯಂ ಸ್ವಾಮೀಜಿ ತಿಳಿಸಿದ್ದಾರೆ.

ಮೈಸೂರಿನ ವಿಜಯನಗರದ ಶ್ರೀ ಯೋಗನರಸಿಂಹಸ್ವಾಮಿ ದೇವಾಲಯದ ಆವರಣದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊರೊನಾ ಹಿನ್ನೆಲೆಯಲ್ಲಿ ಕಳೆದ 2 ವರ್ಷಗಳಿಂದ ಹೊಸ ವರ್ಷಾಚರಣೆಯನ್ನು ಅದ್ದೂರಿಯಾಗಿ ಆಚರಿಸಿರಲಿಲ್ಲ. ಈ ಬಾರಿ ಜ.1ರಂದು ದೇವಾಲಯಕ್ಕೆ ಬರುವ ಭಕ್ತರಿಗೆ ಲಡ್ಡು ವಿತರಿಸಲಾಗುತ್ತಿದೆ. ಅದಕ್ಕಾಗಿ ತಿರುಪತಿ ಮಾದರಿಯ 2 ಲಕ್ಷ ಲಡ್ಡುಗಳನ್ನು ಸಿದ್ಧಪಡಿಸಲಾಗುತ್ತಿವೆ. ಅಂದು ಮುಂಜಾನೆ 4ರಿಂದ



ಮಧ್ಯರಾತ್ರಿ 12 ಗಂಟೆವರೆಗೆ ಭಕ್ತಾದಿಗಳಿಗೆ ಲಡ್ಡು ವಿತರಿಸಲಾಗುತ್ತದೆ ಎಂದರು.

1994ರಿಂದ ಲಾಡು ವಿತರಿಸುವ ಕಾರ್ಯವನ್ನು ಮುಂದುವರಿಸಿಕೊಂಡು ಬರಲಾಗಿದ್ದು, ಈ ಸಲವೂ ನೂತನ ವರ್ಷಾರಂಭದ ಅಂಗವಾಗಿ ಜ.1ರ ಬೆಳಗ್ಗೆ 4ರಿಂದ ಪ್ರಾರಂಭಿಸಲಾಗುವುದು. ಹೊಸ ವರ್ಷದ ವೇಳೆ ಶ್ರೀಯೋಗಾನರಸಿಂಹಸ್ವಾಮಿಗೆ ಶ್ರೀರಂಗ, ಮಧುರೆ ಕ್ಷೇತ್ರದಿಂದ ತರಿಸಿರುವ ವಿಶೇಷ ಮಾಲೆ ಮತ್ತು ಸ್ವರ್ಣಪುಷ್ಪದಿಂದ ವಿಶೇಷ ಅಲಂಕಾರ ಮಾಡಲಾಗುತ್ತಿದೆ. ಶ್ರೀಸ್ವಾಮಿಗೆ ಸಹಸ್ರನಾಮಾರ್ಚನೆ ಮತ್ತು ದೇವಾಲಯದ ಉತ್ಸವ ಮೂರ್ತಿಯಾದ ಶ್ರೀಮಲಯಪ್ಪನ್ ಸ್ವಾಮಿ, ಪದ್ಮಾವತಿ ಮತ್ತು ಮಹಾಲಕ್ಷ್ಮೀ ದೇವರಿಗೆ ಏಕಾದಶ ಪ್ರಾಕಾರೋತ್ಸವ ಹಾಗೂ 20 ಕ್ವಿಂಟಾಲ್ ಪುಳಿಯೋಗರೆ ನಿವೇದನೆ ಮಾಡಲಾಗುತ್ತಿದೆ. ಈ ವರ್ಷ 2 ಕೆಜಿ ತೂಕದ 10 ಸಾವಿರ ಲಡ್ಡುಗಳು ಹಾಗೂ 150 ಗ್ರಾಂ ತೂಕದ 2 ಲಕ್ಷ ಲಡ್ಡುಗಳನ್ನು ತಯಾರಿಸಲಾಗುತ್ತದೆ. ದೇವಾಲಯಕ್ಕೆ ಬರುವ ಎಲ್ಲ ಭಕ್ತಾದಿಗಳಿಗೆ ಯಾವುದೇ ಜಾತಿ, ಮತ ಭೇದವಿಲ್ಲದೆ ಉಚಿತವಾಗಿ ವಿತರಿಸಲಾಗುವುದು. ಲಡ್ಡು ಪ್ರಸಾದವನ್ನು ವಿಶೇಷವಾಗಿ 60 ಜನ ನುರಿತ ಬಾಣಸಿಗರಿಂದ ತಯಾರಿಸಲಾಗಿದ್ದು, ಡಿ.21ರಿಂದ ಪ್ರಾರಂಭಿಸಿರುವ ಲಡ್ಡು ತಯಾರಿ ಕೆಲಸವು 31ಕ್ಕೆ ಮುಕ್ತಾಯವಾಗಲಿದೆ ಎಂದರು.

ಲಡ್ಡು ತಯಾರಿಕೆಗೆ 75 ಕ್ವಿಂಟಾಲ್ ಕಡ್ಲೆಹಿಟ್ಟು, 200 ಕ್ವಿಂಟಾಲ್ ಸಕ್ಕರೆ, 6000 ಲೀಟರ್ ಖಾದ್ಯ ತೈಲ, 200 ಕೆಜಿ ಗೋಡಂಬಿ, 200 ಕೆಜಿ ಒಣದ್ರಾಕ್ಷಿ, 100 ಕೆ.ಜಿ ಬಾದಾಮಿ, 500 ಕೆ.ಜಿ ಡೈಮಂಡ್ ಸಕ್ಕರೆ, 1000 ಕೆ.ಜಿ ಬೂರಾ ಸಕ್ಕರೆ, 20 ಕೆ.ಜಿ ಪಿಸ್ತಾ, 50 ಕೆ.ಜಿ ಏಲಕ್ಕಿ, 40 ಕೆ.ಜಿ ಜಾಕಾಯಿ ಮತ್ತು ಜಾಪತ್ರೆ, 10 ಕೆ.ಜಿ, ಪಚ್ಚೆ ಕರ್ಪೂರ, 100 ಕೆ.ಜಿ ಲವಂಗಗಳನ್ನು ಬಳಸಲಾಗಿದೆ ಎಂದರು.

ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಮಾತನಾಡಿ, ಹೊಸವರ್ಷದಂದು ಸ್ವಾಮಿಗೆ ವಿಶೇಷ ಪೂಜೆ ನೆರವೇರಿಸಲಾಗುವುದು. ಜ.2ರಂದು ವೈಕುಂಠ ಏಕಾದಶಿ ಇರುವುದರಿಂದ ಅಂದು ಬೆಳಗ್ಗೆ ವೈಕುಂಠ ದ್ವಾರದ ಪ್ರವೇಶ ಕಲ್ಪಿಸಲಾಗುವುದು. ಕೊರೊನಾ 4ನೇ ಅಲೆ ಆತಂಕವಿರುವುದರಿಂದ ಭಕ್ತರು ಸರ್ಕಾರದ ಮಾರ್ಗಸೂಚಿ ಪಾಲಿಸಬೇಕು. ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು ಎಂದು ಹೇಳಿದರು.

ಮೈಸೂರು ಮಿತ್ರ
ಶುಕ್ರವಾರ
30 -12-2022

ಬೆಳ್ಳಿ ಬೆಳಕು







'ಸಹರಾ' ಮಹಿಳಾ ಕ್ರಿಕೆಟ್ ಸಾಧಕಿಯ ಕಥೆ

ಕ್ರಿಕೆಟ್ ಆಟಕ್ಕೆ ಸಂಬಂಧಪಟ್ಟಂತೆ ಹಲವಾರು ಚಲನಚಿತ್ರಗಳು ಈಗಾಗಲೇ ತೆರೆ ಮೇಲೆ ಬಂದು ಹೋಗಿವೆ. ಆದರೆ ಒಬ್ಬ ಮಹಿಳಾ ಕ್ರಿಕೆಟ್ ಆಟಗಾರ್ತಿಯ ಕುರಿತಂತೆ ಯಾವುದೇ ಚಿತ್ರ ನಿರ್ಮಾಣವಾಗಿಲ್ಲ. 'ಸಹರಾ' ಎನ್ನುವ ಚಿತ್ರದ ಮೂಲಕ ಯುವ ಚಿತ್ರ ತಂಡವೊಂದು ಅಂಥ ಪ್ರಯತ್ನ ಮಾಡ ಹೊರಟಿದೆ. ಕಳೆದ 8 ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿ ಸಹನಿರ್ದೇಶಕರಾಗಿ ಕೆಲಸ ಮಾಡಿರುವ ಮಂಜೇಶ್ ಭಾಗವತ್ ಅವರು ಇದೇ ಮೊದಲ ಬಾರಿಗೆ ನಿರ್ದೇಶನದ ಜವಾಬ್ದಾರಿ ಹೊತ್ತು ಈ ಚಿತ್ರವನ್ನು ಹೊರ ತರುತ್ತಿದ್ದಾರೆ. ಈಗಾಗಲೇ ಸಹರಾ ಚಿತ್ರಕ್ಕೆ ಶೇ. 95ರಷ್ಟು ಭಾಗದ ಚಿತ್ರೀಕರಣ ಮುಗಿಸಿರುವ ನಿರ್ದೇಶಕರು ಕ್ಲೈಮ್ಯಾಕ್ಸ್ ಹಂತದ ಶೂಟಿಂಗ್ ಮಾತ್ರವೇ ಬಾಕಿ ಉಳಿಸಿಕೊಂಡಿದ್ದಾರೆ. ಈ ಚಿತ್ರದಲ್ಲಿ ನಾಯಕಿಯಾಗಿ ಮೈಸೂರಿನ ಸಾರಿಕಾ ರಾವ್ ಅವರು ಅಭಿನಯಿಸಿದ್ದಾರೆ. ಚಿತ್ರದ ಪಾತ್ರಕ್ಕಾಗಿಯೇ ಸಾರಿಕಾ ಅವರು ರಣಜಿ ಆಟಗಾರ ಕೆ.ಬಿ.ಪವನ್ ಬಳಿ ಕ್ರಿಕೆಟ್ ಕುರಿತು ತರಬೇತಿ ಪಡೆದಿದ್ದಾರೆ. ನಿರ್ದೇಶಕ ಮಂಜೇಶ್ ಭಾಗವತ್ ಹಾಗೂ ನಾಯಕಿ ಸಾರಿಕಾರಾವ್ ಇಬ್ಬರೂ ಮೈಸೂರಿನವರೇ ಆಗಿರುವುದು ವಿಶೇಷ.




ಈ ವಾರ 'ಪದವಿ ಪೂರ್ವ' ನೆನಪುಗಳ ಸರಮಾಲೆ

ಪ್ರೇಕ್ಷಕರನ್ನು ತಮ್ಮ ಬಾಲ್ಯದ ನೆನಪುಗಳತ್ತ ಜಾರುವಂತೆ ಮಾಡುವ, ಪಿಯುಸಿ ದಿನಗಳನ್ನು ನೆನಪಿಸೋ ಕಥಾಹಂದರ ಇರುವ ಚಿತ್ರ ಪದವಿ ಪೂರ್ವ. ಈ ವಾರ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿರುವ ಈ ಚಿತ್ರದಲ್ಲಿ ಯುವ ಕಲಾವಿದರ ದಂಡೇ ಅಭಿನಯಿಸಿದೆ. ಪೀಪಿ ನವೀನ ಹಾಗೂ ನಿತ್ಯಾಳ ಲವ್‌ಸ್ಟೋರಿ ಈ ಕಾಲದ್ದಲ್ಲ, 90ರ ದಶಕದ್ದು. ಕಾಲೇಜು ಓದುವಾಗ ನಾವ್ ಮಾಡಿಕೊಂಡ ಲವ್ವು, ಡವ್ವು ಅವಾಂತರಗಳನ್ನು, ಫ್ಲ್ಯಾಶ್‌ಬ್ಯಾಕ್‌ಗೆ ಹೋಗಿ ಹೇಳೋ ಕಥೆಯೇ ಪದವಿ ಪೂರ್ವ. ಡಿಜಿಟಲ್ ದುನಿಯಾದಿಂದ ವಾಪಸ್ ಅನಲಾಗ್ ಕಾಲಕ್ಕೆ ಕರ್ಕೊಂಡು ಹೋಗ್ತಿರೋ 'ಪದವಿ ಪೂರ್ವ' ಸಿನಿಮಾ ಇದೇ ಡಿಸೆಂಬರ್ 30ಕ್ಕೆ ರಾಜ್ಯಾದ್ಯಂತ ತೆರೆಗೆ ಬರುತ್ತಿದೆ.

ಯೋಗರಾಜ್‌ಭಟ್ ಮೂವೀಸ್ ಹಾಗೂ ರವಿ ಶಾಮನೂರ್ ಫಿಲಂಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾಗಿರುವ ಈ ಚಿತ್ರಕ್ಕೆ ಹರಿಪ್ರಸಾದ್ ಜಯಣ್ಣ ಆ್ಯಕ್ಷನ್ ಕಟ್ ಹೇಳಿದ್ದಾರೆ. ಯುವಪ್ರತಿಭೆ ಪೃಥ್ವಿ ಶಾಮನೂರು, ಅಂಜಲಿ ಅನೀಶ್ ಮತ್ತು ಯಶಾ ಶಿವಕುಮಾರ್ ಚಿತ್ರದ ನಾಯಕ, ನಾಯಕಿಯರಾಗಿ ಅಭಿನಯಿಸಿದ್ದಾರೆ. ಜೊತೆಗೆ ದೊಡ್ಡ ಯಂಗೇಜ್ ಹುಡುಗರ ಗ್ಯಾಂಗೇ ಈ ಚಿತ್ರದಲ್ಲಿ ಅಭಿನಯಿಸಿದೆ. ಇವರ ಜೊತೆಗೆ ಅದಿತಿ ಪ್ರಭುದೇವಾ, ದಿವ್ಯಾ ಉರುಡುಗ, ಕಾಮಿಡಿ ನಯನ, ಶ್ರೀ ಮಹದೇವ್ ವಿಶೇಷ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಹಾಗೂ ರಾಮಾರಾಮಾ ರೇ ಖ್ಯಾತಿಯ ನಟರಾಜ್‌ಭಟ್, ಪ್ರಭು ಮುಡ್ಕೂರು, ರಂಗಾಯಣ ರಘು, ಶರತ್ ಲೋಹಿತಾಶ್ವ ಸೇರಿದಂತೆ ದೊಡ್ಡ ಪೋಷಕ ಕಲಾವಿದರ ಬಳಗವೇ ಈ ಚಿತ್ರದಲ್ಲಿದೆ. ಈಗಾಗಲೇ ಚಿತ್ರತಂಡ ರಾಜ್ಯದ ಮೂಲೆಮೂಲೆಯಲ್ಲಿರುವ ಪಿಯು ಕಾಲೇಜುಗಳಿಗೆ ತೆರಳಿ ಪ್ರಚಾರ ನಡೆಸಿಕೊಂಡು ಬಂದಿದೆ.

ಎಲ್ಲಾ ಕಡೆ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಯುವ ಹೃದಯಗಳ ತುಂಟಾಟ, ಹುಡುಗಾಟಗಳನ್ನು ಎಳೆ ಎಳೆಯಾಗಿ ಬಿಚ್ಚಿಡುವ ಕಥಾಹಂದರ ಹೊಂದಿದ 'ಪದವಿ ಪೂರ್ವ' ಚಿತ್ರದ ಹಾಡುಗಳೂ ಸಹ ಟ್ರೆಂಡಿಂಗ್‌ನಲ್ಲಿವೆ. ಅದರಲ್ಲೂ ಫ್ರೆಂಡ್‌ಷಿಪ್ ಸಾಂಗ್ ಎಲ್ಲಾ ಕಡೆ ವೈರಲ್ ಆಗಿದೆ. ಪದವಿಪೂರ್ವ ಚಿತ್ರಕ್ಕಾಗಿ ಅರ್ಜುನ್ ಜನ್ಯ ರಾಗ ಸಂಯೋಜಿಸಿರುವ ಹಾಡುಗಳಿಗೆ ವಿಕಟಕವಿ ಯೋಗರಾಜ್ ಭಟ್ ಸಾಹಿತ್ಯ ರಚಿಸಿದ್ದಾರೆ. ಛಾಯಾಗ್ರಾಹಕ ಸಂತೋಷ್‌ರೈ ಪಾತಾಜೆ ಅವರ ಕ್ಯಾಮೆರಾ ಕೈಚಳಕ ಚಿತ್ರವನ್ನು ಮತ್ತಷ್ಟು ಶ್ರೀಮಂತವಾಗಿಸಿದೆ.



ಸಂದೇಶ್ ನಾಗರಾಜ್ ನಿರ್ಮಾಣದ ಪ್ರಭುದೇವ್, ಲಕ್ಷ್ಮಿ ರೈ, ಅನುಸೂಯ, ಅಂಜು ಕುರಿಯನ್ ಅಭಿನಯದ ಬಹುಕೋಟಿ ವೆಚ್ಚದ 'ವುಲ್ಫ್' ಚಿತ್ರೀಕರಣವು ಇತ್ತೀಚೆಗೆ ಪೂರ್ಣಗೊಂಡಿದ್ದು, ಚಿತ್ರ ಜನವರಿಯಲ್ಲಿ ಬಿಡುಗಡೆಯಾಗುವ ಸಾಧ್ಯತೆ ಇದೆ.

'ಓ ಮನಸೇ' ತ್ರಿಕೋನ ಪ್ರೇಮಕಥೆಯಲ್ಲಿ ಕ್ರೈಮ್

ವಿಜಯ ರಾಘವೇಂದ್ರ, ಧರ್ಮ ಕೀರ್ತಿರಾಜ್, ಸಂಚಿತಾ ಪಡುಕೋಣೆ ನಟಿಸಿರುವ ಕ್ರೈಮ್ ಜೊತೆಗೆ ಲವ್‌ಸ್ಟೋರಿ ಒಳಗೊಂಡ "ಓ ಮನಸೇ" ಚಿತ್ರದ ಟೀಸರ್ ಬಿಡುಗಡೆ ಹಾಗೂ ಪತ್ರಿಕಾಗೋಷ್ಠಿ ಇತ್ತೀಚೆಗೆ ನೆರವೇರಿತು. ಹಳ್ಳಿಪಂಚಾಯ್ತಿ ಖ್ಯಾತಿಯ ನಿರ್ದೇಶಕ ಉಮೇಶ್‌ಗೌಡ ವಿಭಿನ್ನ ತ್ರಿಕೋನ ಪ್ರೇಮಕಥೆಯೊಂದನ್ನು ಈ ಚಿತ್ರದ ಮೂಲಕ ಹೇಳಹೊರಟಿದ್ದಾರೆ.

ಚಿತ್ರ ಕುರಿತಂತೆ ಮಾತನಾಡುತ್ತ ಕೋವಿಡ್ ಟೈಂನಲ್ಲಿ ರಾಮು ಅವರ ಬಳಿ ಈ ಕಥೆಯನ್ನು ಹೇಳಿದ್ದೆ, ಅವರಿಗೆ ಕಥೆ ಇಷ್ಟವಾಗಿ, ತಮ್ಮ ಮಿತ್ರರ ಜೊತೆ ಸೇರಿ ನಿರ್ಮಾಣಕ್ಕೆ ಮುಂದಾದರು. ಆನಂತರ ವಿಜಯ ರಾಘವೇಂದ್ರ, ಧರ್ಮ ಕೀರ್ತಿರಾಜ್ ಅವರ ಬಳಿ ಮಾತಾಡಿದಾಗ ಅವರೂ ಸಹ ನಟಿಸಲು ಒಪ್ಪಿದರು. ಲವ್ ಮತ್ತು ಕ್ರೈಮ್, ಥ್ರಿಲ್ಲರ್ ಜಾನರ್ ಇರುವ ಈ ಚಿತ್ರಕ್ಕೆ ಮಡಿಕೇರಿ, ಗೋಣಿಕೊಪ್ಪ ಕುಶಾಲನಗರ, ಬೆಂಗಳೂರು ಮುಂತಾದ ಲೊಕೇಶನ್‌ಗಳಲ್ಲಿ 55 ದಿನ ಹಾಗೂ ಹಾಡುಗಳನ್ನು ಥೈಲ್ಯಾಂಡ್‌ನಲ್ಲಿ ಚಿತ್ರೀಕರಿಸಿದ್ದೇವೆ ಎಂದು ಹೇಳಿದರು. ನಟ ವಿಜಯ ರಾಘವೇಂದ್ರ ಮಾತನಾಡಿ ಈ ಚಿತ್ರದಲ್ಲಿ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದೇನೆ. ಈ ನಡುವೆ ನನಗೆ ಪೊಲೀಸ್ ಪಾತ್ರಗಳೇ ಹೆಚ್ಚು ಬರುತ್ತಿದೆ. ಮುಂದಿನ ಎರಡೂ ಚಿತ್ರಗಳಲ್ಲಿ ನನ್ನದು ಪೊಲೀಸ್ ಪಾತ್ರ. ಇದಕ್ಕೆ ಕಾರಣ ಓ ಮನಸೇ ತಂಡ ಎನ್ನಬಹುದು. ಏಕೆಂದರೆ ಕೊರೊನಾ ಸಮಯದಲ್ಲಿ ಇವರು ಬಂದು ಈ ಕಥೆ ಹೇಳಿದರು. ಈ ಚಿತ್ರ ಒಪ್ಪಿದ ನಂತರ ಸಾಲುಸಾಲು ಚಿತ್ರಗಳನ್ನು ನಾನು ಒಪ್ಪಿಕೊಂಡೆ ಎಂದು ಹೇಳಿದರು. ಧರ್ಮ ಕೀರ್ತಿರಾಜ್ ಮಾತನಾಡಿ ಕೋವಿಡ್ ಟೈಮ್‌ನಲ್ಲಿ ಕೆಲಸವಿಲ್ಲದೆ ಮನೆಯಲ್ಲಿದ್ದಾಗ ಈ ನಿರ್ಮಾಪಕರು ಕರೆದು ಅಡ್ವಾನ್ಸ್ ನೀಡಿದರು. ಅವರು ಕೊಟ್ಟ ಘಳಿಗೆ ಚೆನ್ನಾಗಿದೆ. ಆನಂತರ ಸಾಕಷ್ಟು ಚಿತ್ರಗಳ ಅವಕಾಶ ಬಂದವು. ನಾಯಕಿಯನ್ನು ನಾನು ಹಾಗೂ ವಿಜಯ ರಾಘವೇಂದ್ರ ಇಬ್ಬರೂ ಪ್ರೀತಿಸುತ್ತೇವೆ. ಕೊನೆಗೆ ಆಕೆ ಯಾರಿಗೆ ಸಿಗುತ್ತಾಳೆ ಎನ್ನುವುದೇ ಚಿತ್ರದ ಸಸ್ಪೆನ್ಸ್.

'ಸ್ಪೂಕಿ ಕಾಲೇಜ್' ಇದು ದೆವ್ವದ ಕಾಲೇಜು!



ಸೈಕಲಾಜಿಕಲ್ ಹಾರರ್, ಥ್ರಿಲ್ಲರ್ ಕಥಾಹಂದರ ಹೊಂದಿದ 'ಸ್ಪೂಕಿ ಕಾಲೇಜ್' ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು. ರಂಗಿತರಂಗ ಖ್ಯಾತಿಯ ನಿರ್ಮಾಪಕ ಹೆಚ್.ಕೆ. ಪ್ರಕಾಶ್ ನಿರ್ಮಾಣದ ಹಾರರ್ ಕಥಾಹಂದರ ಒಳಗೊಂಡ ಈ ಚಿತ್ರದಲ್ಲಿ 'ಪ್ರೀಮಿಯರ್ ಪದ್ಮಿನಿ' ಖ್ಯಾತಿಯ ವಿವೇಕ್‌ಸಿಂಹ ನಾಯಕನಾಗಿದ್ದು, 'ದಿಯಾ' ಖ್ಯಾತಿಯ ಖುಷಿರವಿ ನಾಯಕಿಯ ಪಾತ್ರ ನಿರ್ವಹಿಸಿದ್ದಾರೆ. ಜ. 6ರಂದು ತೆರೆ ಕಾಣಲಿರುವ ಈ ಚಿತ್ರಕ್ಕೆ ಭರತ್ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಧಾರಾವಾಡದ ನೂರು ವರ್ಷಗಳಿಗೂ ಹಳೆಯದಾದ ಕೆಸಿಡಿ ಕಾಲೇಜಿನಲ್ಲಿ ಈ ಚಿತ್ರದ ಬಹುತೇಕ ಚಿತ್ರೀಕರಣ ನಡೆದಿದೆ.

ಟ್ರೈಲರ್ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ನಿರ್ಮಾಪಕ ಪ್ರಕಾಶ್, ಡಾ.ರಾಜ್‌ಕುಮಾರ್ ಅವರ ಸಿನಿಮಾಗಳನ್ನು ನೋಡಿಕೊಂಡು ಬೆಳೆದವನು. ಕೋವಿಡ್ ಟೈಮ್‌ನಲ್ಲಿ ತುಂಬಾ ಕಷ್ಟಪಟ್ಟು ಈ ಸಿನಿಮಾ ಮಾಡಿದ್ದೇವೆ. ಭರತ್ ಅಂಡ್ ಟೀಮ್ ತುಂಬಾ ಚೆನ್ನಾಗಿ ಸಿನಿಮಾ ಮಾಡಿದ್ದಾರೆ. ಚಿತ್ರದ ಬಜೆಟ್ ಅಂದುಕೊಂಡದ್ದಕ್ಕಿಂತ ಸ್ವಲ್ಪ ಹೆಚ್ಚಾದರೂ ಸಿನಿಮಾ ಅದ್ದೂರಿಯಾಗಿ ಮೂಡಿಬಂದಿದೆ. ರಿಶಭ್‌ಶೆಟ್ಟಿ ಅವರು ವೀಡಿಯೋ ಮೂಲಕ ನಮ್ಮ ಚಿತ್ರದ ಟ್ರೈಲರ್‌ಲಾಂಚ್ ಮಾಡಿಕೊಟ್ಟರು ಎಂದು ಹೇಳಿದರು, ನಾಯಕಿ ಖುಷಿ ಮಾತನಾಡುತ್ತ 2 ವರ್ಷಗಳ ನಂತರ ತೆರೆಮೇಲೆ ಅದೂ ದೊಡ್ಡ ಬ್ಯಾನರ್‌ವೊಂದರ ಮೂಲಕ ಬರುತ್ತಿರುವುದಕ್ಕೆ ಖುಷಿಯಾಗ್ತಿದೆ. 'ದಿಯಾ' ಚಿತ್ರದಲ್ಲಿ ಎಲ್ಲರನ್ನೂ ಅಳಿಸಿದ್ದೆ. ಈ ಚಿತ್ರದಲ್ಲಿ ಅಷ್ಟೇ ಹೆದರಿಸುತ್ತೇನೆ ಎಂದು ಹೇಳಿದರು. ಮೊದಲಬಾರಿಗೆ ಆ್ಯಕ್ಷನ್ ಕಟ್ ಹೇಳಿರುವ ನಿರ್ದೇಶಕ ಭರತ್ ಅವರು ತಮ್ಮ ಚಿತ್ರದ ವಿಶೇಷತೆಗಳ ಕುರಿತಂತೆ ಮಾತನಾಡಿ, ಸ್ಪೂಕಿ ಎಂದರೆ ಭಯ. ಆ ಒಂದು ಕಾಲೇಜಿನಲ್ಲೇ ಭಯ ಹುಟ್ಟಿಸುವ ಎಲ್ಲಾ ಘಟನೆಗಳು ನಡೆಯುವುದರಿಂದ ಚಿತ್ರಕ್ಕೆ ಸ್ಪೂಕಿ ಕಾಲೇಜ್ ಎಂದು ಹೆಸರಿಟ್ಟಿದ್ದೇವೆ. ಎಲ್ಲಾ ಕಲಾವಿದರ ಸಹಕಾರದಿಂದ ಚಿತ್ರ ಅತ್ಯುತ್ತಮವಾಗಿ ಮೂಡಿಬಂದಿದೆ. ಪ್ರೇಕ್ಷಕರಿಗೆ ಒಂದು ಹೊಸ ಅನುಭವವನ್ನು ನಮ್ಮ ಚಿತ್ರ ಖಂಡಿತ ನೀಡುತ್ತದೆ ಎಂದು ಹೇಳಿದರು. ಈ ಚಿತ್ರದಲ್ಲಿ ಅರವತ್ತರ ದಶಕದ ಹಿಟ್‌ಸಾಂಗ್ ಮೆಲ್ಲುಸಿರೇ ಸವಿಗಾನ ಹಾಡನ್ನು ರೀಮಿಕ್ಸ್ ಮಾಡಿ ಬಳಸಿಕೊಳ್ಳಲಾಗಿದ್ದು, ಅದರಲ್ಲಿ ಏಕ್ ಲವ್ ಯಾ ಬೆಡಗಿ ರೀಷ್ಮಾ ನಾಣಯ್ಯ ಹೆಜ್ಜೆ ಹಾಕಿದ್ದಾರೆ.

ಮಾಟ ಮಂತ್ರದ ಕಥೆ 'ಕಾಕ್‌ಟೈಲ್'!

ನಿವೃತ್ತ ಐಎಎಸ್ ಅಧಿಕಾರಿ ಡಾ. ಶಿವಪ್ಪ ಅವರ ಪುತ್ರ ವಿರೇನ್‌ಕೇಶವ್ ನಾಯಕನಾಗಿ ನಟಿಸಿರುವ ಚಿತ್ರ 'ಕಾಕ್‌ಟೈಲ್'. ಮರ್ಡರ್ ಮಿಸ್ಟರಿಯ ಜೊತೆಗೆ ಮಾಟ ಮಂತ್ರಗಳ ಕಥೆಯೂ ಸಾಗುವ ಈ ಚಿತ್ರದಲ್ಲಿ ಚರಿಷ್ಮಾ ಅವರು ನಾಯಕಿ ಪಾತ್ರ ನಿರ್ವಹಿಸಿದ್ದಾರೆ. ಈ ಚಿತ್ರ ಕೂಡ ಜ.6ರಂದೇ ತೆರೆಗೆ ಬರಲಿದೆ. ಇತ್ತೀಚೆಗೆ ಕಾಕ್‌ಟೈಲ್ ಚಿತ್ರದ ಟೀಸರ್ ಮತ್ತು ಟ್ರೈಲರ್ ಬಿಡುಗಡೆ ಕಾರ್ಯಕ್ರಮ ನೆರವೇರಿತು. ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್, ಫಿಲಂ ಚೇಂಬರ್ ಅಧ್ಯಕ್ಷ ಭಾ.ಮಾ. ಹರೀಶ್ ಸೇರಿದಂತೆ ಹಲವಾರು ಗಣ್ಯರು ಆಗಮಿಸಿ ಚಿತ್ರ ತಂಡಕ್ಕೆ ಶುಭ ಹಾರೈಸಿದರು.


ಮಾತನಾಡಿದ ನಿರ್ಮಾಪಕ ಡಾ. ಶಿವಪ್ಪ, ನಮ್ಮ ಮಗ ತಾನು ಸಿನಿಮಾ ಮಾಡಬೇಕೆನ್ನುವ ಆಸೆ ವ್ಯಕ್ತಪಡಿಸಿದ. ಆತನ ಆಸೆಗೆ ನಾನು ನೀರೆರೆದು, ಮುಂಬೈನ ಅನುಪಮ್ ಖೇರ್ ಸಿನಿಮಾ ತರಬೇತಿ ಶಾಲೆಯಲ್ಲಿ ತರಬೇತಿ ಕೊಡಿಸಿ, ನಂತರ 'ಕಾಕ್‌ಟೈಲ್' ಚಿತ್ರವನ್ನು ನಿರ್ಮಾಣ ಮಾಡಿದೆವು. ಚಿತ್ರ ತುಂಬಾ ಚೆನ್ನಾಗಿ ಮೂಡಿಬಂದಿದೆ ಎಂದು ಹೇಳಿದರು. ಪುನೀತ್ ರಾಜ್‌ಕುಮಾರ್ ಅವರು ತಮ್ಮ ಚಿತ್ರನಿರ್ಮಾಣದ ಪ್ರತಿಹಂತದಲ್ಲೂ ನೆರವಾಗಿದ್ದರು. ಅವರ ಅಗಲಿಕೆ ನಮಗೆಲ್ಲ ನೋವು ತಂದಿದೆ. ಚಿತ್ರತಂಡಕ್ಕೆ ಮಾರ್ಗದರ್ಶಕರಾಗಿ ಅವರು ನಮ್ಮ ಪ್ರತಿ ಹೆಜ್ಜೆಯಲ್ಲಿ ಸಾಥ್ ನೀಡಿದ್ದರು. ಇದೀಗ ಅಶ್ವಿನಿ ಪುನೀತ್ ಅವರು ನಮಗೆ ಸಹಕಾರ ನೀಡಿದ್ದಾರೆ ಎಂದರು.

ನಿರ್ದೇಶಕ ಶ್ರೀರಾಮ್, ಮಾತನಾಡಿ 16 ವರ್ಷದಿಂದ ಇಂಡಸ್ಟ್ರಿಯಲ್ಲಿದ್ದರೂ ಈ ಚಿತ್ರದ ಮೂಲಕ ಮೊದಲ ಬಾರಿಗೆ ನಿರ್ದೇಶಕನಾಗಿದ್ದೇನೆ. ನಿರ್ಮಾಪಕರು ಈ ಚಿತ್ರದ ಮೂಲಕ ತಮ್ಮ ಮಗನನ್ನು ಚಿತ್ರರಂಗಕ್ಕೆ ಪರಿಚಯಿಸಿದ್ದಾರೆ. ಜನ ಕೈಹಿಡಿದರೆ ಚಿತ್ರದ ಎರಡನೇ ಭಾಗ ಮಾಡುವ ಉದ್ದೇಶವಿದೆ. ಕನ್ನಡದ ಮಟ್ಟಿಗೆ ಈ ಚಿತ್ರದ ನರೇಶನ್ ತುಂಬಾ ವಿಭಿನ್ನವಾಗಿದೆ. ಸೆನ್ಸಾರ್ ಮಂಡಳಿ ಕೂಡ ಮೆಚ್ಚುಗೆ ವ್ಯಕ್ತಪಡಿಸಿದೆ. ಲವ್, ಫ್ಯಾಮಿಲಿ, ಮರ್ಡರ್ ಕಥೆಯ ಜೊತೆಗೆ ತಂದೆ ಮಗನ ನಡುವಿನ ಸಂಬಂಧ, ಇಲ್ಲಿ ಎಲ್ಲಾ ಬೇರೆ, ಬೇರೆಯಾಗಿದೆ ಎಂದು ಹೇಳಿದರು.

ನಂತರ ನಾಯಕ ವೀರೇನ್ ಕೇಶವ್ ಮಾತನಾಡಿ ಮರ್ಡರ್, ಮಾಟ ಮಂತ್ರ ಎಲ್ಲವೂ ಚಿತ್ರದಲ್ಲಿದೆ, ಆದರೆ ಒಂದೇ ರೀತಿ ಯಾವುದೂ ಇರಲ್ಲ ಎಂದು ಹೇಳಿದರು. ನಂತರ ಚಿತ್ರದ ನಾಯಕಿ ಚರಿಷ್ಮಾ ಮಾತನಾಡಿ, ಇದು ನನ್ನ ಮೊದಲ ಚಿತ್ರವಾಗಿದ್ದು, ಒಳ್ಳೇ ಪಾತ್ರವನ್ನು ನಿರ್ದೇಶಕರು ನೀಡಿದ್ದಾರೆ ಎಂದು ತಮ್ಮ ಅನುಭವಗಳನ್ನು ಹಂಚಿಕೊಂಡರು.

ಸಿನಿಪದಬಂಧ-455

ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು

ವಿಳಾಸ

ದೂರವಾಣಿ ಸಂಖ್ಯೆ

ವಿಜೇತರು: ಕೆ.ವೇಣುಗೋಪಾಲರಾವ್, 179, 4ನೇ ಕ್ರಾಸ್, ಕಂದಾಯನಗರ, 3ನೇ ಹಂತ, ಶ್ರೀರಾಂಪುರ, ಮೈಸೂರು.

ಎಡದಿಂದ ಬಲಕ್ಕೆ

1. "ಮದುವೆ ಮದುವೆ ಮದುವೆ" ಚಿತ್ರದ ಹಾಡಿನಲ್ಲಿ ಇವೆರಡರ ಆಕೆ ಗಂಗಾ ಯಮುನಾವಂತೆ !? 7
4. ರಜನಿಕಾಂತ್‌ನ ಟೈಟಲ್ ರೋಲ್ "ಪ್ರಿಯ" 3
6.ಮಗಳ ಗಂಡ ಶಿವಣ್ಣ ಗೊಂದಲದಲ್ಲಿದ್ದಾನೆ 7
8.ಕಾಸಿದ್ರೆ ಶಿವನ ನೆಲೆ ಸಿಗಲಿದೆ 3
9.ದರ್ಶನ್ ಆಂದೋಲನ ನಡೆಸಲು ತುದಿಗಾಲಲ್ಲಿ ನಿಂತಿದ್ದಾನೆ 2
10.ಮನಪೂರ್ವಕವಾಗಿ ಬಂದ ನಟಿಗೆ ಇಲ್ಲಿ ರಾವ್ ಮಿಸ್ಸಾಗಿದೆ 3
12.ಇಬ್ಬನಿ ತಬ್ಬಿದ ಇಳೆಯಲಿ ಕಣ್ಣ ಸೆಳೆದ ರವಿತೇಜನ 'ಕಿರಣ' 2
14.ಬೆಳ್ಳಿಮೋಡದಲ್ಲಿ ಒಲವಿನ ಈ ದರ್ಪಣ ಒಡೆಯಿತು! 3
16.ಉಪಪತ್ನಿ ಬೀರಿದ ಛಾಯೆ 7
17.ಪುನೀತ್ – ಪಾರ್ವತಿಯ ಸಂಗಮ 3
18.ಎಂಥಾ ಸೌಂದರ್ಯ ನೋಡು ... ಎಂದು ಹಾಡಿದವನ ನಾಲಿಗೆ ಶುದ್ಧವಿದೆ 7

ಸಿನಿ ಪದಬಂಧ 454ರ ಸರಿ ಉತ್ತರ

ಶಂ	ಭೋ	ಶಿ	ವ	ಶಂ	ಕ	ರ				ರಾ
ಖ		ವ			ತಾ					ಕಿಂ
ನಾ		ಪ್ಪ		ಮ	ರಿ	ಯ	ಮೈ	ಡಾ	ರ್ಲಿಂ	ಗ್
ದ		ನಾ			ವೀ		ಸೂ			ಸ್ಟಾ
	ಲ	ಯ	ನ್		ರ		ರು		ಕೇ	ರ್
		ಕ		ಬೆ	ಸು	ಗೆ		ಬೆಂ		
ಅ	ಮ್ಮ		ಗೀ		ರ		ಅಂ	ಕಿ	ತಾ	
ಣ್ಣ			ಜ		ಸುಂ			ಬಿ		ನಾ
ಅ	ನು	ರಾ	ಗ	ಸ್ವಂ	ದ	ನ		ರು		ಗ
ತ್ತಿ					ರಾಂ			ಗಾ		ವ
ಗೆ	ಲು	ವು		ಮಾ	ಗಿ	ಯ	ಚ	ಳಿ	ಯ	ಲ್ಲಿ

ಮೇಲಿನಿಂದ ಕೆಳಕ್ಕೆ

1.ಒಡೆದ ಹಾಲು ಚಿತ್ರದ ಹೀರೋ ನಿರ್ದೇಶಕನೂ ಹೌದು! 4
2.ನವರಸ ನಾಯಕ ಜಗ್ಗೇಶ್ ಮಹಾ ಪ್ರಚಂಡ 6
3.ಅನಂತ್ ನಾಗ್ – ಲಕ್ಷ್ಮಿ ಅಭಿನಯದಲ್ಲಿ ಹೂವೊಂದು ಬಿರಿದಿದೆ 11
5.ಆಯುಧ ಹಿಡಿದಾಕೆ ಗೆಲುವಿನಲ್ಲಿ ನೆಮ್ಮದಿ ಕಂಡವಳು 5
7. ಸಾಯಿಬಾಬಾರ ನೆಲೆ ಇಲ್ಲಿ ತಲೆಕೆಳಗು 3
11.ಲೀಲಾವತಿಯ ಕೂಸು ನಾವಾಡುವ ನುಡಿಯುವನು 6
12.ಶಿವಣ್ಣ ಏಳನೆಯ ದಿನದಂದು ಎಳೆದ ತೇರು 5
13.ಹಾಡೊಂದರಲ್ಲಿ ಸಿಹಿಖಾದ್ಯವೊಂದು ಬಿಸಿ ಬಿಸಿಯಾಗಿದೆ 3
15. ಗೆಂಡೆತಿಮ್ಮನ ಬೇರೆಯವರ ಸಹವಾಸ 4

'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಕನ್ನಡ ಸಾಹಿತ್ಯಕ್ಕೆ ರಾಷ್ಟ್ರಕವಿ ಕುವೆಂಪು ಕೊಡುಗೆ ಅಪಾರ

ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು



ತಿ.ನರಸೀಪುರ, ಡಿ.29– ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ ಹಾಗೂ ಸಾಹಿತ್ಯದ ಮೂಲಕ ವೈಚಾರಿಕ ಕ್ರಾಂತಿಗೆ ಬೆಳಕು ಚೆಲ್ಲಿದ ರಾಷ್ಟ್ರಕವಿ ಕುವೆಂಪು ಅವರ ಕಥೆ, ಕಾದಂಬರಿ, ನಾಟಕ, ಕವಿತೆಗಳನ್ನು ಪ್ರತಿಯೊಬ್ಬರೂ ಅಧ್ಯಯನ ಮಾಡುವಂತಾಗಬೇಕು ಎಂದು ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು ತಿಳಿಸಿದರು.

ಪಟ್ಟಣದ ಖಾಸಗಿ ಬಸ್ ನಿಲ್ದಾಣದಲ್ಲಿ ನಡೆದ ಕುವೆಂಪು ಜಯಂತಿಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಕುವೆಂಪು ಯುಗದ ಕವಿ, ಜಗದ ಕವಿ ಎಂದು ಹೆಸರು ಪಡೆದಿದ್ದಾರೆ. ಮನುಜ ಮತ, ವಿಶ್ವ ಪಥ, ವಿಶ್ವ ಮಾನವ ಸಂದೇಶ, ಕೊಳಲು, ಪಾಂಚಜನ್ಯ, ಜಲಗಾರ ಹೀಗೆ ಹಲವು ಕಥೆ ಕವನ, ನಾಟಕ ಬರೆದಿದ್ದಾರೆ. ವಿಶ್ವ ಮಾನವತಾ ವಾದ, ವಿಶ್ವ ಮಾನವ ಧರ್ಮ, ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು ಎಂಬುದನ್ನು ಕುವೆಂಪು ಪ್ರತಿಪಾದಿಸಿದ್ದರು ಎಂದು ನುಡಿದರು.

ಮಹಿಳೆಯರಿಗೆ ಸಮಾನ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಕುವೆಂಪು ಸಾಹಿತ್ಯ ರಚಿಸಿದ್ದಾರೆ. ಮಾನವ ಪರಿಕಲ್ಪನೆಯನ್ನು ಸಾಹಿತ್ಯದ ಮೂಲಕ ಸಮಾಜಕ್ಕೆ ಪರಿಚಯಿಸಿದ ಕೀರ್ತಿ ಕುವೆಂಪು ಅವರಿಗೆ ಸಲ್ಲುತ್ತದೆ. ವೈಜ್ಞಾನಿಕ ತಳಹದಿ ಮೇಲೆ ಸಾಹಿತ್ಯ ರಚಿಸಿದ್ದಾರೆ ಎಂದರು.

ವಿಚಾರವಾದಿ ಕರೋಹಟ್ಟಿ ಪ್ರಭುಸ್ವಾಮಿ ಮಾತನಾಡಿ, ಕುವೆಂಪು ರಚಿಸಿರುವ ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಎರಡು ಮಹಾಕಾವ್ಯಗಳು ಸಾಹಿತ್ಯದ ಮೌಲ್ಯವನ್ನು ಪ್ರತಿಬಿಂಬಿಸುತ್ತದೆ. ಹಾಗೆಯೇ ಶ್ರೀರಾಮಾಯಣ ದರ್ಶನಂ ಮಹಾಕಾವ್ಯ ವಿಶ್ವ ವಿಖ್ಯಾತಿಯಾಗಿದೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಎಲ್ಲರೂ ತೊಡಗಿಸಿಕೊಳ್ಳುವಂತಾಗಲು ಕುವೆಂಪು ಪ್ರೇರೇಪಿಸಿದರು. ಅಲ್ಲದೇ ಹಲವು ನಾಟಕ, ಕಾದಂಬರಿ, ಕವಿತೆ ಬರೆಯುವ ಮೂಲಕ ಕನ್ನಡ ನಾಡಿಗೆ ತಮ್ಮದೇ ಆದ ಕೊಡುಗೆ ನೀಡಿದರು ಎಂದರು.

ವಿಶ್ವ ಮಾನವ ಕುವೆಂಪು ಸಾಮಾಜಿಕ ವ್ಯವಸ್ಥೆಯಲ್ಲಿ ಆಡಂಬರ ವಿರೋಧಿಸಿದರು. ಮಂತ್ರ ಮಾಂಗಲ್ಯ ಮೂಲಕ ಸರಳ ವಿವಾಹಕ್ಕೆ ಒತ್ತು ನೀಡಿದರು. ವರ್ಣಾಶ್ರಮ ಹಾಗೂ ಮತ ಪದ್ಧತಿ ಹೋಗಲಾಡಿಸಲು ತಮ್ಮ ಕವಿತೆ ಕಾದಂಬರಿಗಳ ಮೂಲಕ ಸಂದೇಶ ಸಾರಿದರು ಎಂದರು. ಕುವೆಂಪು ಅವರು ಕನ್ನಡ ನಾಡು–ನುಡಿ ಕಟ್ಟುವ ಕಾಯಕದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು. ಕುವೆಂಪು ನಾಡಿನ ಕವಿ, ಸಾಹಿತಿ, ಚಿಂತಕರಾಗಿ ಬೆಳೆದು ವಿಶ್ವ ಮಾನವರಾಗಿದ್ದಾರೆ. ಅವರ ವೈಚಾರಿಕತೆ ಸಾಮಾಜಿಕ ಕಾಳಜಿಗಳ ಫಲವಾಗಿ ಮೂಡಿ ಬಂದಿದೆ ಎಂದರು.

ಕಾರ್ಯಕ್ರಮದಲ್ಲಿ ಖಾಸಗಿ ಬಸ್ ಏಜೆಂಟರ ಸಂಘದ ಕಾರ್ಯದರ್ಶಿ ರಾಜಣ್ಣ, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಕರೋಹಟ್ಟಿ ಬಸವರಾಜು, ದಸಂಸ ಜಿಲ್ಲಾ ಸಂಚಾಲಕ ಸೋಸಲೆ ಶಶಿಕಾಂತ್, ಜಿ.ಎಲ್.ಉಮೇಶ್, ಸಂಘದ ನಿರ್ದೇಶಕರಾದ ಕೆ.ಶಂಕರ್, ಶ್ರೀನಿವಾಸ್, ಗಿರೀಶ್, ಮಂಜುನಾಥ್, ನವೀನ್, ಮಹದೇವ, ಸಲೀಂ ಸೋಮಣ್ಣ, ಚಿನ್ನಸ್ವಾಮಿ, ಶೇಷಾದ್ರಿ ಮತ್ತಿತರರಿದ್ದರು.

ಮಹಿಳೆಯರಿಗೆ ಸಹಕಾರ ಸಂಘ ಸಹಕಾರಿ



ಮಲ್ಕುಂಡಿ, ಡಿ.29– ಮಹಿಳೆಯರು ಸದೃಢವಾಗಿ ಬೆಳೆಯಲು ಸಹಕಾರ ಸಂಘಗಳು ಸಹಕಾರಿ ಎಂದು ಟಿಎಪಿಸಿಎಂಎಸ್ ತಾಲೂಕು ಅಧ್ಯಕ್ಷ ಕೆ.ಜಿ.ಮಹೇಶ್ ತಿಳಿಸಿದರು.

ಇಲ್ಲಿನ ಚಂದ್ರವಾಡಿ ಪಿಎಸಿಎಸ್ ಆವರಣದಲ್ಲಿ ನಡೆದ ನಬಾರ್ಡ್ ಆರ್ಥಿಕ ನೆರವಿನೊಂದಿಗೆ ಡಿಜಿಟಲ್ ಹಣಕಾಸಿನ ಸಾಕ್ಷರತೆ ಹಾಗೂ ಸಹಕಾರ ಸಂಘಗಳಿಗೆ ಚೆಕ್ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಸಂಘದಿಂದ ಶೇ.4ರ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತಿದೆ. ಪ್ರತಿಯೊಬ್ಬರೂ ಇದನ್ನು ಸದುಪಯೋಗ ಪಡಿಸಿಕೊಂಡು ಪಡೆದ ಸಾಲವನ್ನು ಸಕಾಲಕ್ಕೆ ಮರು ಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕಾರ ನೀಡಿ ಎಂದರು. ಪಿಎಲ್‌ಡಿ ಬ್ಯಾಂಕ್ ಜಿಲ್ಲಾ ನಿರ್ದೇಶಕ ಸದಾನಂದ ಮಾತನಾಡಿ, ಸಮಾಜ ಮತ್ತು ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯ ಪಾತ್ರ ಅಪಾರ. ಮಹಿಳೆಯರಲ್ಲಿ ಆತ್ಮವಿಶ್ವಾಸ ಮೂಡಿಸಿದಾಗ ಮಾತ್ರ ಸಮಗ್ರ ಅಭಿವೃದ್ಧಿ ಸಾಧ್ಯವೆಂದು ನಂಬಿರುವ ಸಹಕಾರ ಸಂಘಗಳು ಮಹಿಳೆಯರ ಸ್ವಾವಲಂಬನೆಗೆ ಬೆನ್ನೆಲುಬಾಗಿ ನಿಂತಿದೆ ಎಂದರು.

ಪಿಎಸಿಎಸ್ ಅಧ್ಯಕ್ಷ ರವೀಂದ್ರ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಕೂಸೇಗೌಡ, ನಿರ್ದೇಶಕ ಹೆಚ್.ಎಂ.ಕೆಂಡಗಣ್ಣಪ್ಪ, ಬ್ಯಾಂಕ್ ಪ್ರತಿನಿಧಿ ಕೃಷ್ಣ, ಸಿಇಓ ಭಾರತಿಬಾಯಿ ಸೇರಿದಂತೆ ಹಲವು ರೈತರಿದ್ದರು.

ಬೆಟ್ಟದಪುರದಲ್ಲಿ ಕುವೆಂಪು ಜಯಂತಿ



ಬೆಟ್ಟದಪುರ, ಡಿ.29–ಮನುಜಮತ ವಿಶ್ವ ಪಥ, ಸರ್ವೋದಯ, ಸಮಾನತೆ, ಪೂರ್ಣ ದೃಷ್ಟಿ, ಪಂಚ ಮಂತ್ರಗಳ ಜೊತೆಗೆ ವಿಶ್ವಮಾನವ ಸಂದೇಶ ಸಾರಿದ ರಾಷ್ಟ್ರಕವಿ ಕುವೆಂಪು ಜನ್ಮದಿನವನ್ನು ವಿಶ್ವಮಾನವ ದಿನಾಚರಣೆಯಾಗಿ ಆಚರಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದು ಕನ್ನಡ ಸಾಹಿತ್ಯ ಪರಿಷತ್ ನಿಕಟ ಪೂರ್ವ ಅಧ್ಯಕ್ಷಗೊರಳ್ಳಿ ಜಗದೀಶ್ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಬೆಟ್ಟದಪುರ ಹೋಬಳಿ ಘಟಕದಿಂದ ಬೆಟ್ಟದಪುರದ ಕುವೆಂಪು ವೃತ್ತದಲ್ಲಿ ಹಮ್ಮಿಕೊಂಡಿದ್ದ 119ನೇ ಕುವೆಂಪು ಜಯಂತಿಯಲ್ಲಿ ಮಾತನಾಡಿದ ಅವರು, ಕವಿಯಾಗಿ, ಕಾದಂಬರಿಕಾರರಾಗಿ, ನಾಟಕಕಾರರಾಗಿ, ಸಾಹಿತ್ಯ ಕೃಷಿ ಮಾಡುವುದರ ಜೊತೆಗೆ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯ ರಚಿಸಿ ಕನ್ನಡ ಸಾಹಿತ್ಯಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿ ದೊರಕಿಸಿಕೊಟ್ಟು, ಕನ್ನಡ ಸಾಹಿತ್ಯಕ್ಕೆ ವಿಶ್ವ ಮನ್ನಣೆ ಗಳಿಸಿಕೊಟ್ಟ 20ನೇ ಶತಮಾನದ ಶ್ರೇಷ್ಠ ಯುಗದ ಕವಿ, ಜಗದ ಕವಿ ಕುವೆಂಪು ಆಗಿದ್ದಾರೆ ಎಂದರು.


ಕಸಾಪ ಗೌರವ ಕಾರ್ಯದರ್ಶಿ ಕೆಂಪರಾಜು ಮಾತನಾಡಿ, ಕುವೆಂಪು ಅವರ ಪ್ರಕೃತಿ ಪ್ರೇಮ, ವೈಚಾರಿಕತೆ, ಆಧ್ಯಾತ್ಮಿಕ ಚಿಂತನೆ ನಮಗೆಲ್ಲರಿಗೂ ದಾರಿದೀಪ ಅವರ ಆದರ್ಶಗಳನ್ನು ಮೈಗೂಡಿಸಿಕೊಂಡು ನಮ್ಮ ಬದುಕನ್ನು ಹಸನು ಮಾಡಿಕೊಳ್ಳಬೇಕೆಂದರು.

ಗ್ರಾಮೀಣ ಶಿಕ್ಷಕರ ಸಂಘದ ಅಧ್ಯಕ್ಷ ಮಹದೇವಪ್ಪ, ನಿವೃತ್ತ ಶಿಕ್ಷಕ ಸಣ್ಣಸ್ವಾಮಿಗೌಡ ಮಾತನಾಡಿ, ಬೆಟ್ಟದಪುರದಲ್ಲಿ ಕುವೆಂಪು ಅವರ ಹೆಸರಿನಲ್ಲಿ ಒಂದು ಅದ್ಭುತವಾದ ಕನ್ನಡ ಭವನ ನಿರ್ಮಾಣ ಮಾಡಬೇಕೆಂದು ಕನ್ನಡ ಅಭಿಮಾನಿಗಳಿಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಬೆಟ್ಟದಪುರ ಹೋಬಳಿ ಘಟಕದ ಅಧ್ಯಕ್ಷ ಸುರಗಹಳ್ಳಿ ವೆಂಕಟೇಶ್, ಮಹಿಳಾ ಘಟಕದ ಅಧ್ಯಕ್ಷೆ ಪ್ರೀತಿ ಅರಸ್, ಗೌರವ ಕಾರ್ಯದರ್ಶಿ ಆಲೂರು ಮಹೇಶ ಅವರಿಗೆ ಪ್ರಮಾಣ ಪತ್ರ ನೀಡಲಾಯಿತು. ಬಾಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ರಾಷ್ಟ್ರ ಮಟ್ಟಕ್ಕೆ ಆಯ್ಕೆ ಆಗಿರುವ ಬೆಟ್ಟದಪುರ ಸರ್ಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ ಮಾನ್ಯ ವಿ.ಎಸ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಪಟೇಲ್ ನಟೇಶ್, ರೈತ ಮುಖಂಡ ದೇವರಾಜು, ಮಲ್ಲೇಶ್, ಬಿ.ಟಿ.ಸಣ್ಣಸ್ವಾಮಿಗೌಡ, ಮಹದೇವಪ್ಪ, ಮುರುಳಿ, ಪ್ರಸನ್ನ, ಡಾ.ನಫೀಜ್, ಶಿವದೇವ್, ಮನೋಹರ್, ಚಂದ್ರು, ಮಾಗಳಿ ರಾಮೇಗೌಡ, ಮಂಜುನಾಥ್, ವಿನಯ್ ಅರಸ್ ಇತರರಿದ್ದರು.

ಇಂದು ನಾಗನಹಳ್ಳಿಯಲ್ಲಿ ಯೇಸು ದೇವಾಲಯ ಉದ್ಘಾಟನೆ



ಹೆಚ್.ಡಿ.ಕೋಟೆ, ಡಿ.29– ತಾಲೂಕಿನ ನಾಗನಹಳ್ಳಿಯಲ್ಲಿ 5 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ ಯೇಸುವಿನ ದೇವಾಲಯವನ್ನು ಡಿ.30 ರಂದು ಬೆಳಗ್ಗೆ 10 ಗಂಟೆಗೆ ಗಣ್ಯರು ಉದ್ಘಾಟಿಸಲಿದ್ದಾರೆ.

ಗ್ರಾಮದಲ್ಲಿ ಕ್ರೈಸ್ತ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದು, ಹಲವು ವರ್ಷಗಳ ಕ್ರೈಸ್ತ ಬಾಂಧವರ ಕನಸಾಗಿದ್ದ ಯೇಸು ದೇವಾಲಯ ಉದ್ಘಾಟನೆಯಾಗುತ್ತಿರುವುದು ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ.

2011 ರಲ್ಲಿ ಚರ್ಚ್ ಫಾದರ್ ಆಗಿದ್ದ ಜೋಸೆಫ್ ಮರಿ ಅವರು ಗ್ರಾಮದಲ್ಲಿ ಯೇಸುವಿನ ದೇವಾಲಯ ನಿರ್ಮಾಣ ಮಾಡಬೇಕೆಂದು ಗ್ರಾಮಸ್ಥರು ಹಾಗೂ ಧರ್ಮಾಧ್ಯಕ್ಷರ ಜೊತೆ ಚರ್ಚಿಸಿ, ಅದೇ ಸಾಲಿನಲ್ಲಿ ದೇವಾಲಯ ನಿರ್ಮಾಣಕ್ಕೆ ಧರ್ಮಾಧ್ಯಕ್ಷ ಥಾಮಸ್ ಆಂತೋನಿ ವಾಳಪಿಳ್ಳಿ, ಶಾಸಕರಾಗಿದ್ದ ಬೀಚನಹಳ್ಳಿ ಚಿಕ್ಕಣ್ಣ, ಸಂಸತ್ ಸಂಸದರಾಗಿದ್ದ ಆರ್.ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯರಾಗಿದ್ದ ಸಂದೇಶ್ ನಾಗರಾಜು, ದಿ.ಚಿಕ್ಕಮಾದು, ಸಿದ್ದರಾಜು ಮುಂತಾದವರ ಮೂಲಕ ಅದ್ದೂರಿ ಚಾಲನೆ ನೀಡಿದ್ದರು.

ಶಾಸಕರಾಗಿದ್ದ ಚಿಕ್ಕಣ್ಣ 10 ಲಕ್ಷ ಚಿಕ್ಕಮಾದು 5 ಲಕ್ಷ ಶಾಸಕ ಅನಿಲ್ ಚಿಕ್ಕಮಾದು 5 ಲಕ್ಷ ನೀಡಿದ್ದರು. ಉಳಿಕೆ ಹಣವನ್ನು ಗ್ರಾಮಸ್ಥರು ದಾನಿಗಳು, ಮೈಸೂರಿನ ಧರ್ಮ ಕ್ಷೇತ್ರಗಳು ಸೇರಿದಂತೆ ಇನ್ನಿತರರ ಮೂಲಕ ಹಂತ ಹಂತವಾಗಿ ಸಂಗ್ರಹಿಸಿ ದೇವಾಲಯದ ಕಾಮಗಾರಿ ಪೂರ್ಣಗೊಂಡಿರುವುದರಿಂದ, ನೂತನವಾಗಿ ನಿರ್ಮಿಸಿರುವ ಯೇಸುವಿನ ಪವಿತ್ರ ಹೃದಯ ನಾಳೆ ದೇವಾಲಯ ಉದ್ಘಾಟನೆಗೊಳ್ಳಲಿದೆ.

ಕಾರ್ಯಕ್ರಮದಲ್ಲಿ ಮಹಾ ಧರ್ಮಾಧ್ಯಕ್ಷರಾದ ಡಾ.ಸರ್ ಜಾನ್ ಕಾರ್ಡಿನಲ್ ರಿಬಾಟ್, ಧರ್ಮಾಧ್ಯಕ್ಷರಾದ ಆಂಟನಿ ಮಿಲಿಯಂ, ಥಾಮಸ್, ರೋಸಲಿಯೋ, ಸುಪ್ರಿಯನ್ ಮೋನಿಸ್, ಸಂಸದ ಶ್ರೀನಿವಾಸಪ್ರಸಾದ್, ಶಾಸಕರಾದ ಅನಿಲ್ ಚಿಕ್ಕಮಾದು, ಜಿ.ಟಿ.ದೇವೇಗೌಡ, ಎಂಎಲ್‌ಸಿ ತಿಮ್ಮಯ್ಯ, ನಾರಾಯಣ್, ಮಾಜಿ ಸಚಿವ ಎಂ.ಶಿವಣ್ಣ, ಮಾಜಿ ಶಾಸಕ ಚಿಕ್ಕಣ್ಣ, ನಾಗನಹಳ್ಳಿ ಚರ್ಚ್ ಫಾದರ್ ಆಂತೋನಿ ಸ್ವಾಮಿ, ಸಮಿತಿಯವರಾದ ಮೆಟ್ರಿನ್ ಶಾಂತರಾಜು, ಪ್ರದೀಪ, ಸ್ಟ್ಯಾನಿ ಬ್ರಿಟೋ, ಆಂಟೋನಿ ಲಾಜರ್, ಬೋರಪ್ಪ, ಬಾಲರಾಜು ಭಾಗವಹಿಸಲಿದ್ದಾರೆ.

ಜಾಬಗೆರೆ ಗ್ರಾಪಂಗೆ ಪಾಂಡು ಅಧ್ಯಕ್ಷ



ಹುಣಸೂರು, ಡಿ.29– ತಾಲೂಕಿನ ಜಾಬಗೆರೆ ಗ್ರಾಪಂ ಅಧ್ಯಕ್ಷರಾಗಿ ಪಾಂಡು, ಉಪಾಧ್ಯಕ್ಷರಾಗಿ ಮರಿಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಂತರಿಕ ಒಪ್ಪಂದದಂತೆ ಈ ಹಿಂದಿನ ಅಧ್ಯಕ್ಷೆ ತುಳಸಮ್ಮ ಹಾಗೂ ಉಪಾಧ್ಯಕ್ಷೆ ಚಿತ್ರ ಅವರಿಂದ ತೆರವಾಗಿದ್ದ ಸ್ಥಾನಕ್ಕೆ ಪಾಂಡು, ಮರಿಗೌಡ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಹಾರಂಗಿ ಇಲಾಖೆಯ ಎಇಇ ಸುರೇಶ್ ಘೋಷಿಸಿದರು. ಈ ವೇಳೆ ಪಿಡಿಓ ಮೀನಾಕ್ಷಿ, ಹಾಲಿ ಸದಸ್ಯ ತಿಮ್ಮನಾಯಕ, ಕರ್ನಾಟಕ ಹಾಲು ಮಹಾ ಮಂಡಳಿ ನಿರ್ದೇಶಕ ಕುಮಾರ್, ಟಿಎಪಿಸಿಎಂಎಸ್ ಅಧ್ಯಕ್ಷ ಕೆಂಪೇಗೌಡ, ಸದಸ್ಯರಾದ ಚಿತ್ರ, ನಾಗೇಗೌಡ, ಮನೋಹರ್, ತುಳಸಮ್ಮ, ಮಹೇಶ್, ಯಶೋದಾಬಾಯಿ, ಜಯಮ್ಮ ಇನ್ನಿತರರಿದ್ದರು.


ಬಿದರಹಳ್ಳಿ ಗ್ರಾಪಂ ಉಪಾಧ್ಯಕ್ಷೆಯಾಗಿ ಡಿ.ನೇತ್ರಾ ಆಯ್ಕೆ



ಸರಗೂರು, ಡಿ.29– ತಾಲೂಕಿನ ಬಿದರಹಳ್ಳಿ ಗ್ರಾಪಂ ಉಪಾಧ್ಯಕ್ಷರಾಗಿ ಡಿ.ನೇತ್ರಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಎಸ್ಸಿ ಮಹಿಳೆ ವರ್ಗಕ್ಕೆ ಮೀಸಲಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ನೇತ್ರಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಉಷಾ ಹಾಗೂ ಪಿಡಿಓ ಪರಮೇಶ್ ಘೋಷಿಸಿದರು. ಈ ವೇಳೆ ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಪುತ್ರ ಜಯಪ್ರಕಾಶ್, ಬಿದರಹಳ್ಳಿ ಗ್ರಾಪಂ ಅಧ್ಯಕ್ಷ ವೆಂಕಟಸ್ವಾಮಿ, ವಿಜಯಕುಮಾರ್, ಅಂಕನಾಯಕ, ನಾಗರತ್ನ, ಸತ್ಯ, ದೇವಮಣಿ, ರತ್ನಮ್ಮ, ಚನ್ನನಾಯಕ, ರತ್ನಮ್ಮ, ರಾಣಿ, ಕೆ.ಎಂ.ಸತೀಶ್, ರತ್ನಮ್ಮ, ಬಿ.ಶಿವಣ್ಣ, ಪುಟ್ಟಮ್ಮ, ಕುಮಾರ ಉಪಸ್ಥಿತರಿದ್ದರು.

ಹೊಸ ಅಗ್ರಹಾರ ಗ್ರಾಪಂಗೆ ಸೌಮ್ಯ ಅಧ್ಯಕ್ಷೆ



ಭೇರ್ಯ, ಡಿ.29– ಇಲ್ಲಿಗೆ ಸಮೀಪದ ಹೊಸ ಅಗ್ರಹಾರ ಗ್ರಾಪಂ ಅಧ್ಯಕ್ಷೆಯಾಗಿ ಸೌಮ್ಯ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದಿನ ಅಧ್ಯಕ್ಷೆ ಸುಕನ್ಯಾ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ಸೌಮ್ಯ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಪಶುಸಂಗೋಪನೆ ಇಲಾಖೆ ಸಹಾಯಕ ನಿರ್ದೇಶಕ ಡಾ.ಮಂಜುನಾಥ್ ಪ್ರಕಟಿಸಿದರು. ಪಿಡಿಓ ಕೆ.ಎಸ್.ಭಾಸ್ಕರ್, ಕಾರ್ಯದರ್ಶಿ ಕೆ.ಸಿ.ದೇವೇಂದ್ರಯ್ಯ, ಚುನಾವಣಾ ಕಾರ್ಯ ನಿರ್ವಹಿಸಿದರು.

ನೂತನ ಅಧ್ಯಕ್ಷೆ ಸೌಮ್ಯ ಮಾತನಾಡಿ, ಎಲ್ಲಾ ಸದಸ್ಯರ ವಿಶ್ವಾಸ ಪಡೆದು ಮಾದರಿ ಗ್ರಾಮ ಪಂಚಾಯಿತಿ ಮಾಡುವುದಾಗಿ ತಿಳಿಸಿದರು.

ಗ್ರಾಪಂ ಉಪಾಧ್ಯಕ್ಷ ಮಲ್ಲಿಕಾರ್ಜುನ್, ಸದಸ್ಯರಾದ ಡಿ.ಎಸ್.ಯೋಗೇಶ್, ಮಂಜೇಗೌಡ, ಹೆಚ್.ಎಂ.ರಾಮಚಂದ್ರ, ಶೇಖರ್, ಬೇಬಿ ಮಹೇಶ್, ಸುಕನ್ಯ, ಪುಷ್ಪಾ ಜಯರಾಂ, ಆಶಾರಾಣಿ, ಪೂರ್ಣಿಮಾ, ಮಹದೇವಮ್ಮ, ಜಯಲಕ್ಷ್ಮಿ, ತಾಲೂಕು ಜೆಡಿಎಸ್ ಅಧ್ಯಕ್ಷ ಕುಮಾರ್, ಜೆಡಿಎಸ್ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಕುಚೇಲ, ಜಿಪಂ ಮಾಜಿ ಸದಸ್ಯ ಸಿದ್ದಪ್ಪ, ಹರದನಹಳ್ಳಿ ಗ್ರಾಪಂ ಅಧ್ಯಕ್ಷೆ ನಂದಿನಿ, ಚೆನ್ನಂಗೆರೆ ಗ್ರಾಪಂ ಅಧ್ಯಕ್ಷೆ ಸವಿತಾ, ಲಾಳಂದೇವನಹಳ್ಳಿ ಗ್ರಾಪಂ ಸದಸ್ಯ ಬಾಲಾಜಿ ಗಣೇಶ್, ಎಂ.ಡಿ.ದಾಕ್ಷಾಯಿಣಿ, ಜೆಡಿಎಸ್ ಮುಖಂಡರಾದ ಪುಟ್ಟರಾಜು, ಧನಪಾಲ್, ಚಂದು, ಡೈರಿ ರಾಜು, ಮಹೇಶ್, ಹೆಚ್.ಎಸ್.ರಾಜು, ಡಾ.ಅರುಣ್ ಕುಮಾರ್, ಚಂದ್ರೇಗೌಡ, ನಂಜಪ್ಪ, ಹರದನಹಳ್ಳಿ ರಮೇಶ್, ಕಂಚಿನಕೆರೆ ದೇವು, ಬಸವರಾಜು ಇದ್ದರು.

ನಾಳೆ ಹನುಮ, ಕನಕದಾಸ ಜಯಂತಿ

ಭೇರ್ಯ, ಡಿ.29– ಇಲ್ಲಿಗೆ ಸಮೀಪದ ಗಂಧನಹಳ್ಳಿಯಲ್ಲಿ ಡಿ.31 ರಂದು ಸಂತಕವಿ ಭಕ್ತ ಕನಕದಾಸರ ಯುವಕ ಸಂಘದಿಂದ 13ನೇ ವರ್ಷದ ಹನುಮ ಹಾಗೂ ಕನಕದಾಸರ ಜಯಂತಿ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಗ್ಗೆ 9 ಗಂಟೆಗೆ ಹನುಮ ಹಾಗೂ ಕನಕದಾಸರ ಮೂರ್ತಿಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಗುವುದು. ಸಂಜೆ 4 ಗಂಟೆಗೆ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಸಾನ್ನಿಧ್ಯವನ್ನು ಕಾಗಿನೆಲೆ ಕನಕಗುರು ಪೀಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ವಹಿಸಿದ್ದಾರೆ. ಎಂಎಲ್‌ಸಿ ಅಡಗೂರು ವಿಶ್ವನಾಥ್ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಯತೀಂದ್ರ ಉದ್ಘಾಟಿಸಲಿದ್ದಾರೆ. ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್, ಮುಖ್ಯ ಅತಿಥಿಗಳಾಗಿ ಶಾಸಕರಾದ ಅನಿಲ್ ಚಿಕ್ಕಮಾದು, ಡಾ.ತಿಮ್ಮಯ್ಯ, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡ ಸ್ವಾಮೇಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ, ಮಾಜಿ ಮುಡಾ ಅಧ್ಯಕ್ಷ ಹೆಚ್.ಎನ್.ವಿಜಯಕುಮಾರ್, ಸಮಾಜಸೇವಕ ಆರ್‌ಟಿಓ ಮಲ್ಲಿಕಾರ್ಜುನ, ಜಿ.ಎಸ್. ವೆಂಕಟೇಶ್, ಐಶ್ವರ್ಯ ಮಹದೇವ್, ಸಿ.ಪಿ.ರಮೇಶ್, ಮಹದೇವಸ್ವಾಮಿ, ಯೋಗೇಶ್, ಮಂಜುನಾಥ್, ಗ್ರಾಪಂ ಅಧ್ಯಕ್ಷೆ ರಾಜಮ್ಮ, ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ, ತಾ.ಕುರುಬರ ಸಂಘದ ಮಾಜಿ ಅಧ್ಯಕ್ಷ ಜಿ.ಎನ್.ಮಲ್ಲೇಗೌಡ, ತಾ.ಕುರುಬರ ಸಂಘದ ಅಧ್ಯಕ್ಷ ಶಿವಣ್ಣ, ಮುಖಂಡರಾದ ಪ್ರಶಾಂತ್ ಜೈನ್, ತೋಟಪ್ಪನಾಯಕ, ಕೆ.ಶಿವಣ್ಣ, ಮಂಜುನಾಥ, ಮಹದೇವ್, ಸತೀಶ್, ಯೋಗೇಶ್, ದೇವೇಂದ್ರ, ಮಂಜುನಾಥ, ನಾಗರಾಜ್, ಅರುಣ್, ಕೆಂಪರಾಜು, ರವಿಶಂಕರ್ ಇನ್ನಿತರ ಹಲವು ಗಣ್ಯರು ಭಾಗವಹಿಸುವರು ಎಂದು ಸಂಘದ ಅಧ್ಯಕ್ಷ ಹೇಮಂತ್ ತಿಳಿಸಿದ್ದಾರೆ.


ಜ.2, ವೈಕುಂಠ ಏಕಾದಶಿ

ಚುಂಚನಕಟ್ಟೆ, ಡಿ.29– ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಶ್ರೀರಾಮ ದೇವಾಲಯದಲ್ಲಿ ಜ.2ರಂದು ವೈಕುಂಠ ಏಕಾದಶಿ ಪ್ರಯುಕ್ತ ವಿವಿಧ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಏಕಾದಶಿ ಪ್ರಯುಕ್ತ ಸೋಮವಾರ ಮುಂಜಾನೆಯಿಂದಲೇ ಸುಪ್ರಭಾತ ಅರಿಶಿಣ–ಕುಂಕುಮ, ಹಾಲು, ಮೊಸರು, ಎಳನೀರು, ಪಂಚಾಮೃತ ಅಭಿಷೇಕ ಸೇರಿದಂತೆ ಪವಿತ್ರ ಕಾವೇರಿ ನದಿಯಿಂದ ಸೀತಾ ಸಮೇತ ಶ್ರೀರಾಮ ಮೂರ್ತಿಗಳಿಗೆ ಅಭಿಷೇಕ ನಡೆಸಿ ಆನಂತರ ಅಲಂಕಾರ ಮಾಡಲಾಗುತ್ತದೆ. ಅನಂತರ ದೇವಾಲಯದ ಉತ್ಸವ ಮೂರ್ತಿಗಳನ್ನು ಮುಂಜಾನೆ 5.15ಕ್ಕೆ ಸ್ವರ್ಗ ದ್ವಾರದ ಮೂಲಕ ಕರೆತಂದು ಉತ್ಸವ ನಡೆಸಿ ಉಯ್ಯಾಲೆ ಉತ್ಸವ ಮಾಡಲಾಗುತ್ತದೆ. ಅಂದು ದೇವಾಲಯಕ್ಕೆ ಆಗಮಿಸುವ ಭಕ್ತರಿಗೆ ತೀರ್ಥ ಪ್ರಸಾದ ವ್ಯವಸ್ಥೆ ಮಾಡಲಾಗಿದೆ.

ಡಿಸಿ ಆದೇಶದ ಮೇರೆಗೆ ಮಳಿಗೆ ಹರಾಜು: ಆಯುಕ್ತೆ ಮಾನಸ

ಹರಾಜು ಮುಂದೂಡುವಂತೆ ಸದಸ್ಯರ ಪ್ರತಿಭಟನೆ



ಹುಣಸೂರು, ಡಿ.29– ನಗರಸಭೆ ವ್ಯಾಪ್ತಿಯ ವಾಣಿಜ್ಯ ಮಳಿಗೆಗಳನ್ನು ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಕಾನೂನು ಚೌಕಟ್ಟಿನಲ್ಲೇ ಹರಾಜು ಮಾಡಲಾಗಿದೆ ಎಂದು ನಗರಸಭೆ ಆಯುಕ್ತೆ ಮಾನಸ ತಿಳಿಸಿದರು.

ನಗರಸಭೆ ಸಭಾಂಗಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರದ ಬಿ.ಎಂ.ರಸ್ತೆಯ ದೇವಿಪ್ರಸಾದ್ ಹೋಟೆಲ್ ಎದುರಿನ ಮಳಿಗೆಗಳು ಹಾಗೂ ಸಂತೇಮಾಳದಲ್ಲಿರುವ ಮಾಂಸದ ಅಂಗಡಿ ಹರಾಜಿನಲ್ಲಿ ಬಿಡ್ ಆಗದೇ ಉಳಿದಿದೆ. ಇಂದಿನ ಹರಾಜೇ ಅಂತಿಮವಲ್ಲ. ನಗರಸಭೆ ಕೌನ್ಸಿಲ್ ಸಭೆಯಲ್ಲಿ ಈ ಬಗ್ಗೆ ಮಂಡಿಸಿ ಅನುಮೋದನೆ ಪಡೆದು ಸ್ಥಿರೀಕರಣಗೊಳಿಸಿದ ನಂತರ ಜಿಲ್ಲಾಧಿಕಾರಿಗಳ ಅನುಮೋದನೆ ನಂತರ ಅಧಿಕೃತಗೊಳಿಸಲಾಗುವುದು ಎಂದರು.

ಸದಸ್ಯರ ಪ್ರತಿಭಟನೆ: ಹರಾಜು ಪ್ರಕ್ರಿಯೆ ಬಗ್ಗೆ ಸಾರ್ವಜನಿಕರಿಗೆ ಸರಿಯಾದ ಮಾಹಿತಿ ನೀಡಿಲ್ಲ. ಹೀಗಾಗಿ ಹರಾಜು ಮುಂದೂಡುವಂತೆ ತಿಳಿಸಿದರೂ ಹರಾಜಿಗೆ ಮುಂದಾದ ಅಧಿಕಾರಿಗಳ ವಿರುದ್ಧ ನಗರಸಭಾ ಸದಸ್ಯರು ಇಲ್ಲಿನ ನಗರಸಭೆ ಎದುರು ಪ್ರತಿಭಟನೆ ನಡೆಸಿದರು.

ನಂತರ ಮಾತನಾಡಿದ ಸದಸ್ಯರು, ಮರು ಹರಾಜಿನ ಬಗ್ಗೆ ಇಲ್ಲಿನ ನೋಟೀಸ್ ಬೋರ್ಡ್‌ನಲ್ಲಿ ಆದೇಶ ಅಂಟಿಸಬೇಕಾಗಿತ್ತು, ಅಲ್ಲದೇ ನಗರದಲ್ಲಿ ಆಟೋದಲ್ಲಿ ಧ್ವನಿವರ್ಧಕದ ಮೂಲಕ ಪ್ರಚಾರ ಕೈಗೊಳ್ಳಬೇಕಿತ್ತು ಇದನ್ನು ಗಾಳಿಗೆ ತೂರಿ ನಗರಸಭೆ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಹರಾಜಿನ ಬಗ್ಗೆ ಸಾರ್ವಜನಿಕರಿಗೆ ಸಮರ್ಪಕ ತಿಳಿಯದ ಪರಿಣಾಮ ಮಳಿಗೆಗಳು ಕಡಿಮೆ ದರಕ್ಕೆ ಹರಾಜಾಗುವ ಮೂಲಕ ನಗರಸಭೆಗೆ ಲಕ್ಷಾಂತರ ರೂ. ನಷ್ಟವಾಗಿದೆ. ಹೀಗಾಗಿ ಈ ಹರಾಜು ಪ್ರಕ್ರಿಯೆ ಕೈಬಿಟ್ಟು ಮತ್ತೊಮ್ಮೆ ಹರಾಜು ನಡೆಸಬೇಕು ಎಂದು ಆಗ್ರಹಿಸಿ ನಗರಸಭಾಧ್ಯಕ್ಷೆ ಸೇರಿದಂತೆ 22 ಸದಸ್ಯರು ತಹಸೀಲ್ದಾರ್ ಹಾಗೂ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ವೇಳೆ ನಗರಸಭಾಧ್ಯಕ್ಷೆ ಗೀತಾ, ಉಪಾಧ್ಯಕ್ಷೆ ಆಶಾ, ಸಿರಾಜ್ ಪಾಷ, ರಿಜ್ವಾನ್, ಆಂಡಿ ಅಸ್ಲಾಂ, ಪರ್ವಿನ್ ತಾಜ್, ಶ್ರೀನಾಥ್, ಇಮ್ರಾನ್, ಸದಸ್ಯರಾದ ಜಬೀವುಲ್ಲಾ ಖಾನ್, ಸೈಯದ್ ಯೂನಸ್, ಕೃಷ್ಣರಾಜ ಗುಪ್ತ, ಮಂಜು, ಮಲ್ಲಿಕ್ ಪಾಷ, ಶೀನಾಥ್, ವಿವೇಕ್, ಶರವಣ, ಮನು, ರಾಣಿ ಪೆರುಮಾಳ್ ಸೇರಿದಂತೆ ಇನ್ನಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಒನ್ಸ್ ಅಪಾನ್ ಟೈಂ ಇನ್ ಜಮಾಲಿಗುಡ್ಡ (ಕ): ಬೆ.10.35ಕ್ಕೆ, ವೇದ (ಕ): ಮ.1ಕ್ಕೆ, ಸಂ.6.55ಕ್ಕೆ, ರಾ.9.55ಕ್ಕೆ, ಕಾಂತಾರ (ಕ): ಸಂ.4ಕ್ಕೆ.

ಸ್ಕ್ರೀನ್ 2 ಮೇಡ್ ಇನ್ ಬೆಂಗಳೂರು (ಕ): ಬೆ.10.40ಕ್ಕೆ, ಡ್ರೈವರ್ ಜಮುನಾ (ತ): ಮ.2.05ಕ್ಕೆ, ಒನ್ಸ್ ಅಪಾನ್ ಟೈಂ ಇನ್ ಇಮಾಲಿಗುಡ್ಡ (ಕ): ಸಂ.4.30ಕ್ಕೆ, ಲಕ್ಕಿ ಲಕ್ಷ್ಮಣ್ (ತೆ): ರಾ.7ಕ್ಕೆ, ಓ ಮೈ ಗೋಸ್ಟ್ (ತ): ರಾ.9.55ಕ್ಕೆ.

ಸ್ಕ್ರೀನ್ 3 ಸರ್ಕಸ್ (ಹಿಂ): ಬೆ.11.05ಕ್ಕೆ, ಪದವಿ ಪೂರ್ವ (ಕ): ಮ.1.55ಕ್ಕೆ, ನಾನು ಅದು ಮತ್ತು ಸರೋಜ (ಕ): ಸಂ.4.30ಕ್ಕೆ, ರಾಂಗಿ (ತ): ರಾ.7.10ಕ್ಕೆ, ಟಾಪ್ ಗೇರ್ (ತೆ): ರಾ.10.15ಕ್ಕೆ.

ಸ್ಕ್ರೀನ್ 4 ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.10.50ಕ್ಕೆ, ಮ.2.30ಕ್ಕೆ, ಸಂ.6.10ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1 ಒನ್ಸ್ ಅಪಾನ್ ಟೈಂ ಇನ್ ಇಮಾಲಿಗುಡ್ಡ (ಕ): ಬೆ.10.05ಕ್ಕೆ, ವೇದ (ಕ): ಮ.12.40ಕ್ಕೆ, ಮ.3.50ಕ್ಕೆ, ರಾ.7ಕ್ಕೆ, ರಾ.10.10ಕ್ಕೆ,

ಸ್ಕ್ರೀನ್ 2 ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.11ಕ್ಕೆ, ಮ.2.50ಕ್ಕೆ, ಸಂ.6.40ಕ್ಕೆ, ರಾ.10.30ಕ್ಕೆ,

ಸ್ಕ್ರೀನ್ 3 ವೇದ (ಕ): ಬೆ.9.50ಕ್ಕೆ, ಆಲ್ಫಾ (ಕ): ಮ.3.05ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಸಂ.5.40ಕ್ಕೆ, ರಾ.9.30ಕ್ಕೆ,

ಸ್ಕ್ರೀನ್ 4 ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.10ಕ್ಕೆ, ನಾನು ಅದು ಮತ್ತು ಸರೋಜ (ಕ): ಮ.1.40ಕ್ಕೆ, ಮೇಡ್ ಇನ್ ಬೆಂಗಳೂರು (ಕ): ಸಂ.4.20ಕ್ಕೆ, ಲವ್ ಸ್ಟೋರಿ 1998 (ಕ): ರಾ.7.55ಕ್ಕೆ, ಸೆಂಬಿ (ತ): ರಾ.10.20ಕ್ಕೆ,

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.

ಸ್ಕ್ರೀನ್ 2 ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.

ಸ್ಕ್ರೀನ್ 3 ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.

ಸ್ಕ್ರೀನ್ 4 ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ವೇದ (ಕ): ಬೆ.9ಕ್ಕೆ, ಮ.3.30ಕ್ಕೆ, ಸಂ.6.50ಕ್ಕೆ, ರಾ.10.10ಕ್ಕೆ, ಸರ್ಕಸ್ (ಹಿಂ): ಬೆ.9.55ಕ್ಕೆ, ಮ.12.20ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ, ಧಮಾಕ (ತೆ): ಬೆ.10ಕ್ಕೆ, ಸಂ.4ಕ್ಕೆ, ರಾ.10ಕ್ಕೆ, 18 ಪೇಜಸ್ (ತೆ): ಮ.1ಕ್ಕೆ, ರಾ.7ಕ್ಕೆ, ವಿಶಾಲ್ ಇನ್ ಲಾಠಿಚಾರ್ಜ್ (ತ): ಬೆ.10.22ಕ್ಕೆ, ಸಂ.4.20ಕ್ಕೆ, ರಾ.9.45ಕ್ಕೆ, ಕನೆಕ್ಟ್ (ತ): ರಾ.7.25ಕ್ಕೆ, ಕಾಪ (ಮ): ಮ.1.25ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.9.45ಕ್ಕೆ, ಬೆ.10.45ಕ್ಕೆ, ಮ.1.40ಕ್ಕೆ, ಮ.2.40ಕ್ಕೆ, ಸಂ.5.35ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವೇದ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಿಂಗ್‌ಡಂ ಆಫ್ ದಿ ಡೈನೋಸರಸ್ (ಇಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವೇದ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಟೆಂಪರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಲವ್ ಸ್ಟೋರಿ 1998 (ಕ)	4 ಪ್ರದರ್ಶನಗಳು
ಸಂಗಂ	
ಜಮಾಲಿಗುಡ್ಡ (ಕ)	4 ಪ್ರದರ್ಶನಗಳು
ಲಿಡೋ	
ನಾನು ಅದು ಮತ್ತು ಸರೋಜ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವೇದ (ಕ)	4 ಪ್ರದರ್ಶನಗಳು
ಪ್ರಭಾ	
ಕಾಂತಾರ (ಕ)	4 ಪ್ರದರ್ಶನಗಳು

ಪುನೀತೋತ್ಸವ: ಜಿಲ್ಲಾ ಮಟ್ಟದ ಕ್ರಿಕೆಟ್ ಪಂದ್ಯಾವಳಿ

ಮೈಸೂರು ಶಿವಂ ಬಾಯ್ಸ್ ತಂಡ ಪ್ರಥಮ



ತಿ.ನರಸೀಪುರ, ಡಿ.29– ತಾಲೂಕಿನ ಹಳೇ ಕೆಂಪಯ್ಯನಹುಂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ಕರ್ನಾಟಕ ರತ್ನ, ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಪುನೀತೋತ್ಸವ ಪ್ರಯುಕ್ತ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಮೈಸೂರು ಶಿವಂ ಬಾಯ್ಸ್ ತಂಡ ಪ್ರಥಮ ಸ್ಥಾನ ಗಳಿಸಿ 50 ಸಾವಿರ ರೂ. ಮತ್ತು ಟ್ರೋಫಿಯನ್ನು ತನ್ನದಾಗಿಸಿಕೊಂಡಿತು.

ಉಳಿದಂತೆ ಹಳೇ ಕೆಂಪಯ್ಯನಹುಂಡಿ ಬಾಯ್ಸ್ ದ್ವಿತೀಯ ಬಹುಮಾನ 30 ಸಾವಿರ ರೂ. ಮತ್ತು ಟ್ರೋಫಿ, ಸಂತೇಮರಹಳ್ಳಿ ಯುವಕರ ತಂಡ ತೃತೀಯ ಬಹುಮಾನ 20 ಸಾವಿರ ರೂ. ಮತ್ತು ಟ್ರೋಫಿ, ತಿ.ನರಸೀಪುರ ಹಂಟರ್ ಬಾಯ್ಸ್ ನಾಲ್ಕನೇ ಬಹುಮಾನ 10 ಸಾವಿರ ರೂ. ಮತ್ತು ಟ್ರೋಫಿ ಪಡೆದರು. ವಿಜೇತರಿಗೆ ಜೆಡಿಎಸ್ ಹಿರಿಯ ಮುಖಂಡ ಜವರಪ್ಪ ಹಾಗೂ ಮಹೇಶ್ ಬಹುಮಾನ ವಿತರಿಸಿದರು.

ಪಂದ್ಯಾವಳಿಯಲ್ಲಿ 30ಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದವು. ಪಂದ್ಯ ಪುರುಷ ಪ್ರಶಸ್ತಿ ಶಿವಂ ಬಾಯ್ಸ್ ಆಟಗಾರ ಮತ್ತು ಸರಣಿ ಶ್ರೇಷ್ಠ ಕೆಂಪಯ್ಯನಹುಂಡಿ ಆಟಗಾರನಿಗೆ ನೀಡಲಾಯಿತು. ಈ ವೇಳೆ ಪಂದ್ಯಾವಳಿ ಆಯೋಜಕರಾದ ಅಂದಾನಿಗೌಡ, ಮಧುಸೂದನ್, ಕೃಷ್ಣ, ರವಿ, ಸಂದೀಪ, ಕ್ರೀಡಾಪಟುಗಳು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಫಿಲಿಪೈನ್ಸ್‌ನಲ್ಲಿ ಭಾರೀ ಮಳೆ: 32 ಮಂದಿ ಸಾವು

ಮನಿಲಾ, ಡಿ.29– ಕ್ರಿಸ್‌ಮಸ್ ವಾರಾಂತ್ಯದಲ್ಲಿ ಫಿಲಿಪೈನ್ಸ್‌ನಲ್ಲಿ ತೀವ್ರ ಮಳೆಯಾಗುತ್ತಿದ್ದು, ಉಂಟಾಗಿರುವ ಪ್ರವಾಹದಿಂದ ಕನಿಷ್ಠ 32 ಮಂದಿ ಸಾವಿಗೀಡಾಗಿದ್ದಾರೆ ಮತ್ತು 24 ಮಂದಿ ಕಾಣೆಯಾಗಿದ್ದಾರೆ. ಮಳೆಯಿಂದಾಗಿ 56,000ಕ್ಕೂ ಹೆಚ್ಚು ಜನರನ್ನು ಸುರಕ್ಷಿತ ಸ್ಥಳಗಳಲ್ಲಿ ಆಶ್ರಯ ಪಡೆಯುತ್ತಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಾಗಮ್ಮ ನಿಧನ



ಹುಲ್ಲಹಳ್ಳಿ, ಡಿ.29–ಗ್ರಾಮದ ನಿವಾಸಿ ಲೇ.ಮದ್ದೇಗೌಡರ ಪತ್ನಿ ನಾಗಮ್ಮ(95) ಬುಧವಾರ ರಾತ್ರಿ ನಿಧನರಾದರು. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನೈಋತ್ಯ ರೈಲ್ವೆ

ಇ–ಟೆಂಡರ್ ಸೂಚನೆ ಸಂ.: MYS-COM-Pub-MUSCAF-22
ದಿನಾಂಕ: 20.12.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿ ಐಟಂ: ಮೈಸೂರು ರೈಲ್ವೆ ಮ್ಯೂಸಿಯಂನಲ್ಲಿ ಒಂದು ವರ್ಷದ ಅವಧಿಗೆ ಕೆಫೆಟೇರಿಯಾ ನಿರ್ವಹಣೆಗೆ ಗುತ್ತಿಗೆ ನೀಡಲು ಟೆಂಡರ್.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30.01.2023, 12.00 ಗಂಟೆಯವರೆಗೆ

For details log on: www.ireps.gov.in

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು/ಮೈಸೂರು
PUB/573/AAD/PRB/SWR/2022-23
S.W.Railways SWRRLY SWRRLY

32ನೇ ವರ್ಷದ ಚಿರಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 32 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಹಾಗೂ ನಿಮ್ಮ ಆಶೀರ್ವಾದ ನಮ್ಮ ಮೇಲೆ ಸದಾ ಇರಲಿ, ಎಂದು ಪ್ರಾರ್ಥಿಸುವ ನಿಮ್ಮ ಮಗ
ಹೆಚ್.ಟಿ.ಗೋವಿಂದರಾಜು
ಹಾಗೂ ಕುಟುಂಬವರ್ಗ, ಹುಣಸೂರು.

S.K.ತಮ್ಮಯ್ಯನವರು
ಟಿಂಬರ್ ಮರ್ಚೆಂಟ್
ಹುಣಸೂರು

ಕೈಲಾಸ ಗಣಾರಾಧನಾ ಆಹ್ವಾನ ಪತ್ರಿಕೆ



ಶ್ರೀ ಕೆ.ವಿ. ಶಿವಕುಮಾರ್

ನಂಜನಗೂಡು ಪಟ್ಟಣದ ನಾರಾಯಣ ಅಗ್ರಹಾರ ಕಾಲೋನಿಯ ಶ್ರೀ ಶಂಕರ್ ಸೌಂಡ್ಸ್ ಅಂಡ್ ಲೈಟಿಂಗ್ ಶಾಮಿಯಾನ ಸೆಂಟರ್ ಮಾಲೀಕರು. ಇವರು ದಿ:21:12:2022 ರಂದು ಶಿವೈಕ್ಯರಾದರೆಂದು ತಿಳಿಸಲು ವಿಷಾಧಿಸುತ್ತೇವೆ ತತ್ಸಂಬಂಧವಾಗಿ ದಿ: 31–12–2022 ರಂದು ಬೆ: 09 ಗಂಟೆಗೆ ಹರಗುರು ಶರಣರ ಪಾದಪೂಜೆಯೊಂದಿಗೆ ಕೈಲಾಸ ಶಿವಗಣಾರಾಧನೆಯನ್ನು ಸ್ವಗೃಹದಲ್ಲಿ ಏರ್ಪಡಿಸಲಾಗಿದೆ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಶಿವೈಕ್ಯರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ: ನಂಜನಗೂಡು ನಗರ ಹಾಗೂ ತಾಲ್ಲೂಕು ವಿದ್ಯುತ್ ದೀಪಾಲಂಕಾರ, ಧ್ವನಿವರ್ಧಕ ಶಾಮಿಯಾನ ಮಾಲೀಕರ ಸಂಘ ನಂಜನಗೂಡು.

29ನೇ ವರ್ಷದ ಸವಿನೆನಪು



ಶ್ರೀ ಎನ್.ಸಿದ್ದಯ್ಯ
ನಿಧನ: 30.12.1993

ನೀವು ನಮ್ಮನ್ನಗಲಿ ಇಂದಿಗೆ 29 ವರ್ಷಗಳಾಯಿತು ಸದಾ ನಿಮ್ಮ ನೆನಪಿನಲ್ಲಿರುವ ಪತ್ನಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗ

FOND REMEMBRANCE

"Of all the Gifts that life has to offer, A loving MOTHER is the Greatest of them all"



Smt. SAHADEVI P. ARMUGAM
DPHN., M.Sc.,N, (PhD.,N)

Founder AASHRITHA HOSPITAL, Neuro-Psychiatry, De-addiction and Rehabilitation. Retd., Principal, ANMTC, K.R. Hospital, Former Principal, Vishwabharathi Institute & College of Nursing, Mysore


CHANGE OF NAME

I, **Rashmi K.S.,** residing at # 1188, 1st Floor, 4th Cross, Aravinda nagara, Mysuru-570023, have changed my name from **Lokeshwari K** to **Rashmi K.S.** on my own freewill, sworn in before Notary L.N. Rajendran, vide affidavit dated **29th Dec. 2022.**

Sd/- Rashmi K.S.

ಅಭಿನಂದನೆಗಳು

Promotional Feature



ನೂತನ ಮುಡಾ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಯಶಸ್ವಿ ಸೋಮಶೇಖರ್ ರವರಿಗೆ ಅಭಿನಂದನೆಗಳು. ಶುಭಕೋರುವವರು: ಸಿವಿಲ್ ಡಿಸೈನ್ ವರ್ಕ್ ಗ್ರೂಪ್ಸ್ ವತಿಯಿಂದ ಶಕ್ತಿನಗರ ರವಿ ಎನ್., ಪಡುವಾರಹಳ್ಳಿ ರಾಘವೇಂದ್ರ.ಎಸ್, ಸಿದ್ಧರಾಜು.ಡಿ ಹಾಗೂ ಕ್ಯಾತಮಾರನಹಳ್ಳಿ ರವಿಕುಮಾರ್.ಕೆ, ಭಾಸ್ಕರ್, ಆನಂದ, ಕುಮಾರಸ್ವಾಮಿ.

ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ಸರ್ವೇ ನಂ. 124, ಯಡಪುರ ಗ್ರಾಮ, ಕಸಬಾ ಹೋಬಳಿ,
ಚಾಮರಾಜನಗರ – 571313

ಸಂಖ್ಯೆ: ಸಿಮ್ಸ್/ಟೆಂಡರ್/18/34/2022–23 ದಿನಾಂಕ: 26–12–2022

ಟೆಂಡರ್ ಅಧಿಸೂಚನೆ

ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿವಿಧ ವಿಭಾಗಗಳಿಗೆ ಅಗತ್ಯವಿರುವ ವಿವಿಧ ಪರಿಕರಗಳನ್ನು ಖರೀದಿಸಲು ಟೆಂಡರ್ ಆಹ್ವಾನಿಸಲಾಗುತ್ತಿದ್ದು, ಸದರಿ ಟೆಂಡರ್‌ಗಳ ವಿವರ ಕೆಳಕಂಡಂತಿರುತ್ತದೆ.

1) ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧನಾ ಆಸ್ಪತ್ರೆಯ ಕ್ಷಯರೋಗ ಮತ್ತು ಎದೆಗೂಡು ವಿಭಾಗಕ್ಕೆ ಅಗತ್ಯವಿರುವ ವೈದ್ಯಕೀಯ ಉಪಕರಣವನ್ನು ಖರೀದಿಸಲು ಮರು ಇ–ಟೆಂಡರ್ **(CIMS/Tender/TBC/ME/18/2022-23/Call-2)**, ಅಂದಾಜು ಮೊತ್ತ ರೂ. **46.66** ಲಕ್ಷಗಳು, ಇಎಂಡಿ ಮೊತ್ತ ರೂ. **93,320/-**, ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ: 28–12–2022, ಬೆಳಿಗ್ಗೆ 10.00 ಗಂಟೆ ಹಾಗೂ ಕೊನೆಯ ದಿನಾಂಕ: 16–01–2023 ಸಂಜೆ 5.30 ಗಂಟೆ, ಮತ್ತು

2. ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧನಾ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗಕ್ಕೆ ಅಗತ್ಯವಿರುವ ವೈದ್ಯಕೀಯ ಉಪಕರಣವನ್ನು, ಖರೀದಿಸಲು ಇ–ಟೆಂಡರ್ **(CIMS/Tender/OBG/ME/34/2022-23)**, ಅಂದಾಜು ಮೊತ್ತ ರೂ. 48.20 ಲಕ್ಷಗಳು, ಇಎಂಡಿ ಮೊತ್ತ ರೂ. 96,400/–, ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ: 28–12–2022, ಬೆಳಿಗ್ಗೆ 10–00 ಗಂಟೆ ಹಾಗೂ ಕೊನೆಯ ದಿನಾಂಕ: 16–01–2023 ಸಂಜೆ 5–30 ಗಂಟೆ.

ಹೆಚ್ಚಿನ ಮಾಹಿತಿಗಾಗಿ **www.eproc.karnataka.gov.in** ನಲ್ಲಿ ಸಂದರ್ಶಿಸುವುದು ಅಥವಾ ಕರ್ತವ್ಯದ ದಿನಗಳಲ್ಲಿ ಬೆಳಿಗ್ಗೆ: 10–00 ಗಂಟೆಯಿಂದ ಸಂಜೆ 5–00 ಗಂಟೆಯವರೆಗೆ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/– ನಿರ್ದೇಶಕರು ಹಾಗೂ ಡೀನ್
ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಾಮರಾಜನಗರ

ವಾಸಾಸಂಇ:ಚಾನಗರ:488:2022–23

ನಗರಸಭಾ ಕಾರ್ಯಾಲಯ, ಹೂಟಗಳ್ಳಿ, ಮೈಸೂರು

ಎಸ್.ಆರ್.ಎಸ್. ಸ್ಟೇಷನ್ ಎದುರು, ಹೈಟೆನ್ಷನ್ ಜೋಡಿ ರಸ್ತೆ, ಹೂಟಗಳ್ಳಿ, ಮೈಸೂರು ಜಿಲ್ಲೆ–570018
ದೂ: 0821–2001737, http://www.hootagallicity.mrc.gov.in, E-Mail: itstaff_ulb_hootagalli@yahoo.com

ಸಂ: ನಸಹೂ:ಘವನಿ:06/2022–23 ದಿನಾಂಕ: 28.12.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಕೆಟಿಟಿಪಿ ಆಕ್ಟ್ 2000ರ ನಿಯಮದಂತೆ ಹೂಟಗಳ್ಳಿ ನಗರಸಭೆಯ ಈ ಕೆಳಕಂಡ ಸೇವೆಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ನೋಂದಾಯಿತ ಸಂಸ್ಥೆ / ಗುತ್ತಿಗೆದಾರರು **http://eproc.karnataka.nic.in** ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗೆ ಕಛೇರಿಯಲ್ಲಿ ಸಂಪರ್ಕಿಸಬಹುದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 16.01.2023 ಸಂಜೆ 4.30 ಗಂಟೆ. ಟೆಂಡರ್ ತೆರೆಯುವ ದಿನಾಂಕ: 17.01.2023 ಸಂಜೆ 5.00 ಗಂಟೆ. (1) **DMA/2022-23/IND14780** : ಅಂದಾಜು ಮೊತ್ತ: ರೂ.3.75 ಲಕ್ಷ (2) **cmc/htgl/hs/03/2022-23** : ಅಂದಾಜು ಮೊತ್ತ: ರೂ.8.867 ಲಕ್ಷ (3) **DMA/2022-23/IND14827** : ಅಂದಾಜು ಮೊತ್ತ : ರೂ.2.24 ಲಕ್ಷ.

ಸಹಿ/–
ಪೌರಾಯುಕ್ತರು
ನಗರಸಭೆ, ಹೂಟಗಳ್ಳಿ

ವಾಸಾಸಂಇ/ಮೈಸೂರು/ಶಿರಡಿ ಸಾಯಿ/832/2022–23

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಜೆ.ಎಲ್.ಬಿ ರಸ್ತೆ, ಮೈಸೂರು.

ಸಂಖ್ಯೆ:ಮೈನಪ್ರಾ/ವಿ.ತ–7/2022–23 ದಿನಾಂಕ: 29.12.2022

ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಬ್ಯಾಂಕ್ & ಪಬ್ಲಿಕ್ ಸೆಕ್ಟರ್ ವೆಲ್‌ಫೇರ್ ಅಸೋಸಿಯೇಷನ್ (ರಿ.), ಮೈಸೂರು, ವತಿಯಿಂದ ಶ್ರೀ.ಬಿ.ರವಿಶಂಕರ್ ರೈ ರವರಿಗೆ ದಿನಾಂಕ: 04.06.1998 ರಂದು ಕೇರ್ಗಳ್ಳಿ (ಆರ್.ಟಿ.ನಗರ) ಬ್ಯಾಂಕ್ & ಪಬ್ಲಿಕ್ ಸೆಕ್ಟರ್ ವೆಲ್‌ಫೇರ್ ಅಸೋಸಿಯೇಷನ್ ಬಡಾವಣೆಯಲ್ಲಿ 40' x (60'.6"+60'3")/2 ಅಡಿ ಅಳತೆಯ ನಿವೇಶನ ಸಂಖ್ಯೆ: 486 ಮಂಜೂರಾಗಿರುತ್ತದೆ.

ಸದರಿ ನಿವೇಶನ ಮಂಜೂರಾತಿ ಸಂಸ್ಥೆಯಾದ ಬ್ಯಾಂಕ್ & ಪಬ್ಲಿಕ್ ಸೆಕ್ಟರ್ ವೆಲ್‌ಫೇರ್ ಅಸೋಸಿಯೇಷನ್ (ರಿ.), ಮೈಸೂರು. ಸಂಸ್ಥೆಯನ್ನು ವಿಸರ್ಜಿಸಿ ನಿವೇಶನ ಮಂಜೂರಾತಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿರುವುದರಿಂದ ಮಂಜೂರಾತಿದಾರರಿಗೆ ಕ್ರಯಪತ್ರ ನೀಡಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಸದರಿ ನಿವೇಶನಕ್ಕೆ ಸಂಬಂಧಿಸಿದಂತೆ, ಕ್ರಯಪತ್ರ ಪಡೆಯದೇ ಇರುವುದರಿಂದ ಕ್ರಯಪತ್ರ ಕೋರಿ ಶ್ರೀ.ಬಿ.ರವಿಶಂಕರ್ ರೈ ರವರು ಸಲ್ಲಿಸಿದ ಮನವಿ ಮತ್ತು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ : 19099/2021 ರ ಆದೇಶದಂತೆ ಶ್ರೀ.ಬಿ.ರವಿಶಂಕರ್ ರೈ ರವರಿಗೆ ಕ್ರಯಪತ್ರ ನೀಡುವ ಕುರಿತು ಯಾರಿಂದಾದರೂ ತಕರಾರು ಏನಾದರೂ ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಆಕ್ಷೇಪಣೆ ಸಲ್ಲಿಸಬಹುದು. ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಮುಂದಿನ ಕ್ರಮ ವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್
ವಲಯ ಕಛೇರಿ – 7
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.